ಹಟ್ಟಿ ಚಿನ್ನದ ಗಣಿ :
ಚಾರಿತ್ರಿಕ ಹಾಗೂ ಸಮಾಜೋ ಆರ್ಥಿಕ ಅಧ್ಯಯನ

(ಕನ್ನಡ ವಿಶ್ವವಿದ್ಯಾಲಯಕ್ಕೆ ಸಲ್ಲಿಸಿದ ಎಂ.ಫಿಲ್.ಪ್ರಬಂಧ)

ಸಂಶೋಧಕರು

ವಿಜಯಲಕ್ಷ್ಮೀ

ಮಾರ್ಗದರ್ಶಕರು

ಡಾ. ಎನ್. ಚಿನ್ನಸ್ವಾಮಿ ಸೋಸಲೆ

ಹಿರಿಯ ಶ್ರೇಣಿ ಅಧ್ಯಾಪಕರು

ಚರಿತ್ರೆ ಅಧ್ಯಯನ ವಿಭಾಗ

ಕನ್ನಡ ವಿಶ್ವವಿದ್ಯಾಲಯ, ಹಂಪಿ

ವಿದ್ಯಾರಣ್ಯ

ಚರಿತ್ರೆ ಅಧ್ಯಯನ ವಿಭಾಗ

ಸಮಾಜ ವಿಜ್ಞಾನ ನಿಕಾಯ

ಕನ್ನಡ ವಿಶ್ವವಿದ್ಯಾಲಯ, ಹಂಪಿ

ವಿದ್ಯಾರಣ್ಯ

೨೦೦೬

117

ಹಟ್ಟಿ ಚಿನ್ನದ ಗಣಿ:

ಚಾರಿತ್ರಿಕ ಹಾಗೂ ಸಮಾಜೋ ಆರ್ಥಿಕ ಅಧ್ಯಯನ

(ಕನ್ನಡ ವಿಶ್ವವಿದ್ಯಾಲಯಕ್ಕೆ ಸಲ್ಲಿಸಿದ ಎಂ.ಫಿಲ್.ಪ್ರಬಂಧ)

ಸಂಶೋಧಕರು
ವಿಜಯಲಕ್ಷ್ಮೀ

ಮಾರ್ಗದರ್ಶಕರು
ಡಾ. ಎಸ್. ಚಿನ್ನಸ್ವಾಮಿ ಸೋಸಲೆ
ಹಿರಿಯ ಶ್ರೇಣಿ ಅಧ್ಯಾಪಕರು
ಚರಿತ್ರೆ ಅಧ್ಯಯನ ವಿಭಾಗ
ಕನ್ನಡ ವಿಶ್ವವಿದ್ಯಾಲಯ, ಹಂಪಿ
ವಿದ್ಯಾರಣ್ಯ

ಚರಿತ್ರೆ ಅಧ್ಯಯನ ವಿಭಾಗ
ಸಮಾಜ ವಿಜ್ಞಾನ ನಿಕಾಯ
ಕನ್ನಡ ವಿಶ್ವವಿದ್ಯಾಲಯ, ಹಂಪಿ
ವಿದ್ಯಾರಣ್ಯ

೨೦೦೭

ದೃಢೀಕರಣ ಪತ್ರ

ಕುಮಾರಿ ವಿಜಯಲಕ್ಷ್ಮೀ ಇವರು ಹಟ್ಟಿ ಚಿನ್ನದ ಗಣಿ:ಚಾರಿತ್ರಿಕ ಹಾಗೂ ಸಮಾಜೋ ಆರ್ಥಿಕ ಅಧ್ಯಯನ ಎಂಬ ಶೀರ್ಷಿಕೆಯ ಎಂ.ಫಿಲ್. ಪ್ರಬಂಧವನ್ನು ನನ್ನ ಮಾರ್ಗದರ್ಶನದಲ್ಲಿ ಸಿದ್ಧಪಡಿಸಿರುತ್ತಾರೆ. ಕನ್ನಡ ವಿಶ್ವವಿದ್ಯಾಲಯದ ಚರಿತ್ರೆ ಅಧ್ಯಯನ ವಿಭಾಗಕ್ಕೆ ಎಂ.ಫಿಲ್. ಪದವಿಗಾಗಿ ಈ ಪ್ರಬಂಧವನ್ನು ಸಲ್ಲಿಸಲಾಗುತ್ತಿದೆ. ಇದರ ಯಾವುದೇ ಭಾಗವನ್ನು ಈ ಮೊದಲು ಯಾವುದೇ ಪದವಿಗಾಗಿ ಅಥವಾ ಇತರೇ ಉದ್ದೇಶಗಳಿಗಾಗಿ ಬಳಸಿಕೊಂಡಿಲ್ಲವೆಂದು ದೃಢೀಕರಿಸುತ್ತೇನೆ.

ದಿನಾಂಕ:

ಸ್ಥಳ: 20.06.06

ಡಾ. ಎನ್. ಚಿನ್ನಸ್ವಾಮಿ ಸೋಸಲೆ

ಮಾರ್ಗದರ್ಶಕರು ಹಾಗೂ ಹಿ.ಶ್ರೇ.ಅಧ್ಯಾಪಕರು

ಚರಿತ್ರೆ ಅಧ್ಯಯನ ವಿಭಾಗ

ಕನ್ನಡ ವಿಶ್ವವಿದ್ಯಾಲಯ, ಹಂಪಿ.

ಡಾ. ಎನ್. ಚಿನ್ನಸ್ವಾಮಿ ಸೋಸಲೆ
ಹಿ.ಶ್ರೇ.ಅಧ್ಯಾಪಕ, ಚರಿತ್ರೆ ವಿಭಾಗ
ಕನ್ನಡ ವಿಶ್ವವಿದ್ಯಾಲಯ, ಹಂಪಿ
ವಿದ್ಯಾರಣ್ಯ - 583 276

ಪ್ರಮಾಣ ಪತ್ರ

ಹಟ್ಟಿ ಚಿನ್ನದ ಗಣಿ:ಚಾರಿತ್ರಿಕ ಹಾಗೂ ಸಮಾಜೋ ಆರ್ಥಿಕ ಅಧ್ಯಯನ ಎಂಬ ಶೀರ್ಷಿಕೆಯ ಎಂ.ಫಿಲ್. ಪ್ರಬಂಧವನ್ನು ಡಾ. ಎನ್. ಚಿನ್ನಸ್ವಾಮಿ ಸೋಸಲೆ ಅವರ ಮಾರ್ಗದರ್ಶನದಲ್ಲಿ ಸಿದ್ಧಪಡಿಸಿ, ಎಂ.ಫಿಲ್. ಪದವಿಗಾಗಿ ಕನ್ನಡ ವಿಶ್ವವಿದ್ಯಾಲಯದ ಚರಿತ್ರೆ ಅಧ್ಯಯನ ವಿಭಾಗಕ್ಕೆ ಸಲ್ಲಿಸುತ್ತಿದ್ದೇನೆ. ಈ ಪ್ರಬಂಧದ ವಿಷಯವನ್ನು ಅಥವಾ ಇದರ ಯಾವುದೇ ಭಾಗವನ್ನು ಈ ಮೊದಲು ಯಾವುದೇ ಪದವಿ ಅಥವಾ ಇತರೇ ಉದ್ದೇಶಗಳಿಗೆ ಬಳಸಿಕೊಂಡಿಲ್ಲವೆಂದು ಪ್ರಮಾಣಿಕರಿಸುತ್ತೇನೆ.

ದಿನಾಂಕ: 20/06/06

ಸ್ಥಳ: ವಿದ್ಯಾರಣ್ಯ

ವಿಜಯಲಕ್ಷ್ಮೀ
ಸಂಶೋಧಕರು
ಚರಿತ್ರೆ ಅಧ್ಯಯನ ವಿಭಾಗ
ಕನ್ನಡ ವಿಶ್ವವಿದ್ಯಾನಿಲಯ, ಹಂಪಿ

ಪರಿವಿಡಿ

ಅಧ್ಯಾಯ ಒಂದು

ಅಧ್ಯಯನದ ಉದ್ದೇಶ ಮತ್ತು ವ್ಯಾಪ್ತಿ

ಅಧ್ಯಾಯ ಒಂದು
ಅಧ್ಯಯನದ ಉದ್ದೇಶ ಮತ್ತು ವ್ಯಾಪ್ತಿ

೧. ಪ್ರಸ್ತಾವನೆ

ಪ್ರಪಂಚದಾದ್ಯಂತ ಭೂಗರ್ಭದಲ್ಲಿ ಅನೇಕ ರೀತಿಯ ಖನಿಜಗಳು ಸಂಪನ್ಮೂಲಗಳು ಅಡಗಿಕೊಂಡಿದ್ದು, ಇದು ನಿಸರ್ಗವಿತ್ತ ಕೊಡುಗೆಯಾಗಿದೆ. ಭೂಮಿಯ ಬಗೆದು ಅನೇಕ ಸಂಪನ್ಮೂಲಗಳನ್ನು ಮನುಕುಲವು ಬಳಸಿಕೊಂಡಿದ್ದು ಕೂಡ ಬುದ್ಧಿವಂತಿಕೆಯನ್ನು ಕುರಿತು ಸೂಚಿಸುವಂತಹದ್ದು. ಖನಿಜ ಸಂಪನ್ಮೂಲಗಳಲ್ಲಿ ಚಿನ್ನವೂ ಒಂದಾಗಿದೆ. ಇದು ಒಂದೇ ಕಡೆ ದೊರಕುವಂತಹುದಲ್ಲ. ತನ್ನದೇ ವೈಶಿಷ್ಟ್ಯ ಗುಣಗಳಿಂದ ಮಿಶ್ರಣಗೊಂಡ ಕಲ್ಲಿನಲ್ಲಿ ದೊರಕುವಂತಹುದಾಗಿದೆ.

ಪ್ರಪಂಚದಾದ್ಯಂತ ಚಿನ್ನದ ನಿಕ್ಷೇಪಗಳಿರುವುದನ್ನು ಗುರುತಿಸಬಹುದು. ೧೯೮೧ ರಲ್ಲಿ ನಡೆಸಿದ ಸರ್ವೇಕ್ಷಣೆಯಿಂದ ಪ್ರಪಂಚದ ಎಲ್ಲಾ ರಾಷ್ಟ್ರಗಳ ಚಿನ್ನದ ಸಂಪನ್ಮೂಲಗಳ ಅಂದಾಜು ಮೊತ್ತ ೩೨.೨೫೪ ಮೆಟ್ರಿಕ್ ಟನ್ನುಗಳು ಅಥವಾ ೧೦೪೦ ದಶಲಕ್ಷ ಟ್ರಾಯ್ ಜಾನ್ಸ್‌ಗಳು. ದಕ್ಷಿಣ ಆಫ್ರಿಕಾ, ರಷ್ಯಾ, ಅಮೇರಿಕಾ, ಆಸ್ಟ್ರೇಲಿಯಾ, ಕೆನಡಾ [೧]ಇವು ಚಿನ್ನದ ನಿಕ್ಷೇಪಗಳನ್ನು ಹೊಂದಿರುವಂತ ಪ್ರಮುಖ ರಾಷ್ಟ್ರಗಳು. ದಕ್ಷಿಣ ಆಫ್ರಿಕಾ ಸುಮಾರು ೭೦೦ ದಶಲಕ್ಷ ಟ್ರಾಯ್ ಜಾನ್ಸ್ ಚಿನ್ನದ ನಿಕ್ಷೇಪಗಳನ್ನು, ರಷ್ಯಾ ದೇಶವು ೩೦೦ ದಶಲಕ್ಷ ಟ್ರಾಯ್ ಜಾನ್ಸ್ ಚಿನ್ನದ ನಿಕ್ಷೇಪಗಳನ್ನು ಪಡೆದರೆ, ಆಸ್ಟ್ರೇಲಿಯಾ ೩೮೧.೬ ಮೆಟ್ರಿಕ್ ಟನ್ನು ಚಿನ್ನದ ಸಂಗ್ರಹ ಹೊಂದಿದೆ. ಅಮೇರಿಕಾದ ಚಿನ್ನದ ಅದಿರು ನಿಕ್ಷೇಪಗಳ ಒಟ್ಟು ಚಿನ್ನದ ಮೊತ್ತ ಸುಮಾರು ೧೪೦೦ ಮೆಟ್ರಿಕ್ ಟನ್ನುಗಳು. ಇವು ಪ್ರಪಂಚದಲ್ಲಿಯೇ ಅತಿ ಹೆಚ್ಚು ಚಿನ್ನ ಉತ್ಪಾದಿಸುವ ರಾಷ್ಟ್ರಗಳಾಗಿವೆ. ಜಗತ್ತಿನಾದ್ಯಂತ ಇತರ ರಾಷ್ಟ್ರಗಳಲ್ಲಿಯೂ ಚಿನ್ನದ ನಿಕ್ಷೇಪಗಳು ಹಂಚಿಕೊಂಡಿದ್ದು, ಅವುಗಳೆಂದರೆ, ದಕ್ಷಿಣ ಅಮೇರಿಕಾ, ದಕ್ಷಿಣ ಆಫ್ರಿಕಾ, ಚೈನಾ, ಫಾರ್‌ಈಸ್ಟ್(ಫಿಲಿಫೈನ್ಸ್ ಜಪಾನ್) ಮೊದಲಾದವುಗಳಾಗಿವೆ.[೧] ಮೇಲಿನ ರಾಷ್ಟ್ರಗಳಿಗೆ ಹೋಲಿಸಿದರೆ ಭಾರತದಲ್ಲಿ ಅತಿ ಕಡಿಮೆ ಚಿನ್ನ ದೊರೆಯುತ್ತಿದೆ. ಭಾರತದಲ್ಲಿ ಚಿನ್ನವನ್ನು ಚಾರಿತ್ರಿಕ ಪೂರ್ವಕಾಲದಿಂದಲೇ ಉತ್ಪಾದಿಸುತ್ತಿದ್ದರು. ಇಂದಿಗೂ ಕೂಡ ದೇಶದ ನಾನಾ ಕಡೆಗಳಲ್ಲಿ ಪುರಾತನ ಗಣಕಾರ್ಯಾಚರಣೆಗಳು ನಡೆದಿದ್ದು, ಚಿನ್ನದ ನಿಕ್ಷೇಪಗಳ ಸ್ಥಳಗಳು ಕಂಡುಬರುತ್ತಲಿವೆ. ಭಾರತದಲ್ಲಿ ಚಿನ್ನದ ನಿಕ್ಷೇಪವು ಹಲವು ರಾಜ್ಯಗಳಲ್ಲಿ ಕಂಡುಬರುತ್ತದೆ. ಆಂಧ್ರಪ್ರದೇಶ, ಬಿಸಾನತ್ತಂ, ಕರ್ನಾಟಕದ ಬೆಳ್ಳಾರ, ಕೇರಳ ಮತ್ತು ತಮಿಳುನಾಡಿನ ವೈನಾಡು, ಮಧ್ಯಪ್ರದೇಶ,

ಬಿಹಾರ, ಉತ್ತರಪ್ರದೇಶ, ಪಂಜಾಬ್, ಹಿಮಾಚಲ ಪ್ರದೇಶ, ಜಮ್ಮು ಕಾಶ್ಮೀರ ರಾಜ್ಯಗಳಾಗಿವೆ. ಪ್ರಸ್ತುತ ಸಂದರ್ಭದಲ್ಲಿ ಕರ್ನಾಟಕ ರಾಜ್ಯವೊಂದರಲ್ಲೇ ಚಿನ್ನ ಅತಿ ಹೆಚ್ಚು ಉತ್ಪನ್ನವಾಗುತ್ತಿರುವುದು. ಚಿನ್ನದ ನಿಕ್ಷೇಪಗಳು ಕರ್ನಾಟಕಕ್ಕೆ ಪ್ರಕೃತಿಯು ಕೊಟ್ಟಿರುವ ಒಂದು ಅಮೂಲ್ಯ ವರದಾನ. ಕರ್ನಾಟಕದ ಬಹುತೇಕ ಎಲ್ಲಾ ಜಿಲ್ಲೆಗಳ ಕೆಲವು ಪ್ರದೇಶಗಳಲ್ಲಿ ಚಿನ್ನದ ನಿಕ್ಷೇಪಗಳಿವೆ. ಸುಮಾರು ೨೦೦೦ ವರ್ಷಗಳ ಹಿಂದಿನಿಂದಲೂ ಗಣಿಗಾರಿಕೆ ನಡೆಸಿ ಬಿಟ್ಟಿರುವ ಪುರಾತನ ಗಣಿಗಳ ಕುರುಹುಗಳು ದೊರಕಿವೆ. ಅವುಗಳೆಂದರೆ ಗುಲ್ಬರ್ಗಾ, ರಾಯಚೂರು, ಚಿತ್ರದುರ್ಗ, ಮೈಸೂರು, ಬಿಜಾಪುರ, ಕೋಲಾರ, ಗದಗ ಈ ಮೇಲಿನ ಜಿಲ್ಲೆಗಳಲ್ಲಿ ಚಿನ್ನಕ್ಕಾಗಿ ಗಣಿಮಾಡಿರುವ ಅನೇಕ ಸಾಕ್ಷ್ಯಾಧಾರಗಳು ಲಭ್ಯವಾಗಿವೆ.[೨] ಪ್ರಸ್ತುತ ಸಂದರ್ಭದಲ್ಲಿ ಕರ್ನಾಟಕದಲ್ಲಿ ಚಿನ್ನ ಉತ್ಪಾದಿಸುತ್ತಿರುವ ಪ್ರದೇಶಗಳೆಂದರೆ ಕೋಲಾರ ಹಾಗೂ ರಾಯಚೂರು ಜಿಲ್ಲೆಯ ಹಟ್ಟಿ. ನೂರು ವರ್ಷಕ್ಕೂ ಹೆಚ್ಚು ಕಾಲ ಚಿನ್ನ ಉತ್ಪಾದಿಸುತ್ತ ಬಂದಿದ್ದ ಕೋಲಾರ ಚಿನ್ನದ ಗಣಿಯು ಪ್ರಸ್ತುತ ಸಂದರ್ಭದಲ್ಲಿ ಸ್ಥಗಿತಗೊಂಡಿದೆ. ಕಾರಣ ಗಣಿಯಲ್ಲಿ ಬರುವ ಆದಾಯಕ್ಕಿಂತ ಖರ್ಚು ಅಧಿಕವಾಗಿದ್ದು, ಉತ್ಪಾದನೆ ಕಡಿಮೆ ಮಟ್ಟದ್ದಾಗಿರುವುದರಿಂದ ಸದ್ಯಕ್ಕೆ ಕೆಲಸ ಕಾರ್ಯಗಳು ನಿಂತಿರುವುದನ್ನು ಕಾಣಬಹುದು. ಪ್ರಸ್ತುತ ರಾಯಚೂರು ಜಿಲ್ಲೆಯ ಹಟ್ಟಿ ಚಿನ್ನದ ಗಣಿ ಒಂದೇ ಕರ್ನಾಟಕದಲ್ಲಿ ಹೆಚ್ಚಿನ ಪ್ರಮಾಣದಲ್ಲಿ ಹಾಗೂ ಉತ್ಕೃಷ್ಟವಾದ ಚಿನ್ನವನ್ನು ಉತ್ಪಾದಿಸುತ್ತದೆ.

ಹಟ್ಟಿ ಚಿನ್ನದ ಗಣಿಗೆ ಪ್ರಾಚೀನ ಇತಿಹಾಸವಿದ್ದು ಅದನ್ನು ದಾಖಲಿಸುವ ಒಂದು ಪ್ರಯತ್ನವೇ ಈ ಅಧ್ಯಯನದ ಉದ್ದೇಶವಾಗಿದೆ. ಹಟ್ಟಿ ಚಿನ್ನದ ಗಣಿಯ ಚಾರಿತ್ರಿಕ ಅಧ್ಯಯನವು ಮೂರು ಹಂತಗಳಲ್ಲಿ ವಿವರಿಸುತ್ತಾ ಹೋಗಬಹುದು. ಪ್ರಾಚೀನ ಗಣಿಗಾರಿಕೆಯನ್ನು ವಿವರಿಸುವಂತಹ ಯಾವುದೇ ಪ್ರಾಥಮಿಕ ಆಧಾರಗಳು ಲಭ್ಯವಾಗಿಲ್ಲ. ದೊರೆತಿರುವಂತಹ ಪುರಾತನ ಗಣಿಗಳ ಕುರುಹುಗಳಾದ ಕಲ್ಲುಗಳು, ಕುಟ್ಟಣಿಗಳು, ಒರಳುಕಲ್ಲು, ಮರದ ದಿಮ್ಮಿಯಿಂದ ಪ್ರಾಚೀನ ಗಣಿಕಾರ್ಯಾಚರಣೆಯನ್ನು ಕುರಿತು ವಿವರಿಸಲು ಸಾಧ್ಯ. ಶೇಕಡವಾರು ಎಷ್ಟು ಚಿನ್ನ ಬಳಸಿಕೊಂಡಿದ್ದರು, ಯಾವ ಉಪಕರಣಗಳ ಮೂಲಕ ಚಿನ್ನ ಸಂಸ್ಕರಿಸಿಕೊಳ್ಳುತ್ತಿದ್ದರು ಎಂಬುದರ ಬಗ್ಗೆ ಸ್ಪಷ್ಟವಾದ ಮಾಹಿತಿ ದೊರಕುವುದಿಲ್ಲ. ಪ್ರಾಚೀನ ಗಣಿ ಕಾರ್ಮಿಕರು ಯಂತ್ರೋಪಕರಣಗಳ ಸಹಾಯವಿಲ್ಲದೆ ೬೪೦ ಅಡಿ ಆಳದವರೆಗೆ ತೋಡಿರುವುದು ಅಂದು ವಿಶ್ವಕ್ಕೆ ದಾಖಲೆಯೆನ್ನಬಹುದು. ಅದೇ ರೀತಿ ಮಧ್ಯಕಾಲೀನ ಭಾರತದಲ್ಲಿ ಗಣಿಗಾರಿಕೆಯನ್ನು ಕುರಿತು ವಿವರಿಸುವಾಗ ಹೈದ್ರಾಬಾದ್ ನಿಜಾಮ್ ಸರ್ಕಾರದ ಕಾರ್ಯಾಚರಣೆಯನ್ನು ಕುರಿತು ಅಧ್ಯಯನಿಸುವಂತಹದ್ದು. ಈ ಅವಧಿಯಲ್ಲಿ ಹಟ್ಟಿ ಗಣಿಯು ಸ್ವಲ್ಪಮಟ್ಟಿನ ಅಭಿವೃದ್ಧಿ ಮತ್ತು ಬದಲಾವಣೆಗಳೆರಡನ್ನೂ ಕಂಡಿತು. ಅದರ ಜೊತೆಗೆ ಚಿನ್ನದ ಮಾರಾಟದ ಮೇಲಿನ ನಿರ್ಬಂಧದಿಂದ ಅನೇಕ ಸಮಸ್ಯೆಗಳನ್ನು ಎದುರಿಸಿದೆ.

ನಿಜಾಮ್ ಸರ್ಕಾರಕ್ಕೆ ಎರವಲು ಸೇವೆಯ ಮೇಲೆ ಆಯ್ಕೆಯಾಗಿದ್ದ ಕ್ಯಾಪ್ಟನ್ ಲಿಯೋನಾರ್ಡ್‌ಮನ್ ಅನೇಕ ಸಮಾಜೋಪಯೋಗಿ ಕೆಲಸಗಳನ್ನು ಮಾಡುತ್ತಾ ಚಿನ್ನದ ಗಣಿಯನ್ನು ಕುರಿತು ಬಹಳಷ್ಟು ವಿವರಣೆಯನ್ನು ನೀಡಿದ್ದಾನೆ.[೬] ಪ್ರಾಚೀನ ಕಾಲದಲ್ಲಿ ಗಣಿಕಾರ್ಯವು ತುಂಬಾ ಕಷ್ಟಕರವಾಗಿತ್ತು. ಪ್ರತಿಯೊಂದು ಕೆಲಸವೂ ಮಾನವ ಶಕ್ತಿಯಿಂದಲೇ ನಡೆಯುವುದಾಗಿದ್ದಿತು. ಆದರೆ ಇಂದು ಆ ಜಾಗವನ್ನು ಯಂತ್ರೋಪಕರಣಗಳು ಆಕ್ರಮಿಸಿಕೊಂಡಿವೆ. ಒಂದು ದೃಷ್ಟಿಯಿಂದ ಇದು ಉತ್ತಮ ಬೆಳವಣಿಗೆಯೆಂದು ಕಂಡುಬಂದರೂ ಸಹ ಮತ್ತೊಂದು ದೃಷ್ಟಿಯಿಂದ ಮಾನವರಿಗೆ ಅನೇಕ ತೊಂದರೆಯನ್ನು ತಂದೊಡ್ಡಿದೆ. ಇದಕ್ಕೆ ಇಂದಿನ ಜ್ವಲಂತ ಸಮಸ್ಯೆಗಳೇ ಉದಾಹರಣೆಯಾಗಿವೆ. ನಿರುದ್ಯೋಗ, ಸೋಮಾರಿತನ, ಕಳ್ಳತನ, ಅರಾಜಕತೆ, ಗ್ರಾಮಗಳ ದುಸ್ಥಿತಿ ಇತ್ಯಾದಿಗಳನ್ನು ವಿವರಿಸಬಹುದು. ಪ್ರಸ್ತುತ ಸಂದರ್ಭದಲ್ಲಿ ಹಟ್ಟಿ ಗಣಿ ಕಂಪನಿಯು ಹೆಚ್ಚುವರಿ ಉತ್ಪಾದನೆಯನ್ನು ಮಾಡುತ್ತಿರುವುದು ಕಂಡು ಬರುತ್ತದೆ. ಒಟ್ಟು ಕಾರ್ಮಿಕರುಗಳ ಸಂಖ್ಯೆ ಸುಮಾರು ೪೦೦೦ ಆಗಿದ್ದು, ಭಾರತದಲ್ಲಿಯೇ ಹಟ್ಟಿ ಚಿನ್ನದ ಗಣಿ ಕಂಪನಿ ಅತಿ ದೊಡ್ಡ ಕಂಪನಿಯಾಗಿ ಕಾರ್ಯ ನಿರ್ವಹಿಸುತ್ತಿದೆ.

೨. ಮಹತ್ವ ಹಾಗೂ ಉದ್ದೇಶ

ಕರ್ನಾಟಕ ರಾಜ್ಯದ ಪ್ರಸಿದ್ಧ ಎರಡನೇ ಚಿನ್ನದ ಗಣಿಯಾಗಿರುವ ಹಟ್ಟಿಯು ಚಾರಿತ್ರಿಕ ಹಾಗೂ ಆಧುನಿಕ ಕಾಲದ ಉಜ್ವಲ ಚರಿತ್ರೆಯ ಮುಂಚೂಣಿಯಾಗಿದೆ. ಅಶೋಕನ ಶಾಸನದಲ್ಲಿ (ಬ್ರಹ್ಮಗಿರಿ) ಉಲ್ಲೇಖವಾಗಿರುವ ಸುವರ್ಣಗಿರಿ ಎಂಬ ಪದದಿಂದ ಪ್ರಾರಂಭವಾಗಿ ಇಂದು ಆಧುನಿಕ ಚಿನ್ನದ ಗಣಿ ಕಾರ್ಯದವರೆಗೆ ವಿವಿಧ ಚರಿತ್ರೆಯ ಮಹತ್ವವನ್ನು ತನ್ನದಾಗಿಸಿಕೊಂಡಿದ್ದರೂ ಸಹ ಇದರ ಕುರಿತು ನಡೆದಿರುವ ಅಧ್ಯಯನ ಕಡಿಮೆಯೇ ಎಂದರೆ ತಪ್ಪಾಗಲಾರದು. ಹಟ್ಟಿ ಚಿನ್ನದ ಗಣಿಯ ಚಾರಿತ್ರಿಕ ಅಧ್ಯಯನದಲ್ಲಿ ಅದರ ಭೌಗೋಳಿಕ ಹಿನ್ನೆಲೆ, ಗಣಿಯ ಉಗಮ ಮತ್ತು ಅದರ ಹಿನ್ನೆಲೆ ಹಾಗೂ ಗಣಿಯ ಉಚ್ಛ್ರಾಯ ಕಾಲವನ್ನು ಹಂತಹಂತವಾಗಿ ಅಧ್ಯಯನಿಸಲು ನಿರ್ಧರಿಸಿಕೊಳ್ಳಲಾಗಿದೆ. ಹಟ್ಟಿ ಗಣಿಯ ಪುರಾತನ ಮಾಹಿತಿಯನ್ನು ಕುರಿತಂತೇ ಸಂಗ್ರಹಿಸಿದ ಕ್ಯಾಪ್ಟನ್ ಮನ್ ರವರ ಟಿಪ್ಪಣಿಯನ್ನು ಕೂಡ ಬಳಸಿಕೊಳ್ಳಲಾಗಿದೆ. ಹೈದ್ರಾಬಾದ್ ದೋ-ಅಬ್ ಪ್ರಾಂತ್ಯಕ್ಕೆ ಕುಡಿಯುವ ನೀರಿನ ಸಮಸ್ಯೆಯನ್ನು ಹೋಗಲಾಡಿಸಿ ಅನೇಕ ಸಾವಿರಾರು ಬಾವಿಗಳನ್ನು ತೋಡಿಸಿ ಜನರ ಮೆಚ್ಚುಗೆಗೆ ಪಾತ್ರನಾದನು. ಇವನ ಸಾಧನೆಯನ್ನು ಸ್ಮರಿಸಿ ನಿಜಾಮ್ ಸರ್ಕಾರ 'ಸಾವಿರ ಬಾವಿಗಳ ದೊರೆ' ಅಥವಾ 'ಬಾವಡಿ ಸಾಬ್' ಎಂದು ಬಿರುದು ನೀಡಿ ಗೌರವಿಸಲಾಗಿತ್ತು.

ಪ್ರಸ್ತುತ ಅಧ್ಯಯನವನ್ನು ಕೇವಲ ಚಾರಿತ್ರಿಕ ಅಧ್ಯಯನಕ್ಕೆ ಮಾತ್ರ ಸೀಮಿತಗೊಳಿಸದೆ, ಗಣಿಕಾರ್ಮಿಕರ ಸಾಮಾಜಿಕ, ಆರ್ಥಿಕ ಪರಿಸ್ಥಿತಿಗಳನ್ನು ಕುರಿತು ಅಧ್ಯಯನಿಸಲು ನಿರ್ಧರಿಸಿಕೊಳ್ಳಲಾಗಿದೆ.

೩. ಅಧ್ಯಯನದ ವ್ಯಾಪ್ತಿ

ಕರ್ನಾಟಕದಲ್ಲಿ ವಿಶೇಷವಾಗಿ ಚಿನ್ನದ ನಿಕ್ಷೇಪಗಳಿರುವುದು ಕೋಲಾರ ಹಾಗೂ ರಾಯಚೂರು ಜಿಲ್ಲೆಯ ಹಟ್ಟಿ ಪ್ರದೇಶಗಳಲ್ಲಿ. ಅಧ್ಯಯನದ ದೃಷ್ಟಿಯಿಂದ ರಾಯಚೂರಿನ ಹಟ್ಟಿ ಗಣಿಯನ್ನು ಮಾತ್ರ ಅಧ್ಯಯನ ಮಾಡಲು ನಿರ್ಧರಿಸಿಕೊಳ್ಳಲಾಗಿದೆ. ಹಟ್ಟಿ ಚಿನ್ನದ ಗಣಿ ಕಂಪನಿಯ ಶಾಖೆಯಾಗಿ ಚಿತ್ರದುರ್ಗ ಗಣಿ ಕಂಪನಿಯೂ ಕಾರ್ಯನಿರ್ವಹಿಸುತ್ತಿದೆ. ಹಟ್ಟಿಯ ಸುತ್ತಮುತ್ತಲು ಸುಮಾರು ೩೦೦ ಕ್ಕೂ ಹೆಚ್ಚು ಪುರಾತನ ಗಣಿಯ ಕುರುಹುಗಳು ದೊರೆತಿವೆ. ಹಾಗೂ ಕೆಲವು ಅವಶೇಷಗಳು ದೊರೆತಿವೆ. ಹಟ್ಟಿ ಚಿನ್ನದ ಗಣಿಯ ವ್ಯಾಪ್ತಿಯಲ್ಲಿ ವಂದಲಿ, ಕರಡೋಣಿ, ಚಿಂಚರಕೆ, ಹೊನ್ನಳ್ಳಿ, ಹೊನ್ನಕುಣಿ, ಮುಂತಾದ ಹಳ್ಳಿಗಳು ಬರುತ್ತವೆ. ಆರಂಭದಲ್ಲಿ ವಂದಲಿಯಲ್ಲಿ ಗಣಿಕಾರ್ಯಾಚರಣೆ ನಡೆಯುತ್ತಿತ್ತು. ೧೯೫೦ ರ ನಂತರ ಯಂತ್ರಗಳ ಜೋಡಣೆಯನ್ನು ಹಟ್ಟಿಯಲ್ಲಿ ಮಾಡಿರುವುದರಿಂದ ವಂದಲಿಯಿಂದ ಹಟ್ಟಿಗೆ ವರ್ಗಾಯಿಸಲ್ಪಟ್ಟಿತು. ಪ್ರಸ್ತುತ ಹಟ್ಟಿ ಗಣಿಯನ್ನು ೩,೭೦೦ ಅಡಿ ಆಳದವರೆಗೂ ಅಗೆಯಲಾಗಿದೆ. ಹಟ್ಟಿ ಗಣಿಯ ವ್ಯಾಪ್ತಿಯಲ್ಲಿ ಬರುವ ಚಿನ್ನದ ನಿಕ್ಷೇಪಗಳ ವಿವರಣೆಯನ್ನು ಅಧ್ಯಯನದ ಕೊನೆಯಲ್ಲಿ ಭೂಪಟಗಳ ಮೂಲಕ ತೋರಿಸಲಾಗಿದೆ. ಹಟ್ಟಿ-ಮಸ್ಕಿ ಶಿಲಾ ಜಾಡೆಂದೇ ಹೆಸರುವಾಸಿಯಾಗಿರುವ ಹಟ್ಟಿ ಚಿನ್ನ ಹಸಿರು ಮಿಶ್ರಿತ ಕಲ್ಲಿನಲ್ಲಿ ಚಿನ್ನ ದೊರೆಯುತ್ತದೆ. ಹಟ್ಟಿಗೆ ೮ ಕಿ.ಮೀಟರ್ ದೂರದಲ್ಲಿ ಊಟಿ ಎಂಬ ಹಳ್ಳಿಯಿದೆ. ಇಲ್ಲಿ ಭೂಮಿಯನ್ನು ಅಗೆಯದೇ ತೆರದ ಗಣಿಗಾರಿಕೆಯು ಇತ್ತೀಚೆಗಷ್ಟೇ ಆರಂಭವಾಗಿದೆ. ಹಟ್ಟಿ ಗಣಿಯ ಉತ್ಪಾದನೆ ಹೆಚ್ಚಲು ಊಟಿಯಿಂದ ಬಂದಿರುವ ಅದಿರಿನಿಂದಲೇ ಇರಬಹುದು. ಹಟ್ಟಿ ಗಣಿ ಕಂಪನಿಯು ದಿನಕ್ಕೆ ೮ ರಿಂದ ೧೦ ಕೆ.ಜಿ. ಚಿನ್ನವನ್ನು ಅದಿರಿನಿಂದ ಸಂಸ್ಕರಿಸುತ್ತದೆ ಎಂದು ಕಂಪನಿಯ ಮೂಲಗಳು ತಿಳಿಸಿವೆ.

ಅಡಿಟಿಪ್ಪಣಿಗಳು

೧. ಕರ್ನಾಟಕದ ಖನಿಜ ಸಂಪತ್ತು, ಸಿ.ಬಿ.ರಾಧಾಕೃಷ್ಣ, ಪು.೨೪-೨೫

೨. ಅದೇ. ಕೆ.ಗವಿಕಟ್ಟಿ, ಪು.೧೪೦ ರಿಂದ ೧೪೭

೩. ಭಿಲ್ಲಮ ಸ್ಮರಣ ಸಂಚಿಕೆ - ಪು.೭೪ ರಿಂದ ೭೫

೪. ಕಂಪನಿಯ ಮೂಲಗಳಿಂದ ಮಾಹಿತಿ ಸಂಗ್ರಹಣೆ

೫. ಸ್ಥಳೀಯ ವ್ಯಕ್ತಿಗಳ ಹೇಳಿಕೆಗಳ ಸಂಗ್ರಹಣೆ

ಅಧ್ಯಾಯ ಎರಡು
ಹಟ್ಟಿ ಚಿನ್ನದ ಗಣಿಯ ಚಾರಿತ್ರಿಕ ಹಿನ್ನೆಲೆ

ಅಧ್ಯಾಯ ಎರಡು

ಹಟ್ಟಿ ಚಿನ್ನದ ಗಣಿಯ ಚಾರಿತ್ರಿಕ ಹಿನ್ನೆಲೆ

ಪ್ರಪಂಚದ ಪ್ರಾಚೀನ ನಾಗರೀಕತೆಗಳು ಎಂದು ಹೆಸರುವಾಸಿಯಾಗಿರುವ ಮೆಸಪಟೋಮಿಯಾ, ಈಜಿಪ್ಟ್, ಸಿಂಧೂ ಬಯಲಿನ ನಾಗರೀಕತೆಯ ಜನರಿಗೆ ದಕ್ಷಿಣ ಭಾರತದಿಂದ ಚಿನ್ನ ರಫ್ತಾಗುತ್ತಿತ್ತು. ಈ ರಫ್ತಾಗುವ ಚಿನ್ನ ಕೋಲಾರ ಹಾಗೂ ಹಟ್ಟಿ ಪ್ರದೇಶಗಳದಾಗಿತ್ತು ಎಂದು ದಾಖಲೆಗಳಿಂದ ತಿಳಿದು ಬರುತ್ತದೆ. ಕರ್ನಾಟಕದಲ್ಲಿ ಕ್ರಿ.ಶ. ೩ನೇ ಶತಮಾನದಲ್ಲಿ ಕೋಲಾರ ಪ್ರದೇಶದಲ್ಲಿ ಚಿನ್ನವನ್ನು ಶೋಧಿಸಿ ಹೊರಕ್ಕೆ ತೆಗೆಯುತ್ತಿದ್ದರೆಂದು ಅನೇಕ ಆಧಾರಗಳಿಂದ ತಿಳಿದು ಬರುತ್ತದೆ.

ರಾಯಚೂರು ಜಿಲ್ಲೆಯ ಲಿಂಗಸ್ಗೂರು ತಾಲೂಕಿನ ಹಟ್ಟಿ ಚಿನ್ನದ ಗಣಿಯು ಕ್ರಿ.ಪೂ.೪ ಮತ್ತು ೩ ನೇ ಶತಮಾನದಷ್ಟು ಪ್ರಾಚೀನ ಕಾಲದ್ದು. ಮೌರ್ಯ ಮತ್ತು ಶಾತವಾಹನರ ಅರಸರುಗಳಿಗೆ ಈ ಚಿನ್ನದ ಗಣಿಯು ಚಿನ್ನದ ಪೂರೈಕೆ ಮಾಡಿದ್ದು ಮತ್ತು ಆಗಿನ ಜನರು ಗಣಿ ಮಾಡಿರುವ ಕುಶಲಮತಿಯು ಬೆರುಗುಗೊಳಿಸುವಂತಹುದು.[೧] ಹಟ್ಟಿ ಚಿನ್ನದ ಗಣಿಗೆ ಅತ್ಯಂತ ಪ್ರಾಚೀನ ಚರಿತ್ರೆಯಿದೆ. ಹಟ್ಟಿ ಚಿನ್ನದ ಗಣಿಯ ಸುತ್ತಮುತ್ತಲು ಎರಡುನೂರಕ್ಕೂ ಹೆಚ್ಚು ಪುರಾತನ ಗಣಿಗಳು ಇರುವುದು ಕ್ಯಾಪ್ಟನ್ ಲಿಯೋನಾರ್ಡ್‌ಮನ್ ವರದಿಯಿಂದ ತಿಳಿದು ಬರುತ್ತದೆ. ಅವುಗಳೆಂದರೆ ವಂದಲಿ, ಹೊನ್ನಳ್ಳಿ, ಚಿಂಚರ್ಕ, ಬುದ್ದಿನ್ನಿ, ಕರಡೋಣಿ, ಹಟ್ಟಿ ಮುಂತಾದವುಗಳು.[೨]

ಪ್ರೊ.ಎಚ್.ಎಲ್.ನಾಗೇಗೌಡರು ತಮ್ಮ ಪ್ರವಾಸಿ ಕಂಡ ಇಂಡಿಯಾ ಸಂಪುಟ ಒಂದರಲ್ಲಿ ಇತಿಹಾಸದ ಪಿತಾಮಹರಾದ ಹಿರೋಡಾಟಸ್‌ರವರು ಚಿನ್ನದ ಗಣಿಗಾರಿಕೆಯನ್ನು ಕುರಿತಂತೆ ಅಭಿಪ್ರಾಯವನ್ನು ಸಂಗ್ರಹಿಸಿದ್ದಾರೆ. ಭಾರತ ದೇಶದ ಜನಸಂಖ್ಯೆ ಎಲ್ಲಾ ರಾಷ್ಟ್ರಗಳ ಜನಸಂಖ್ಯೆಗಿಂತ ಹೆಚ್ಚು, ಜನಸಂಖ್ಯೆಗೆ ತಕ್ಕಂತೆ ಈ ದೇಶದವರು ಪರ್ಷಿಯಾ ರಾಜನಿಗೆ ಮುನ್ನೂರರವತ್ತು ಟ್ಯಾಲೇಂಟುಗಳಷ್ಟು ಚಿನ್ನದ ಧೂಳನ್ನು ಪೊಗದಿಯಾಗಿ ಕೊಡುತ್ತಿದ್ದರು. ಇಂಡಿಯಾ ದೇಶದ ಉತ್ತರದ ಕಡೆಗೆ ವಾಸಮಾಡುವವರು ಬಾಕ್ಟ್ರೀಯಾ ದೇಶದವರಂತೆ ಜೀವನ ನಡೆಸುತ್ತಾರೆ. ಇವರೇ ಚಿನ್ನವನ್ನು ತೆಗೆಯುವ ಸಮರೋತ್ಸಾಹಿಗಳು. ಈ ರೀತಿಯ ಕಥೆ ಹೆಣೆಯಲಾಗಿದ್ದನ್ನು ಕಾಣಬಹುದು.[೩]

ರಾಯಚೂರು ಜಿಲ್ಲೆಯ ಲಿಂಗಸ್ಗೂರು ತಾಲ್ಲೂಕಿನ ಮಸ್ಕಿಯ ಬ್ರಹ್ಮಗಿರಿ ಶಾಸನವನ್ನು ಹೊರತು ಪಡಿಸಿದರೆ ಇನ್ನ್ಯಾವ ಶಾಸನದಲ್ಲಿಯೂ ಚಿನ್ನದ ಗಣಿ ಕುರಿತು ಪ್ರಸ್ತಾಪವಾಗಿರುವುದು ಕಂಡುಬರುವುದಿಲ್ಲ. ಈ ಶಾಸನದಲ್ಲಿ 'ಸುವರ್ಣಗಿರಿ' ಎಂಬ ಹೆಸರು ರಾಯಚೂರಿನ ಮಸ್ಕಿ ಬಳಿಯ ಸ್ವರ್ಣಭರಿತ ಗುಡ್ಡಗಳನ್ನು ಕುರಿತೇ ಇರಬಹುದೆಂದು ಪ್ರೊ.ಆಲ್ಚಿನ್‌ರವರ ವಾದವಾಗಿದೆ. ನವ ಶಿಲಾಯುಗದಲ್ಲಿ ಎಂದರೆ ಕ್ರಿ.ಪೂ.

೩ನೇ ಸಹಸ್ರಮಾನದ ಕೊನೆಯಲ್ಲಿ ಪ್ರಾರಂಭವಾಗಿ ೧ ನೇ ಸಹಸ್ರಮಾನದ ಮೊದಲರ್ಧದವರೆಗೆ ಸಣ್ಣ ಪ್ರಮಾಣದಲ್ಲಿ ಚಿನ್ನದ ಗಣಿಗಾರಿಕೆ ಪ್ರಾರಂಭವಾಗಿರಬೇಕೆಂದು, ಆ ನಂತರ ಮೌರ್ಯರು ದಖಿನ್ ಪ್ರಾಂತ್ಯವನ್ನು ಆಳುವ ಹೊತ್ತಿಗೆ ಚಿನ್ನದ ಗಣಿಗಾರಿಕೆ ದೊಡ್ಡ ಪ್ರಮಾಣದಲ್ಲಿ ನಡೆದಿರಲು ಸಾಧ್ಯ.[೯] ಡಾ.ಚಿದಾನಂದ ಮೂರ್ತಿಯವರು ಕನ್ನಡ ಶಾಸನಗಳ ಸಾಂಸ್ಕೃತಿಕ ಅಧ್ಯಯನ ಕೃತಿಯಲ್ಲಿ, ಮಸ್ಕಿ ಶಾಸನದ ವಿವರಣೆಯ ಸಂದರ್ಭದಲ್ಲಿ "ಬೆಳೆಗೆಯ್ಯಿಂ ಪೊಂಗ್ಣೆಯಿಂ ಫಲತರುವಿಂದೊಳ್ಪರದ ಸಿರಿ ಬಲ್ಲಕುಂದೆ ನಾಳಸರ್ದಿರ್ಕುಂ" ಎಂದು ಉಲ್ಲೇಖಿದ ವಿವರಣೆಯನ್ನು ವಿವರಿಸಿದ್ದಾರೆ. ಲಿಂಗಸ್ಗೂರಿನ ಹಟ್ಟಿಯು ಬಹು ಪ್ರಾಚೀನವಾದ ಚಿನ್ನದ ಗಣಿಯಾಗಿದೆ. ಅದರಲ್ಲಿ ಹಿಂದಿನವರು ಶ್ರಮಿಸಿ ಚಿನ್ನ ತೆಗೆದಿದ್ದರು. ಆಧುನಿಕ ಕಾಲದಲ್ಲಿ ಈ ಗಣಿಗಳಿಂದ ಚಿನ್ನದ ಅದಿರು ತೆಗೆಯುವಾಗ ಮಡಿಕೆಯ ಚೂರುಗಳು, ಜಾಲಿಯಮರದ ತುಂಡುಗಳು ಸಿಕ್ಕಿದ್ದು ಆಗಾಗ್ಗೆ ತುಂಬುತ್ತಿದ್ದ ನೀರನ್ನು ಮಡಿಕೆಯಿಂದ ಸಾಗಿಸುತ್ತಿದ್ದರೆಂದು ಕಾಣುತ್ತದೆ. ಬಂಡೆಗಳು ಸಿಡಿದು ಅಥವಾ ಕಳಚಿಬಿದ್ದು ಗಣಿಕೆಲಸಗಾರರಿಗೆ ಪ್ರಾಣಹಾನಿಯಾಗದಂತೆ ಮರದ ದಿಮ್ಮಿಗಳನ್ನು ಜೋಡಿಸುತ್ತಿದ್ದರು. ಇದನ್ನೆಲ್ಲ ಪರಿಶೀಲಿಸಿದರೆ ಪ್ರಾಚೀನರಿಗೆ ಗಣಿ ಉದ್ಯಮದಲ್ಲಿ ವಿಶೇಷ ಪರಿಶ್ರಮವಿದ್ದಂತೆ ತಿಳಿದು ಬರುತ್ತದೆ.[೧೦]

ಪ್ರಸ್ತುತ ಕಂಪನಿಯಲ್ಲಿ ಪ್ರಾಚೀನ ಕುರುಹುಗಳನ್ನು ನೋಡಿದರೆ ಮೇಲಿನ ಮಾತು ಸತ್ಯವೆಂದು ಕಂಡುಬರುತ್ತದೆ. ಅಶೋಕನ ಬ್ರಹ್ಮಗಿರಿ ಶಾಸನದಲ್ಲಿ ಸ್ವರ್ಣಗಿರಿಯ ಉಲ್ಲೇಖವಿರುವುದು ಕನಕಗಿರಿಯನ್ನು ಕುರಿತು ವಿವರಿಸುವಂತಹದ್ದು ಎಂದು ಕೆಲವು ಇತಿಹಾಸಕಾರರ ಅಭಿಪ್ರಾಯವಾಗಿದೆ. ಇದು ಕೆಲವು ಸನ್ನಿವೇಶಗಳಲ್ಲಿ ಉತ್ಪ್ರೇಕ್ಷೆಗೆ ಎಡೆಮಾಡಿ ಕೊಡುತ್ತದೆ. ಈ ಹಂತದಲ್ಲೂ ಇನ್ನೂ ಹೆಚ್ಚಿನ ಸಂಶೋಧನೆ ನಡೆಯಬೇಕಾಗಿದೆ. ಕ್ರಿ.ಶ.೧೮೭೪ ರಲ್ಲಿ ಬ್ರಿಟೀಷ್ ಅಧಿಕಾರಿಯಾದ ರಾಬರ್ಟ್‌ಬ್ರೂಸ್‌ಫೂಟ್ ಈ ಭಾಗದಲ್ಲಿನ ಭೂ ಸಂಶೋಧಕರಾಗಿ ಆಯ್ಕೆಯಾಗಿದ್ದರು. ಭಾರತ ಭೂ ಸರ್ವೇಕ್ಷಣೆ ಅಧಿಕಾರಿಗಳಾಗಿ ಕಾರ್ಯನಿರ್ವಹಿಸಿ ಮೇಲ್ಭಾಗದ ಪುರಾತನ ಶಿಲಾ ಪದರುಗಳನ್ನು ಮೊದಲಬಾರಿಗೆ ಗುರುತಿಸಿಕೊಟ್ಟವರು ಬ್ರೂಸ್‌ಫೂಟ್‌ರವರೇ. ರಾಜ್ಯದ ನಾನಾ ಕಡೆಗಳಲ್ಲಿದ್ದ ಬಹುತೇಕ ಎಲ್ಲಾ ಹಳೆಯ ಚಿನ್ನದ ಗಣಿಗಳಿರುವುದನ್ನು ಗುರುತಿಸಿದರು. ಇದರಿಂದ ಎಲ್ಲಾಕಡೆ ಚಿನ್ನದ ಸಂಶೋಧನೆಗಳು ಪ್ರಾರಂಭವಾದವು. ಹಟ್ಟಿ ಸುತ್ತಮುತ್ತಲಿನ ಪುರಾತನ ಚಿನ್ನದ ಗಣಿಗಳನ್ನು ಹೈದ್ರಾಬಾದ್ ನಿಜಾಮ್ ಸರ್ಕಾರಕ್ಕೆ ಎರವಲು ಸೇವೆಯ ಮೇಲೆ ಆಯ್ಕೆಯಾಗಿದ್ದ ಭೂ ವಿಜ್ಞಾನಿ ಸಲಹೆಗಾರನಾದ ಕ್ಯಾಪ್ಟನ್ ಲಿಯೋನಾರ್ಡ್‌ಮನ್‌ರವರು ಸಮೀಕ್ಷೆ ನಡೆಸಿ ಗಣಿಗಳ ಪ್ರಾಚೀನ ಇತಿಹಾಸ ಸಾರುವಂತಹ ಅಮೂಲ್ಯ ಮಾಹಿತಿಯನ್ನು ನೀಡಿದ್ದಾರೆ.

೨.೧ ಹಟ್ಟಿ ಚಿನ್ನದ ಗಣಿಯ ಭೌಗೋಳಿಕ ಹಿನ್ನೆಲೆ

ಕರ್ನಾಟಕದಲ್ಲಿ ಚಿನ್ನದ ನಿಕ್ಷೇಪವು ಹಲವು ಜಿಲ್ಲೆಗಳಲ್ಲಿ ಹಂಚಿಕೆಯಾಗಿದೆ. ಅವುಗಳೆಂದರೆ ಕೋಲಾರ, ರಾಯಚೂರು ಜಿಲ್ಲೆಯ ಹಟ್ಟಿ, ಗದಗ, ಧಾರವಾಡ, ಶಿವಮೊಗ್ಗ ವಲಯ, ಚಿತ್ರದುರ್ಗ, ಬೆಳಗಾವಿ, ಬಳ್ಳಾರಿ, ಚಿಕ್ಕಮಗಳೂರು, ಗುಲ್ಬರ್ಗಾ, ಹಾಸನ, ಮಂಡ್ಯ, ಮೈಸೂರು ಇತ್ಯಾದಿ. ಆದರೆ ಈ

ಮೇಲಿನ ಎಲ್ಲಾ ಜಿಲ್ಲೆಗಳಲ್ಲಿ ಗಣಿ ಕಾರ್ಯ ಮಾಡಿ ಬಿಟ್ಟಿರುವಂತಹ ಪುರಾತನ ಕುರುಹುಗಳಿಂದ ಈ ವಿಷಯ ತಿಳಿದುಬರುತ್ತದೆ.[೬]

ಅಧ್ಯಯನದ ದೃಷ್ಟಿಯಿಂದ ಹಟ್ಟಿ ಚಿನ್ನದ ಗಣಿಗೆ ಮಾತ್ರ ಗಮನ ಹರಿಸಲಾಗುವುದು. ಭಾರತ ಸರ್ಕಾರದ ಅಂಕಿ-ಸಂಖ್ಯೆಗಳ ಪ್ರಕಾರ ರಾಯಚೂರು ಜಿಲ್ಲೆಯ ಭೌಗೋಳಿಕ ವಿಸ್ತಾರವು ೧೪,೦೧೩ ಚ.ಮೀ. ಅಂದರೆ ೫೪೧೦ ಚದರ ಮೈಲುಗಳಾಗಿವೆ. ಕರ್ನಾಟಕ ರಾಜ್ಯದ ಜಿಲ್ಲೆಗಳಲ್ಲಿ ಭೂ-ವಿಸ್ತಾರದಲ್ಲಿ ರಾಯಚೂರು ಜಿಲ್ಲೆಯು ಮೂರನೇ ಸ್ಥಾನವನ್ನು ಹೊಂದಿದೆ. ಪಶ್ಚಿಮಕ್ಕೆ ೮೦ ಕಿ.ಮೀ. ದೂರದಲ್ಲಿ ಹಟ್ಟಿಯ ಬಳಿ ಚಿನ್ನದ ನಿಕ್ಷೇಪವಿದ್ದು, ಹಟ್ಟಿಗಣಿಗಳ ವಿಸ್ತಾರ ೨.೧೨ ಚದರ ಕಿ.ಮೀ.ಗಳು. ಉದ್ದ ೨.೪೪ ಕಿ.ಮೀ. ಅಗಲ ೨.೧೨ ಕಿ.ಮೀ. ಹಟ್ಟಿ ಗಣಿಯ ಚಿನ್ನವಿರುವ ನೆಲೆಗಳನ್ನು ಒಂಭತ್ತು ಭಾಗಗಳಲ್ಲಿ ವಿಂಗಡಿಸಲಾಗಿದೆ.

ರಾಯಚೂರು ಜಿಲ್ಲೆಯ ಉತ್ತರದಲ್ಲಿ ಕಲಬುರ್ಗಿ, ಪಶ್ಚಿಮದಲ್ಲಿ ವಿಜಾಪುರ ಹಾಗೂ ಧಾರವಾಡ, ಪೂರ್ವದಲ್ಲಿ ಆಂಧ್ರಪ್ರದೇಶದ ಮೆಹಬೂಬ್ ನಗರ ಜಿಲ್ಲೆ ಹಾಗೂ ತುಂಗಭದ್ರನದಿ ದಕ್ಷಿಣದ ಗಡಿಗಳಾಗಿವೆ. ರಾಯಚೂರಿಗೆ ಮುಂಚೆ, ರಾಚವೂರು, ಪೆರ್ಮನಾಚೂರು ಹಾಗೂ ರಾಯಚೂರು ಎಂಬ ಹೆಸರಿತ್ತೆಂದು, ಹೊಯ್ಸಳರ ಕಾಲದ ಕೆಲವು ಶಾಸನಗಳಿಂದ ತಿಳಿದು ಬರುತ್ತದೆ. ಬೇಲೂರಿನ ೧೧೬೧ ನೇ ಇಸ್ವಿಗೆ ಹಾಗೂ ಒಂದನೇ ನರಸಿಂಹನ ಆಳ್ವಿಕೆಗೆ ಸಂಬಂಧಿಸಿದ ಹುಲಿಕೇರಿ ಶಾಸನದಲ್ಲಿ ಹೊಯ್ಸಳ ವಿಷ್ಣುವರ್ಧನ ದೊರೆ ಗೆದ್ದುಕೊಂಡ ಸ್ಥಳಗಳಲ್ಲಿ ರಾಯಚೂರು ಒಂದಾಗಿತ್ತೆಂದು ತಿಳಿಸಲಾಗಿದೆ. ರಾಚ ಹಾಗು ಊರು ಸೇರಿ ರಾಚವೂರು ಎಂಬ ಹೆಸರು ಬಳಕೆಗೆ ಬಂದಿತು. ರಾಚವೂರು ರಾಜನ ಊರು ಎಂಬ ಅರ್ಥವನ್ನು ಪಡೆದಿತ್ತು. ರಾಯಚೂರು ಜಿಲ್ಲೆಯ ಇತಿಹಾಸವು ವಿಜಯನಗರ ಸಾಮ್ರಾಜ್ಯದವರೆಗೂ ಮುಂದುವರೆಯುತ್ತದೆ. ರಾಯಚೂರಿನ ಇತಿಹಾಸವು ಕ್ರಿ.ಪೂ. ೨೦೦೦ ವರ್ಷಗಳಷ್ಟು ಪ್ರಾಚೀನವಾದದ್ದು. ಹಳೆಯ ಹಾಗೂ ಹೊಸ ಶಿಲಾಯುಗ ಸಂಸ್ಕೃತಿಗಳನ್ನು ಬೆಳಸಿಕೊಂಡು ಬಂದ ಹಿನ್ನೆಲೆ ಹೊಂದಿದೆ. ಕೃಷ್ಣಾ ಹಾಗೂ ತುಂಗಭದ್ರಾ ನದಿಗಳ ನಡುವಿನ ಫಲವತ್ತಾದ ಪ್ರದೇಶವಾದ ರಾಯಚೂರು ಜಿಲ್ಲೆ ಅನಾದಿ ಕಾಲದಿಂದಲೂ ಮಾನವನ ವಾಸಸ್ಥಳವಾಗಿತ್ತು.[೭]

ಮೀಡಾಸ್ ಟೇಲರ್ ಎಂಬುವವರು ಮೊದಲನೆಯ ಬಾರಿಗೆ ರಾಯಚೂರಿನ ಶಿಲಾಯುಗ ಸಂಸ್ಕೃತಿಯನ್ನು ಬೆಳಕಿಗೆ ತಂದರು. ಈ ಸಂಗತಿಯನ್ನು ಬಾಂಬೆ ಶಾಖೆಯ ರಾಯಲ್ ಏಶಿಯಾಟಿಕ್ ಸೊಸೈಟಿಯ ಕ್ರಿ.ಶ. ೧೮೩೫ ನೇ ವರ್ಷದ ನಾಲ್ಕನೇ ಸಂಪುಟದಲ್ಲಿ ನಮೂದಿಸಲಾಗಿದೆ. ಭಾರತ ಶಿಲಾಯುಗ ಸಂಸ್ಕೃತಿಯ ಸಂಶೋಧನೆಯಲ್ಲಿ ಮೊದಲಿಗರಾದ ಬ್ರೂಸ್‌ಫೂಟ್ ಎಂಬುವವರು ರಾಯಚೂರು ಜಿಲ್ಲೆಯ ಅನೇಕ ಹೊಸ ಶಿಲಾಯುಗ ಸಂಸ್ಕೃತಿಯ ಸ್ಥಳಗಳನ್ನು ಕ್ರಿ.ಶ. ೧೮೮೦ ರ ಸುಮಾರಿಗೆ ಗುರುತಿಸಿದ್ದರು.

ಅಲ್ಲದೇ ಅನೇಕ ಪಳೆಯುಳಿಕೆಗಳನ್ನು ಸಂಗ್ರಹಿಸಿದ್ದರು. ೧೯೦೪ ರಲ್ಲಿ ಅವುಗಳನ್ನು ಮದ್ರಾಸ್ ಸರ್ಕಾರವು ಅಲ್ಲಿಯ ಐತಿಹಾಸಿಕ ವಸ್ತು ಸಂಗ್ರಹಾಲಕ್ಕೆ ಸೇರಿಸಿತ್ತು.[೮]

ಹಟ್ಟಿ ಚಿನ್ನದ ಗಣಿಯ ಚರಿತ್ರೆಯನ್ನು ಕುರಿತು ಸ್ಥಳೀಯ ವ್ಯಕ್ತಿಗಳನ್ನು ಕೇಳಿದಾಗ ಅವರು ಹೇಳಿದ ಪುರಾಣಮಿಶ್ರಿತವಾದ ಮಾಹಿತಿ ಇಲ್ಲಿದೆ. ಮಾರೀಚ ಸೀತೆಯನ್ನು ಎಳೆದುಕೊಂಡು ಹೋಗುವಾಗ ಆಕೆಯ ಸೆರಗು ಬಿದ್ದ ಜಾಡನ್ನು ಸೀತಾ ಸೆರಗೆಂದು, ಪವಾಡ ಪುರುಷರು ಪಾದವಿಟ್ಟ ಕ್ಷೇತ್ರ ಸ್ವರ್ಣಗಿರಿಯೆಂತಲೂ, ಬುದ್ಧಿ ಜೀವಿಗಳೂ ಧೃಡಶಿಲೆಯೆಂತಲೂ, ವಿಜ್ಞಾನಿಗಳು ಹಳದಿ ಲೋಹವೆಂದು, ಶ್ರೀಸಾಮಾನ್ಯರಿಗೆ ಚಿನ್ನವಂತಲೂ ಪ್ರಖ್ಯಾತಿಯನ್ನು ಹೊಂದಿತು. ಈ ರೀತಿಯ ಅನೇಕ ಪುರಾಣ ಕಥೆಗಳು ಮೌಖಿಕ ಚರಿತ್ರೆಯಲ್ಲಿ ಉಳಿದುಕೊಂಡು ಬಂದಿವೆ. ಆದರೆ ನಿಜಾಂಶವನ್ನು ಹೊರತರುವ ಕೆಲಸ ಇನ್ನು ಆಗಬೇಕಾಗಿದೆ. ಮೌಖಿಕ ಪರಂಪರೆಯಲ್ಲಿ ಉಳಿದಿರುವ ಮಾಹಿತಿ ಪ್ರಕಾರ ಹಟ್ಟಿ ಚಿನ್ನದ ಗಣಿ ಕಾರ್ಯ ಆರಂಭವಾದದ್ದು ವಂದಲಿಯಲ್ಲಿ. ವಂದಲಿಯೆಂಬ ಹೆಸರು ಹೊನ್ನ ತಾಲಿಯಿಂದ ಬಂದಿದ್ದು ಅದುವೇ ಮುಂದೆ ಉಚ್ಛಾರಣೆಯಲ್ಲಿ ವಂದಲಿಯಾಯಿತು. ಅದೇ ರೀತಿ ಚಿಂಚರಿಕೆ ಎಂಬ ಗ್ರಾಮ ಚಿನ್ನದ ಚರಿಗೆಯಾಗಿರಬಹುದು. ಈ ಮೇಲಿನ ಮಾಹಿತಿಯು ಮಲ್ಲಿಕಾರ್ಜುನ ರೆಡ್ಡಿ ಎಂಬ ಸ್ಥಳೀಯ ವ್ಯಕ್ತಿಯಿಂದ ಸಂಗ್ರಹಿಸಿಕೊಳ್ಳಲಾಗಿದೆ.

೨.೨ ಗಣಿಯ ಉಗಮ ಹಾಗೂ ಅದರ ಹಿನ್ನೆಲೆ

ಹಟ್ಟಿ ಚಿನ್ನದ ಗಣಿ ಕೋಲಾರದ ಗಣಿಯಷ್ಟೇ ಪ್ರಖ್ಯಾತಿಯನ್ನು ಹೊಂದಿದೆ. ಮೈಸೂರು ರಾಜ್ಯದ ರಾಯಚೂರು ಜಿಲ್ಲಾ ಗ್ಯಾಝೆಟಿಯರ್‌ನಲ್ಲಿ ಉಲ್ಲೇಖಿಸಿರುವಂತೆ ಹಟ್ಟಿ ಗಣಿಗಳ ಸುತ್ತು-ಮುತ್ತಲೂ ನೂರಾರು ಸಣ್ಣ-ಪುಟ್ಟ ಪುರಾತನ ಗಣಿಗಳ ಕುರುಹುಗಳು ದೊರೆತಿದ್ದು ಆವುಗಳಿಂದ ೬೪೦ ಅಡಿ ಆಳ ತೋಡಿ ಗಣಿ ಮಾಡಿದ್ದು ತಿಳಿದು ಬರುತ್ತದೆ. 'ಕರ್ನಾಟಕಚರಿತ್ರೆ' ಸಂಪುಟ ಒಂದರಲ್ಲಿ ಹಟ್ಟಿ ಗಣಿಯು ಕ್ರಿ.ಪೂ. ೩ ಮತ್ತು ೪ ನೇ ಶತಮಾನದಲ್ಲಿಯೇ ಗಣಿಕಾರ್ಯ ಆರಂಭವಾಗಿತ್ತೆಂದು ವಿವರಿಸಲಾಗಿದೆ. ಪ್ರೊ.ಆಲ್ಚಿನ್‌ರವರು ಹಟ್ಟಿ ಚಿನ್ನದ ಗಣಿಯು ಕ್ರಿ.ಪೂ. ಶತಮಾನಕ್ಕೂ ಮೊದಲೇ ಗಣಿಗಾರಿಕೆ ನಡೆದಿರಬಹುದೆಂದು ಅಭಿಪ್ರಾಯಪಟ್ಟಿದ್ದಾರೆ.[೯]

ಅಮರಸಿಂಹನ ಅಮರಕೋಶದಲ್ಲಿ ಬಂಗಾರವನ್ನು ಹದಿನೆಂಟು ಪರ್ಯಾಯ ನಾಮಗಳಿಂದ ಕರೆದಿದ್ದು, ಅವುಗಳಲ್ಲಿನ ಎರಡು ಹೆಸರುಗಳು ಇಂತಿವೆ. 'ಹಾಟಕಂ' ಮತ್ತು 'ಗಾಂಗೇಯ' ಎಂದು. ಇಲ್ಲಿಯೇ ಹಾಟಕವೇ ಇಂದಿನ ಹಟ್ಟಿಯೆಂಬುದಾಗಿ, ಗಾಂಗೆಯವೇ ಕರ್ನಾಟಕದ ದಕ್ಷಿಣಭಾಗದ ಗಂಗರ ಆಳ್ವಿಕೆಯ ಪ್ರದೇಶ. ಕೋಲಾರದ ಚಿನ್ನದ ಗಣಿ ಇದ್ದುದು ಗಂಗರ ನಾಡಿನಲ್ಲಿ. ಹಟ್ಟಿಯಿಂದ ತೆಗೆದ ಬಂಗಾರವು ಮೌರ್ಯರ ರಾಜಧಾನಿ ಪಾಟಲಿಪುತ್ರಕ್ಕೆ ರವಾನೆಯಾಗಿದ್ದಿರಬೇಕು. ಹಾಗೂ ಅಲ್ಲಿಯ ಅಕ್ಕಸಾಲೆ

ಅಥವಾ ಟಂಕಶಾಲೆಯಲ್ಲಿ ಕೆಲವು ನಾಣ್ಯಗಳಾಗಿಯಾದರೂ ಮಾರ್ಪಾಡು ಹೊಂದಿರಬೇಕು. ಕೌಟಿಲ್ಯನ ಅರ್ಥಶಾಸ್ತ್ರ ಹೇಳುವಂತೆ ಠಂಕಶಾಲೆಯೇ ಈ ಅಕ್ಷಶಾಲೆ. ಮೌರ್ಯಕಾಲದಿಂದಲೂ ಸಮೃದ್ಧಚಿನ್ನ ದೊರೆಯುವ ಅದಿರಿನ ಪ್ರದೇಶವಾಗಿ ಪ್ರಸಿದ್ಧಿ ಪಡೆಯುತ್ತಾ ಬಂದಿದೆ.[೧೦] ಹಟ್ಟಿ ಗಣಿಯ ಚರಿತ್ರೆಯಲ್ಲಿ ಇದೇ ಮೊದಲಬಾರಿಗೆ ಇಲ್ಲಿ ೨,೪೦೦ ಅಡಿ ಆಳದಲ್ಲಿ ಪ್ರತಿ ಟನ್‌ಗೆ ೨೦೦ ಗ್ರಾಂ ಚಿನ್ನ ದೊರೆಯುವ ಅದಿರಿನ ನಿಕ್ಷೇಪ ಪತ್ತೆಯಾಗಿರುವುದು. (ವಿಶ್ವಗಣಿ ಕಾಂಗ್ರೆಸ್ ಸಮಾರೋಪ, ದೆಹಲಿ, ನವೆಂಬರ್ ೨೦೦೩)

ಕ್ರಿ.ಪೂ. ೪ನೇ ಶತಮಾನದ ಹೊತ್ತಿಗೆ ದಕ್ಷಿಣದಲ್ಲಿ ಮೌರ್ಯರ ಪ್ರಭಾವ ಹೆಚ್ಚಿತು. ಕೌಟಿಲ್ಯ ತನ್ನ ಹೆಸರಾಂತ ಅರ್ಥಶಾಸ್ತ್ರದಲ್ಲಿ ದಕ್ಷಿಣ ಪಥದಲ್ಲಿ ಚಿನ್ನ ದೊರೆಯುತ್ತದೆಂದು ನಿಯಮವನ್ನೇ ಸೂಚಿಸಿದ್ದಾನೆ. ಆದರೆ ನಿರ್ದಿಷ್ಟವಾಗಿ ಈ ಹೇಳಿಕೆ ಹಟ್ಟಿ ಅಥವಾ ಕೋಲಾರದ ಚಿನ್ನದ ಗಣಿಗಳಿಗೆ ಅನ್ವಯಿಸುತ್ತದೆಂದು ಹೇಳುವಂತಿಲ್ಲ. ಆದರೆ ಪ್ರಾಚ್ಯ ಸಂಶೋಧಕರು ರಾಯಚೂರಿನ ಮಸ್ಕಿ, ಮುದಗಾವ್, ಲಿಂಗಸ್ಗೂರು, ಅನಂತಗಲ್ಲು, ಕೊಂಚಿಗಲ್ಲು, ವಾಟಗಲ್ಲು ಇವೆಲ್ಲವೂ ಚಿನ್ನದ ಜಾಡಿಗೆ ಕೇವಲ ಎಂಟು ಮೈಲಿ ಸುತ್ತಳತೆಯಲ್ಲಿರುವ ಊರುಗಳು ಎಂಬುದನ್ನೇ ಒತ್ತಿ ಹೇಳಿದ್ದಾರೆ. ನವಶಿಲಾಯುಗದ ಅನೇಕ ಕುರುಹುಗಳು ದೊರೆತಿವೆ. ಲಿಯೋನಾರ್ಡ್‌ಮನ್ ಪುರಾತನ ಚಿನ್ನದ ಗಣಿಗಳನ್ನು ವಿವರಿಸುವುದರ ಜೊತೆಗೆ ಹಳೆ ಗಣಿಗಳ ಹತ್ತಿರದಲ್ಲೇ ಕಂಡುಬಂದಿರುವ ರುಬ್ಬುಗಲ್ಲು, ಪುಡಿಮಾಡಲು ಬಳಸುತ್ತಿದ್ದ ಒರಳುಕಲ್ಲು, ಕುಟ್ಟುಕಲ್ಲು ಇವೆಲ್ಲವೂ ಸುತ್ತ ರಾಶಿಯಾಗಿ ಬಿದ್ದಿರುವ ಬೂದಿ ಗುಡ್ಡಗಳು ಗಣಿಗಾರಿಕೆಯಿಂದಲೇ ಬಂದಿವೆಯೆಂದು ದೀರ್ಘ ಟಿಪ್ಪಣಿಯಲ್ಲಿ ವಿವರಿಸುತ್ತಾರೆ.[೧೧] ನವಶಿಲಾಯುಗದ ಅವಶೇಷಗಳನ್ನು ಪತ್ತೆ ಮಾಡಿರುವ ಪ್ರೊ.ಆರ್.ಆಲ್ಚಿನ್ ಅವರು ರಾಯಚೂರಿನ ಈ ಭಾಗದಲ್ಲಿ ಚಿನ್ನದ ಗಣಿಗಾರಿಕೆ ನವಶಿಲಾಯುಗದಲ್ಲೇ ಪ್ರಾರಂಭವಾಗಿರಬಹುದೆಂದು ವಾದಿಸಿದ್ದಾರೆ. ಆ ಕಾಲದಲ್ಲಿ ಅತ್ಯಂತ ಆಳಕ್ಕೆ ಗಣಿ ಇಳಿದಿರುವ ಕುರುಹುಗಳು ಇಲ್ಲ. ಮೇಲ್ಮೈಯಲ್ಲಿ ಕಂಡ ಚಿನ್ನದ ಅದಿರನ್ನು ಬಗೆದು ತೆಗೆದಿರಬಹುದು. ಏಕೆಂದರೆ ಆಳದ ಗಣಿಗಾರಿಕೆ ನಡೆಸಲು ತಾಂತ್ರಿಕ ಸಲಕರಣೆಗಳು ಇರಲಿಲ್ಲ. ಮುಂದೆ ನಾಗರೀಕತೆ ಕಬ್ಬಿಣ ಯುಗಕ್ಕೆ ಕಾಲಿಟ್ಟಾಗ ಗಣಿ ಹೆಚ್ಚು ಆಳ ಪಡಿಸುವುದು ಸಾಧ್ಯವಾಗಿರಬಹುದು. ಪುರಾತನ ಗಣಿಗಳಲ್ಲಿ ದೊರೆತಿರುವ ಕಬ್ಬಿಣದ ಸಲಕರಣೆಗಳು ಈ ವಾದಕ್ಕೆ ಪುಷ್ಟಿ ನೀಡುತ್ತವೆ. ಮೌರ್ಯರ ಕಾಲದಲ್ಲಿ ಕರ್ನಾಟಕದಲ್ಲಿ ಚಿನ್ನದ ಗಣಿಗಳ ಅಭಿವೃದ್ಧಿಗಾಗಿ ಆ ನಂತರ ಶಾತವಾಹನರ ಕಾಲದಲ್ಲೇ ಮುಂದುವರೆದಿರಬಹುದೆಂದು ಆಲ್ಚಿನ್‌ರವರ ವಾದವಾಗಿದೆ. ಹಟ್ಟಿ ಚಿನ್ನದ ಗಣಿಯ ಚಾರಿತ್ರಿಕ ಅಧ್ಯಯನವು ಮೂರು ಕಾಲ ಘಟ್ಟಗಳಲ್ಲಿ ವಿಂಗಡಿಸಿ ಅಭ್ಯಸಿಸುವುದು ಸೂಕ್ತವಾಗಿದ್ದು ಅದನ್ನು ಈ ಕೆಳಗಿನ ರೀತಿಯಲ್ಲಿ ವಿಭಾಗಿಸಲಾಗಿದೆ.

೧. ಪ್ರಾಚೀನ ಕಾಲ: ಮೌರ್ಯರ ಕಾಲ

೨. ಮಧ್ಯಯುಗದ ಕಾಲ: ನೂತನ ಗಣಿಗಾರಿಕೆಯ ಕಾಲ ಕ್ರಿ.ಶ.೧೮೮೭ ರಿಂದ ಕ್ರಿ.ಶ. ೧೯೨೦ ರವರೆಗೆ

೩. ಆಧುನಿಕ ಕಾಲ: ಆಧುನಿಕ ಗಣಿಗಾರಿಕೆಯ ಕಾಲ ೧೯೪೭ ರಿಂದ ಇಲ್ಲಿಯವರೆಗೆ

ಅ. ಪ್ರಾಚೀನ ಕಾಲ

ಪ್ರಾಚೀನ ಗಣಿಕಾರ್ಯಾಚರಣೆಯನ್ನು ಕುರಿತಂತೆ ಯಾವುದೇ ರೀತಿಯ ಆಧಾರಗಳು ಲಭ್ಯವಾಗಿಲ್ಲ. ಕೆಲವು ಕುರುಹುಗಳಿಂದಾಗಿ ಪ್ರಾಚೀನರು ಚಿನ್ನದ ಗಣಿಕಾರ್ಯ ಮಾಡಿರುವುದನ್ನು ಉಲ್ಲೇಖಿಸಬಹುದು. ಹಟ್ಟಿ ಗಣಿಕಾರ್ಯಾಚರಣೆ ಆರಂಭಗೊಂಡಾಗ ಅಲ್ಲಿ ದೊರೆತ ಮಡಿಕೆಯ ಚೂರುಗಳು, ಮರದ ದಿಮ್ಮಿಗಳು, ಒರಳು ಮತ್ತು ರುಬ್ಬುಕಲ್ಲುಗಳಿಂದ ಪುರಾತನರು ಗಣಿ ಮಾಡಿರುವುದನ್ನು ನಿಸ್ಸಂದೇಹವಾಗಿ ಉಲ್ಲೇಖಿಸಬಹುದು. ಗಣಿಯ ಆಳಕ್ಕೆ ಇಳಿದಾಗ ಕಾರ್ಮಿಕನಿಗೆ ಅಪಘಾತ ಸಂಭವಿಸದಿರಲೆಂದು ದೊಡ್ಡದಾದ ಹಗ್ಗಗಳನ್ನು ಬಳಸಿದ್ದು, ಕೆಲಸದ ಸಮಯದಲ್ಲಿ ಹಗ್ಗಗಳು ಗೋಡೆಗೆ ಬಡೆದು ಸವೆದ ಗುರುತಿನಿಂದ ತಿಳಿದುಬರುತ್ತದೆ. ಚಿನ್ನದ ಅದಿರನ್ನು ಗುಂಡಿಗೆ ಹಾಕಿ ರುಬ್ಬಿ ಅದನ್ನು ಪುಡಿ ಮಾಡಿ ನದಿ ತೊರೆಗಳಿಗೆ ಒಯ್ದು ಜಾಲಿಸಿ ತದನಂತರ ತಳಕ್ಕೆ ಕುಳಿತ ಚಿನ್ನವನ್ನು ಬಳಸಿಕೊಳ್ಳುತ್ತಿದ್ದರು. ಪ್ರಾಚೀನರಿಗೆ ಯಾವುದೇ ತಾಂತ್ರಿಕತೆಯ ಬಳಕೆಯು ಕೂಡ ತಿಳಿದಿರಲಿಲ್ಲ.

ಪುರಾತನ ಗಣಿ ಕಾರ್ಮಿಕರು ಸ್ಥಳೀಯರೇ ಹೊರೆತು ವಿದೇಶಗಳಿಂದ ಬಂದವರಲ್ಲ. ಬೇರೆ ಕಡೆಯಿಂದ ಬಂದು ಗಣಿ ಮಾಡಲು ಅವರಿಗೆ ಸಮಯದ ಅಭಾವವಿತ್ತು ಎಂದು ಟಿ.ಆರ್.ಅನಂತರಾಮು ಅವರು ತಮ್ಮ 'ಭೂಗರ್ಭ ಯಾತ್ರೆ' ಲೇಖನದಲ್ಲಿ ಅಭಿಪ್ರಾಯ ಪಟ್ಟಿದ್ದಾರೆ.

ಭೂಮಿಯ ಕೆಳಗೆ ಚಿನ್ನವಿರುವುದನ್ನು ಪ್ರಪ್ರಥಮ ಬಾರಿಗೆ ಗುರುತಿಸಿಕೊಳ್ಳುವ ಪ್ರಾಚೀನವಾದ ಪದ್ಧತಿಯೊಂದರ ಪ್ರಕಾರ ಗೆದ್ದಲು ಹುಳುಗಳು ಹುತ್ತಕಟ್ಟಲು ಭೂಮಿಯ ಆಳಕ್ಕೆ ಹೋಗಿ ತೇವದ ಮಣ್ಣನ್ನು ತಂದು ಹುತ್ತ ನಿರ್ಮಿಸುತ್ತಿದ್ದುದು, ಅದರಲ್ಲಿ ಅತಿ ಸಣ್ಣ ಚಿನ್ನದ ಕಣಗಳು ಮಿಶ್ರಿತವಾಗಿರುವುದನ್ನು ಪ್ರಾಚೀನರು ಗುರುತಿಸಿಕೊಂಡು ಗಣಿಕೆಲಸ ಆರಂಭಿಸುತ್ತಿದ್ದುದಾಗಿ ತಿಳಿದು ಬರುತ್ತದೆ.

ಆ. ಮಧ್ಯಕಾಲೀನ ಕಾಲ

ನೂತನ ಗಣಿಗಾರಿಕೆಯ ಕಾಲ ಕ್ರಿ.ಶ.೧೮೮೨ ರಿಂದ ಕ್ರಿ.ಶ.೧೯೨೦ ರವರೆಗಿನ ಕಾಲಾವಧಿಯನ್ನು ಮಧ್ಯಕಾಲೀನ ಕಾಲ ಅಥವಾ ಹೈದ್ರಾಬಾದ್ ನಿಜಾಮ್‌ರ ಆಳ್ವಿಕೆಯ ಅವಧಿಯೆಂದು ಪರಿಗಣಿಸಲಾಗಿದೆ. ನಿಜಾಮ್ ಸರ್ಕಾರದ ಅವಧಿಯಲ್ಲಿ ಹಟ್ಟಿ ಚಿನ್ನದ ಗಣಿ ಕಾರ್ಯಾಚರಣೆಯು ಅನೇಕ ಸುಧಾರಿತ ಯಂತ್ರಗಳನ್ನು ಬಳಸಿಕೊಂಡು ಗಣಿಕಾರ್ಯಾಚರಣೆ ಆರಂಭಗೊಂಡು ಅನೇಕ ಏಳುಬೀಳುಗಳನ್ನು ಕಂಡು ಚಿನ್ನವನ್ನು ಉತ್ಪಾದಿಸಿತು. ಹೈದ್ರಾಬಾದ್ ನಿಜಾಮ್ ಸರ್ಕಾರಕ್ಕೆ ಎರವಲು ಸೇವೆಯ ಮೇಲೆ ಆಯ್ಕೆಯಾಗಿದ್ದ ಕ್ಯಾಪ್ಟನ್ ಅನೇಕ ಪುರಾತನ ಗಣಿಗಳನ್ನು ಕುರಿತು ವಿವರವಾದ ಮಾಹಿತಿಯನ್ನು ನೀಡಿದ ಶ್ರೇಷ್ಠ ವ್ಯಕ್ತಿಗಳ ಸಾಲಿನಲ್ಲಿ ನಿಲ್ಲುತ್ತಾರೆ. ಕ್ರಿ.ಶ.೧೮೭೪ ರಲ್ಲಿ ರಾಬರ್ಟ್ ಬ್ರೂಸ್‌ಫುಟ್ ಚಿನ್ನದ ನಿಕ್ಷೇಪವನ್ನು ಗುರುತಿಸಿ ವಿವರಣೆಯನ್ನು ನೀಡಿದ ನಂತರ ೧೮೭೭ ರ ಹೊತ್ತಿಗೆ 'ಹೈದ್ರಾಬಾದಿನ ಡೆಕ್ಕನ್ ಕಂಪನಿ' ೨೫೯೦ ಚ.ಕಿ.ಮೀ.

ಜಾಗವನ್ನು ಗುತ್ತಿಗೆಗೆ ಪಡೆದು ರಾಯಚೂರು ದೋ-ಅಬ್ ಗೋಲ್ಡ್‌ಫೀಲ್ಡ್ ಹೆಸರಿನಲ್ಲಿ ಸುರಪುರ ತಾಲ್ಲೂಕನ್ನು ಒಳಗೊಂಡಂತೆ ಸಮೀಕ್ಷೆ ನಡೆಸಿ ಚಿನ್ನ ಶೋಧಿಸಲು ಪ್ರಾರಂಭಿಸಿತು. ಹಟ್ಟಿ ಹಳ್ಳಿಗೆ ಅರ್ಧ ಕಿ.ಮೀ. ಪಶ್ಚಿಮದಲ್ಲಿ ಉಳುಮೆ ಭೂಮಿಯಲ್ಲಿ ತೇಲುತ್ತಿದ್ದ ಬೆಣಚುಕಲ್ಲಿನಲ್ಲಿ ಪುರಾತನ ಚಿನ್ನದ ಗಣಿಗಳನ್ನು ಪತ್ತೆ ಹಚ್ಚಲು ನೆರವಾಯಿತು. ತದನಂತರ ಡೆಕ್ಕನ್ ಗೋಲ್ಡ್ ಫೀಲ್ಡ್ ಕಂಪನಿಗಳು ಹಟ್ಟಿಗೆ ೨೦ ಕಿ.ಮೀ. ಪರಿಧಿಯಲ್ಲೇ ೧೮೮೭-೧೯೦೦ ರ ನಡುವೆ ಚಿನ್ನದ ಪರಿಶೋಧನೆಗೆ ತೊಡಗಿದವು. ವಂದಲಿಯಲ್ಲಿ ಇದೇ ಕಂಪನಿಗೆ ಸೇರಿದ ಶಾಖೆ ೧೮೯೮ ರಲ್ಲಿ ಗಣಿಯನ್ನು ಪ್ರಾರಂಭಿಸಿತು. ೩೭೩ ಕಿ.ಗ್ರಾಂ. ಚಿನ್ನವನ್ನು ಉತ್ಪಾದಿಸಿ ಹೇಳಿಕೊಳ್ಳುವ ಲಾಭ ಪಡೆಯದೆ ಕಂಪನಿ ಮುಚ್ಚಿತು. ಕ್ರಿ.ಶ. ೧೯೦೧ ರಲ್ಲಿ ನಿಜಾಮ್ ಹಟ್ಟಿ ಗೋಲ್ಡ್ ಮೈನ್ಸ್ ಲಿಮಿಟೆಡ್ ಹಟ್ಟಿಯ ಮುಖ್ಯ ಗಣಿ ಕಾರ್ಯಾಚರಣೆಗೆ ಪ್ರಾರಂಭಿಸಿತು. ಕ್ರಿ.ಶ. ೧೯೦೩-೧೯೨೦ ರ ನಡುವೆ ಅದು ೭೩೭೧ ಕಿ.ಗ್ರಾಂ. ಚಿನ್ನವನ್ನು ಉತ್ಪಾದಿಸಿತು. ಕ್ರಿ.ಶ. ೧೯೩೭ ರಲ್ಲಿ ಹೈದ್ರಾಬಾದ್ ಸರ್ಕಾರ ಹೈದ್ರಾಬಾದ್ ಗೋಲ್ಡ್ ಡೆವಲಪ್‌ಮೆಂಟ್ ಸಿಂಡಿಕೇಟ್ ಮತ್ತು ಜಾನ್ ಟೇಲರ್ ಕಂಪನಿ ಹಟ್ಟಿಯ ಪುರಾತನ ಚಿನ್ನದ ಗಣಿಗಳ ಕೂಲಂಕಷ ಅಧ್ಯಯನದಲ್ಲಿ ತೊಡಗಿದವು. ಆದರೆ ಯಾವುದೇ ರೀತಿಯ ಯಶಸ್ಸು ಕಾಣದೆ ಅನೇಕ ಸಮಸ್ಯೆಗಳನ್ನು ಕಂಡು ಹೈದ್ರಾಬಾದ್ ಗೋಲ್ಡ್ ಡೆವಲಪ್‌ಮೆಂಟ್ ಕಂಪನಿಯು ಮುಚ್ಚಬೇಕಾಗಿಬಂತು.

ಏಕೆಂದರೆ ಭೂಮಿಯ ಆಳಕ್ಕೆ ಇಳಿದು ಗಣಿ ಮಾಡುವ ಖರ್ಚು ಅಧಿಕವಾದ್ದರಿಂದ ಅನೇಕ ಹಣಕಾಸಿನ ಅಡೆತಡೆಯುಂಟಾಗಿ ಅಂತಹ ಯಶಸ್ಸನ್ನು ಮಧ್ಯಕಾಲದಲ್ಲಿ ಕಾಣಲಿಲ್ಲ. ಈ ಮೇಲಿನ ಎಲ್ಲಾ ಮಾಹಿತಿಗಳನ್ನು ಕಂಪನಿಯ ಅನೇಕ ಮೂಲಗಳಿಂದ ಸಂಗ್ರಹಿಸಿಕೊಳ್ಳಲಾಗಿದೆ. ೧೯೫೦ ರ ನಂತರ ಹಟ್ಟಿ ಗಣಿಗೆ ಮತ್ತಷ್ಟು ಪುಷ್ಠಿ ಬಂದಂತಾಯಿತು.

೪. ಆಧುನಿಕ ಗಣಿಗಾರಿಕೆಯ ಕಾಲ

ಆಧುನಿಕ ಗಣಿಗಾರಿಕೆಯ ಕಾಲವನ್ನು ೧೯೪೭ ರಿಂದ ಇಲ್ಲಿಯವರೆಗೆ ಎಂದು ಅಂದಾಜು ಮಾಡಿಕೊಳ್ಳಲಾಗಿದೆ. ಭಾರತ ಸ್ವಾಂತಂತ್ರ್ಯವಾದಂದಿನಿಂದ ಇಂದಿನವರೆಗೂ ಗಣಿಕಾರ್ಯ ನಡೆಯುತ್ತಲಿದೆ. ಅದರಲ್ಲಿಯೂ ೧೯೫೦ ರಲ್ಲಿ ಯಂತ್ರೋಪಕರಣಗಳ ಜೋಡಣೆಯಿಂದ ಗಣಿ ಕೆಲಸವು ವ್ಯವಸ್ಥಿತವಾಗಿ ನಡೆಯುತ್ತಲಿದೆ. ೧೯೫೬ ರಲ್ಲಿ ಕರ್ನಾಟಕದ ಏಕೀಕರಣವಾದ ನಂತರ ಹೈದ್ರಾಬಾದ್ ನಿಜಾಮ್ ಆಡಳಿತದಿಂದ ರಾಯಚೂರು ಜಿಲ್ಲೆ ಕರ್ನಾಟಕದ ವ್ಯಾಪ್ತಿಗೆ ಬಂತು. ಸ್ವಾಭಾವಿಕವಾಗಿಯೇ ಹಟ್ಟಿ ಗಣಿಯ ಸ್ವಾಮ್ಯವು ಕರ್ನಾಟಕ ಸರ್ಕಾರದ ವಶಕ್ಕೆ ಬಂದಿತು. ರಾಯಚೂರಿನ ಶಕ್ತಿನಗರದಲ್ಲಿ ವಿದ್ಯುತ್ ಉತ್ಪಾದನೆಯು ಪ್ರಾರಂಭವಾದ ನಂತರ ಅದರ ಪ್ರಯೋಜನ ಪಡೆದು ಅನೇಕ ಬೃಹತ್ ಯಂತ್ರೋಪಕರಣಗಳನ್ನು ಅಳವಡಿಸಲಾಯಿತು. ಇದರ ಫಲವಾಗಿ ೧೯೮೦ ರವರೆಗೆ ಹಟ್ಟಿ ಚಿನ್ನದ ಗಣಿ ೨೩ ಟನ್ನು ಚಿನ್ನ ಉತ್ಪಾದಿಸಿದೆ ಎಂದು ಕಂಪನಿಯ ಮೂಲಗಳಿಂದ ತಿಳಿದು ಬರುತ್ತದೆ. ಇಂದಿನ ಬೆಲೆಯಲ್ಲಿ ಇದರ ಮೌಲ್ಯ ೧೦೦೦

ಕೋಟಿ ಎಂದು ಅಂದಾಜಿಸಲಾಗಿದೆ. ಇಂದು ಹಟ್ಟಿಗಣಿಗೆ ೯೧೦ ಟನ್ನು ಅದಿರು ಸಂಸ್ಕರಿಸುವ ಸಾಮರ್ಥ್ಯವಿದೆ ಎಂದು ಆಧಾರಗಳಿಂದ ತಿಳಿದು ಬರುತ್ತದೆ. ಕೇಂದ್ರ ಸರ್ಕಾರದ ೧೯೬೩ ರ ಚಿನ್ನದ ನಿಯಂತ್ರಣ ಕಾಯ್ದೆಯಿಂದಾಗಿ ಗಣಿಯಲ್ಲಿ ಉತ್ಪಾದನೆಯಾದ ಚಿನ್ನವನ್ನು ಸರ್ಕಾರಕ್ಕೆ ಮಾರಾಟ ಮಾಡಬೇಕು ಎಂದು ತಿಳಿಸಲಾಯಿತು. ಅದೇ ವರ್ಷ ಚಿನ್ನದ ವಹಿವಾಟು ಕಾಯ್ದೆಗೆ ಒಳಪಟ್ಟಿತು. ಪರವಾನಿಗೆ ಪಡೆದವರಿಗೆ ಮಾತ್ರ ರಾಷ್ಟ್ರೀಕೃತ ಬ್ಯಾಂಕ್‌ಗಳ ಮೂಲಕ ಚಿನ್ನವನ್ನು ಒದಗಿಸಲಾಗುತ್ತಿತ್ತು. ಮುಂಬೈನ ಟಂಕಶಾಲೆ ಹಟ್ಟಿ ಚಿನ್ನವನ್ನು ೧೦.೫೦, ೧೦೦, ೫೦೦, ೧೦೦೦ ಗ್ರಾಮ್‌ನ ಗಟ್ಟಿಗಳನ್ನಾಗಿ ಎರಕ ಹೊಯ್ಯುತ್ತಿತ್ತು. ಹಟ್ಟಿ ಚಿನ್ನದ ಪರಿಶುದ್ಧತೆ ೯೯.೫. ಚಿನ್ನದ ನಿಯಂತ್ರಣ ಕಾಯ್ದೆ ಜಾರಿಗೆ ಬಂದ ಬಳಿಕ ಹಟ್ಟಿಗಣಿಗಳಿಂದ ಉತ್ಪಾದಿಸುವ ಚಿನ್ನದ ದಾಸ್ತಾನಿನಲ್ಲಿ ಸರ್ಕಾರ ಕೊಂಡದ್ದು ೨೨.೯೯೦ ಕಿ.ಗ್ರಾಂ. ಹಟ್ಟಿ ಉತ್ಪಾದಿಸಿದ್ದು ೨೫.೧೨೦ ಕಿ.ಗ್ರಾಂ. ಚಿನ್ನ. ಇದರಿಂದಾಗಿ ಹಟ್ಟಿ ಗಣಿಗೆ ತುಂಬಾ ಸಮಸ್ಯೆಯುಂಟಾಯಿತು. ೧೯೬೪-೬೫ ರಲ್ಲಿ ಮತ್ತೆ ೧೯೮೪-೮೫ ರಲ್ಲಿ ಮತ್ತೆ ಈ ದಾಸ್ತಾನಿನಿಂದ ೨೧೮೮ ಕಿ.ಗ್ರಾಂ. ಚಿನ್ನವನ್ನು ಸರ್ಕಾರ ಖರೀದಿಸಿದರೂ ಕೊನೆಗೂ ೨೩೫ ಕಿ.ಗ್ರಾಂ. ಚಿನ್ನ ದಾಸ್ತಾನಿನಲ್ಲೇ ಉಳಿದು ಕಂಪನಿ ಮುಗ್ಗಟ್ಟನ್ನೆದುರಿಸಬೇಕಾಯಿತು.

ಪ್ರಸ್ತುತ ಸಂದರ್ಭದಲ್ಲಿ ಚಿನ್ನ ನಿಯಂತ್ರಣ ಕಾಯ್ದೆಯನ್ನು ತೆಗೆದಿರುವುದರಿಂದ ಚಿನ್ನದ ಉದ್ಯಮಕ್ಕೆ ಹೊಸ ಜೀವ ಕಳೆ ಬಂದಿದೆ. ಅನೇಕ ಹಂತಗಳಲ್ಲಿ ಚಿನ್ನವನ್ನು ಉತ್ಪಾದಿಸಿ ತನ್ನ ಸಾಮರ್ಥ್ಯವನ್ನು ಉಳಿಸಿಕೊಂಡು ಸರ್ಕಾರದ ಆದಾಯ ತರುವ ಮೂಲಗಳಲ್ಲಿ ಹಟ್ಟಿಯೂ ಒಂದಾಗಿದೆ. ಕೋಲಾರ ಚಿನ್ನದ ಗಣಿಯ ಕಾರ್ಯಾಚರಣೆ ಸ್ಥಗಿತಗೊಂಡ ನಂತರ ಆ ಸ್ಥಾನವನ್ನು ಹಟ್ಟಿ ಚಿನ್ನದ ಗಣಿ ತುಂಬಿ ಕೊಡಲು ಪ್ರಯತ್ನಿಸುತ್ತಿದೆ.

೨.೩. ಗಣಿಗಾಗಿ ದುಡಿದ ಮಹನೀಯರು ಹಾಗೂ ಅವರ ಹಿನ್ನೆಲೆ

ಹಟ್ಟಿ ಚಿನ್ನದ ಗಣಿಗಾಗಿ ಅನೇಕ ಮಹನ್ ವ್ಯಕ್ತಿಗಳು ತಮ್ಮದೇ ಆದ ಕೊಡುಗೆಯನ್ನು ನೀಡಿದ್ದಾರೆ. ಅವರಲ್ಲಿ ಆರ್.ಬ್ರೂಸ್‌ಫುಟ್, ಪ್ರೊ. ಆರ್. ಆಲ್ಚಿನ್, ಸಂಪತ್ ಐಯಂಗಾರ್, ಬಿ. ಜಯರಾಂ, ಡಬ್ಲ್ಯೂ. ಎಫ್. ಸ್ಮಿತ್, ಹೆಚ್.ಕೆ. ಸ್ಲೇಟರ್, ಬಿ. ರಾಮರಾವ್ ಮತ್ತು ಡಾ. ಸಿ.ಎಸ್. ಪಿಚ್ಚಾಮುತ್ತು ಮುಂತಾದವರಾಗಿದ್ದಾರೆ.

ಇವರಲ್ಲಿ ಕೆಲವರು ಇತ್ತೀಚಿನ ದಿನಗಳಲ್ಲಿ ಈ ಭಾಗದ ಚಿನ್ನದ ಗಣಿಗಾರಿಕೆಗಾಗಿನ ಸಂಶೋಧನೆಯ ಅಂಗವಾಗಿ ಭೂವಿಜ್ಞಾನ ಮತ್ತು ಅನ್ವೇಷಣೆಯಲ್ಲಿ, ಗಣಿಗಾರಿಕೆಯಲ್ಲಿ, ಲೋಹಶಾಸ್ತ್ರದಲ್ಲಿ, ಆಡಳಿತ, ಹಣಕಾಸು ವಿಭಾಗದಲ್ಲಿ ತಮ್ಮದೇ ಆದ ಸೇವೆಯನ್ನು ಸಲ್ಲಿಸುತ್ತಿರುವವರು. ಇವರಲ್ಲಿ ಅನೇಕರು ಹೊರದೇಶದವರು ಮತ್ತು ಭಾರತೀಯರೂ ಇದ್ದಾರೆ. ಕಂಪನಿಯ ಶ್ರೇಯಸ್ಸಿಗಾಗಿ ಅನೇಕ ಅಧ್ಯಕ್ಷರು, ವ್ಯವಸ್ಥಾಪಕ ನಿರ್ದೇಶಕರು, ಜನರಲ್ ಮ್ಯಾನೇಜರರು ಸೇವೆ ಸಲ್ಲಿಸಿದ್ದಾರೆ. ಈಗಿನ ಶ್ರೀ ಅಶೋಕ್ ಡೇವಿಡ್ (ಸಿ.ಎಂ.ಡಿ), ಶ್ರೀ ಡಿ.ವೈ. ವೆಂಕಟೇಶ್ (ಜಿ.ಎಮ್), ಇವರ ನಿರ್ದೇಶನದಲ್ಲಿ ಕಂಪನಿಯು ತುಂಬಾ ಪ್ರಗತಿಯಲ್ಲಿದೆ. ಇವರಿಗೆಲ್ಲ ಅಧಿಕಾರಿಗಳ ಮತ್ತು ಕಾರ್ಮಿರ ತುಂಬು ಸಹಕಾರವಿದೆ. ಹಟ್ಟಿ

ಸುತ್ತಮುತ್ತಲಿನ ಪ್ರದೇಶದಲ್ಲಿ ಅನೇಕ ಚಿನ್ನದ ನಿಕ್ಷೇಪಗಳಿವೆ. ಅವುಗಳ ಸಂಶೋಧನೆಗಾಗಿ ಡಾ. ಎಸ್. ಕೆ. ಬಿಸ್ವಾಸ್, ಡಾ. ಕೆ. ಕೆ. ರಾಜು, ಡಾ. ಪ್ರಭಾಕರ್ ಸಂಗೂರ್‌ಮಠ್‌ರವರು ಹಗಲಿರುಳು ಶ್ರಮಿಸಿರುವುದಾಗಿ ಕಂಪನಿಯ ಮೂಲಗಳು ತಿಳಿಸಿರುತ್ತವೆ.

೧. ಕ್ಯಾಪ್ಟನ್ ಲಿಯೋನಾರ್ಡ್‌ಮನ್

ಹೈದ್ರಾಬಾದ್ ನಿಜಾಮ್ ಸರ್ಕಾರಕ್ಕೆ ಎರವಲು ಸೇವೆಯ ಮೇಲೆ ಆಯ್ಕೆಯಾಗಿರುವಂತಹ ವ್ಯಕ್ತಿ ಕ್ಯಾಪ್ಟನ್ ಲಿಯೋನಾರ್ಡ್‌ಮನ್. ವೃತ್ತಿಯಿಂದ ಭೂವಿಜ್ಞಾನಿಯಾಗಿದ್ದನು. ಹಾಗೂ ಕೆಲವು ರೋಗಗಳಿಗೆ ಔಷಧಿಯನ್ನು ಸೂಚಿಸುತ್ತಿದ್ದನು. ಹೈದ್ರಾಬಾದ್ ದೋ-ಅಬ್ ಪ್ರಾಂತ್ಯ ಕುಡಿಯುವ ನೀರಿನ ಸಮಸ್ಯೆಯನ್ನು ಎದುರಿಸುತ್ತಿತ್ತು. ಈ ಸಮಸ್ಯೆಯನ್ನು ನಿವಾರಿಸಲು ಮನ್ ಅನೇಕ ಬಾವಿಗಳನ್ನು ತೋಡಿಸಿದನು. ಇವನು ತೋಡಿಸಿದ ಬಾವಿಗಳಲ್ಲಿ ಇಂದಿಗೂ ಜನರು ನೀರನ್ನು ಉಪಯೋಗಿಸುತ್ತಿರುವರು. ನವಲಿ, ವಂದಲಿ, ಕರಡೋಣಿ, ಬುದ್ದಿನ್ನಿ, ಆಶಾಳ್‌ತಾಂಡ ಮುಂತಾದ ಕಡೆಗಳಲ್ಲಿ ಕ್ರಿ.ಶ. ೧೯೩೧ ರ ಸಮಯಕ್ಕೆ ೧೨೦೦ ಬಾವಿಗಳನ್ನು ತೋಡಿಸಿದನು.[೧೧] ಅನೇಕ ವೈಜ್ಞಾನಿಕ ಕ್ರಮಗಳನ್ನು ಬಳಸಿ ಬಾವಿಗಳನ್ನು ನಿರ್ಮಿಸಿದನು. ಅಷ್ಟಕೋನಾಕೃತಿಗಳಿಂದ ಕೂಡಿದಂತಹ ಹಾಗೂ ಹೈದ್ರಾಬಾದ್ ನಿಜಾಮ್ ಸರ್ಕಾರದ ಹೆಸರು, ಜೊತೆಗೆ ತನ್ನ ಹೆಸರನ್ನೂ ಬಾವಿಯ ಮೇಲೆ ಬರೆಸಿದ್ದಾನೆ. ಈ ಸಾಧನೆಯನ್ನು ಸ್ಮರಿಸಿ ಅಂದಿನ ನಿಜಾಮ್ ಸರ್ಕಾರ ಸಾವಿರ ಬಾವಿಗಳ ದೊರೆ ಅಥವಾ ಬಾವಡಿಸಾಬ್ ಎಂದು ಬಿರುದು ನೀಡಿ ಗೌರವಿಸಲಾಗಿತ್ತು. ಕ್ರಿ.ಶ. ೧೮೭೪ ರಲ್ಲಿ ಭೂ-ಸಮೀಕ್ಷಾ ಅಧಿಕಾರಿಯಾದ ರಾಬರ್ಟ್‌ಬ್ರೂಸ್‌ಫೂಟ್ ಹಟ್ಟಿಯಲ್ಲಿ ಸಮೀಕ್ಷೆ ನಡೆಸಿ ಪುರಾತನ ಚಿನ್ನದ ನಿಕ್ಷೇಪದ ಬಗ್ಗೆ ಮಾಹಿತಿ ನೀಡಿದನು. ಈತನ ನಂತರ ಅನೇಕ ಸಾಕ್ಷ್ಯಾಧಾರಗಳ ಸಹಿತ ಪುರಾತನ ಹಟ್ಟಿ ಗಣಿಯ ವಿವರಣೆಯನ್ನು ನೀಡಿದವನು. ಕ್ಯಾಪ್ಟನ್ ಮನ್, ಇವರು ಸಂಗ್ರಹಿಸಿದ ಟಿಪ್ಪಣಿಯ ಪ್ರಕಾರ ೨೦೦ಕ್ಕೂ ಹೆಚ್ಚು ಪುರಾತನ ಗಣಿಗಳನ್ನು ಪತ್ತೆ ಹಚ್ಚಿದ್ದು, ದಕ್ಷಿಣ ಭಾರತದಾದ್ಯಂತ ಪುರಾತನ ಚಿನ್ನದ ಗಣಿಗಳಿಂದ ಒಂದು ಅಂಶ ಸ್ಪಷ್ಟವಾಗಿ ತಿಳಿಯುತ್ತದೆ. ಎಲ್ಲೆಲ್ಲಿ ಚಿನ್ನಭರಿತ ಶಿಲೆಗಳಿವೆಯೋ ಅಲ್ಲಿ ಎರಡು-ಮೂರು ಔನ್ಸ್‌ಗಿಂತ ಹೆಚ್ಚಾಗಿರುವ ಚಿನ್ನದಿಂದ ಕೂಡಿದ ಯಾವ ಒಂದು ಶಿಲಾಸ್ತರವೂ ಪ್ರಾಚೀನರ ಕಣ್ಣಿನಿಂದ ತಪ್ಪಿಸಿಕೊಂಡಿಲ್ಲ. ಬೆಂಕಿ ಹಾಕಿ, ಕಾವುಕೊಟ್ಟು ಗಣಿ ಮಾಡುವ ತಂತ್ರವನ್ನು ರೂಢಿಸಿಕೊಂಡಿದ್ದರು. ಅನೇಕ ವೇಳೆ ಅಂತರ್ಜಲದ ಮಟ್ಟವನ್ನು ಭೇದಿಸಿ ಗಣಿ ಮುಂದುವರೆಸಿರಲಿಲ್ಲ.[೧೨]

ಅತ್ಯಂತ ಆಳದವರೆಗೆ ಗಣಿ ತೋಡಲು ಇವರಿಗಿದ್ದ ಅನುಕೂಲಗಳಾದರೂ ಏನು? ಆಳಕ್ಕೆ ಇವರಿಳಿದ ಬಗೆ, ಗಣಿ ತೋಡಲು ತೆಗೆದುಕೊಂಡ ಸಮಯವೆಷ್ಟು ಎಂಬುದನ್ನು ತಿಳಿಯುವುದು ಕಷ್ಟಕರವಾಗಿದ್ದು ಹಟ್ಟಿ ಗಣಿಯಲ್ಲಿ ಹಿಂದೆ ಗಣಿ ಮಾಡಲು ಬಳಸಿದ್ದ ಹಗ್ಗಗಳು ಪತ್ತೆಯಾಗಿವೆ. ಅವುಗಳು ಗೋಡೆಗಳಿಗೆ ಬಡಿದು ಸವೆಸಿರುವಂತಹ ಗುರುತಿನಿಂದ ಗಣಿ ಮಾಡಿದ್ದರ ಬಗ್ಗೆ ಊಹಿಸಬಹುದು. ಕೆಲವು ಮರದ ದಿಮ್ಮಿಗಳು ಗರಗಸದಿಂದ ಕೊಯ್ಯಲಾರದಷ್ಟು ಗಟ್ಟಿಯಾಗಿವೆ. ಹಾಗೂ ನೂರಾರು ಉರುಳು ಕಲ್ಲುಗಳು, ಕಲ್ಲಿನ ಕುಟ್ಟಣಿಗಳು, ಒರಳುಕಲ್ಲು ಪತ್ತೆಯಾಗಿವೆ. ಚಿನ್ನವನ್ನು ಅದಿರಿನಿಂದ ಪ್ರತ್ಯೇಕಿಸಲು ತಂತ್ರಜ್ಞಾನದ ವಿಶೇಷತೆಯು ಪ್ರಾಚೀನರಿಗೆ ತಿಳಿದಿರಲಿಲ್ಲ. ಕಲ್ಲನ್ನು ಅರೆದು ಸಣ್ಣಗೆ ಪುಡಿಮಾಡಿ ನದಿ ತೊರೆಗಳ ಬಳಿಗೆ

ಒಯ್ದು ಜಾಲಿಸಿ ಹಗುರವಾದ ಕಲ್ಲುಮಣ್ಣನ್ನು ಬೇರ್ಪಡಿಸಿ ತಳದಲ್ಲಿ ಕೂತ ಚಿನ್ನವನ್ನು ಸಂಗ್ರಹಿಸುತ್ತಿದ್ದರು. ಇಷ್ಟೇ ಅಲ್ಲಾ ಹಟ್ಟಿ ಚಿನ್ನದ ಗಣಿಯ ಚರಿತ್ರೆಯೇ ನಮಗೆ ಮನ್ ಸಂಗ್ರಹಿಸಿದ ಟಿಪ್ಪಣಿಯಿಂದ ಸಿಗುತ್ತದೆ. ಹಟ್ಟಿ ಗಣಿಯ ಬಗ್ಗೆ ವಿಫುಲವಾದ ಮಾಹಿತಿಯನ್ನು ನೀಡಿದ ಕ್ಯಾಪ್ಟನ್ ಲಿಯೋನಾರ್ಡ್ ಮನ್ ಹೃದಯಾಘಾತದಿಂದ ಅಕಾಲ ಮರಣಕ್ಕೆ ತುತ್ತಾಗುತ್ತಾರೆ. ಇವರ ಶವವನ್ನು ಹುಟ್ಟೂರಿಗೆ ಕಳುಹಿಸಲಾಗದೆ, ಸಂಸ್ಕಾರವನ್ನು ಲಿಂಗಸ್ಗೂರಿನಲ್ಲಿ ನಿಜಾಮ್ ಸರ್ಕಾರದ ನೇತೃತ್ವದಲ್ಲಿ ನಡೆಸಲಾಯಿತು. ನಿಜಾಮ್ ಸರ್ಕಾರವು ದೊಡ್ಡದಾದ ಕಮಾನುಗಳನ್ನು ನಿರ್ಮಿಸಿ, ಸಮಾಧಿಯ ಮೇಲೆ ಮನ್ ಪರಿಚಯವನ್ನು ಕುರಿತಂತೆ ಆಂಗ್ಲಭಾಷೆಯಲ್ಲಿ ಬರೆಸಿದೆ. ಆದರೆ ಪ್ರಸ್ತುತ ಸಂದರ್ಭದಲ್ಲಿ ಈ ಸ್ಮಾರಕ ಸ್ಥಳೀಯ ಪುರುಷರ ಶೌಚಾಲಯಾವಗಿ ಮಾರ್ಪಟ್ಟಿದೆ. ಇದಕ್ಕೆ ಸರ್ಕಾರದ ಅಲಕ್ಷ್ಯತನವೇ ಕಾರಣ. ಕ್ಯಾಪ್ಟನ್ ಮನ್ ಸಮಾಧಿಯ ಬಳಿಯೇ ಮೇಡೊಸ್ ಟೇಲರ್‌ರವರ ಪತ್ನಿಯನ್ನು ಶವ ಸಂಸ್ಕಾರ ಮಾಡಲಾಗಿದೆ. ಉತ್ತಮ ಸಾಧನೆಗೈದ ವ್ಯಕ್ತಿಗಳನ್ನು ಕೇವಲ ಪುಸ್ತಕಗಳಲ್ಲಿ ಗುರುತಿಸುವುದಷ್ಟೇ ಅಲ್ಲ, ಸ್ಮಾರಕಗಳನ್ನೂ ಸಂರಕ್ಷಿಸಬೇಕಾದದ್ದು ನಮ್ಮೆಲ್ಲರ ಕರ್ತವ್ಯ. ಹಟ್ಟಿ ಗಣಿ ಕಂಪನಿಯು ಸರ್ಕಾರಕ್ಕೆ ಮನವಿ ಪತ್ರ ಸಲ್ಲಿಸಿ ಈ ಸ್ಮಾರಕವನ್ನು ಸಂರಕ್ಷಿಸುವಂತೆ ಒತ್ತಾಯಿಸಬೇಕು. ಕ್ಯಾಪ್ಟನ್ ಲಿಯೋನಾರ್ಡ್ ಸಮಾಧಿಯ ಬಳಿಯೇ ಇನ್ನೂ ಕೆಲವು ವ್ಯಕ್ತಿಗಳ ಸಮಾಧಿಗಳಿವೆ. ಆದರೆ ಅವುಗಳು ಶಿಥಿಲಗೊಂಡಿರುವುದರಿಂದ ಯಾವುದೇ ಮಾಹಿತಿಯು ದೊರಕುತ್ತಿಲ್ಲ.

೨.೪ ಗಣಿಯ ಉಚ್ಛ್ರಾಯ ಕಾಲ

ಲಿಂಗಸ್ಗೂರಿನ ಹಟ್ಟಿ-ಮಸ್ಕಿ ಶಿಷ್ಟ ಭೂವಲಯವೆಂದೇ ಕರೆಯಲಾಗುವ ಹಟ್ಟಿಯಲ್ಲಿ ೩೦೦ ಕ್ಕಿಂತ ಹೆಚ್ಚಿನ ಪುರಾತನ ಚಿನ್ನದ ಗಣಿಗಳಿವೆ. ೧೯೫೬ ರಲ್ಲಿ ರಾಜ್ಯಗಳ ಪುನರ್‌ರಚನೆಯಾದಾಗ ಬಳ್ಳಾರಿ ಮತ್ತು ಗುಲ್ಬರ್ಗಾ ಜಿಲ್ಲೆಗಳು ಮೈಸೂರು ರಾಜ್ಯದೊಡನೆ ಐಕ್ಯವಾದುದು ಹಾಗೂ ಆ ಜಿಲ್ಲೆಗಳಲ್ಲಿದ್ದ ಚಿನ್ನದ ಗಣಿಗಳೂ ರಾಜ್ಯಕ್ಕೆ ವರ್ಗಾಯಿಸಲ್ಪಟ್ಟವು. ಅದೇ ವರ್ಷ ರಾಯಚೂರು ಪ್ರದೇಶದಲ್ಲಿ ಚಿನ್ನದ ಗಣಿ ಉದ್ಯಮ ನಡೆಸುತ್ತಿದ್ದ 'ಹೈದ್ರಾಬಾದ್ ಗೋಲ್ಡ್ ಮೈನ್ಸ್' ಕಂಪನಿಯು ಹೆಸರು 'ದಿ ಹಟ್ಟಿ ಗೋಲ್ಡ್ ಮೈನ್ಸ್ ಲಿಮಿಟೆಡ್' ಎಂದು ಬದಲಾಯಿಸಿತು. ೧೮ ನೇ ಶತಮಾನದ ಆದಿಭಾಗದಲ್ಲಿ ನಮ್ಮ ಪುರಾತನರು ರಾಯಚೂರು ಮತ್ತು ಗುಲ್ಬರ್ಗಾ ಜಿಲ್ಲೆಗಳ ಕೆಲವು ಪ್ರದೇಶಗಳಲ್ಲಿ ಚಿನ್ನಕ್ಕಾಗಿ ಗಣಿಗಾರಿಕೆ ನಡೆಸುತ್ತಿದ್ದ ಹಳೆಯ ಗಣಿ ಪ್ರದೇಶಗಳು ಇದ್ದಿದ್ದು ಈಗಲೂ ಕಂಡುಬರುತ್ತವೆ. ರಾಯಚೂರು ಜಿಲ್ಲೆಯಲ್ಲಿ ಹಟ್ಟಿ, ವಂದಲಿ, ಕಡೋಣಿ, ತೋಪಲ ದೊಡ್ಡಿ, ಬೂದ್ದಿನ್ನಿ ಗಣಿಗಳು ಮುಖ್ಯವಾದವು. ಕೆಲವು ಕಡೆ ೨೦೦ ಮೀಟರ್‌ಗಳಿಗಿಂತ ಹೆಚ್ಚಿನ ಆಳಕ್ಕೆ ಗಣಿಗಳನ್ನು ತೋಡಿ ಬಿಟ್ಟಿರುವುದು ಕಂಡುಬಂದಿದೆ. ೧೮೮೭ ರಿಂದ ೧೮೯೯ ರವರೆಗೆ ಗಣಿಗಾರಿಕೆ ನಡೆದು ಎಲ್ಲಾ ಗಣಿಗಳು ಮುಚ್ಚಿದ್ದು ಆ ನಂತರ ಚಿನ್ನದ ಅದಿರಿನ ಬೆಲೆ ತೀರಾ ಕಡಿಮೆ ಇದ್ದು ಗಣಿಗಾರಿಕೆಯು ಮುಂದುವರೆಯಲು ಸಾಧ್ಯವಾಗದೇ ಗಣಿ ಕೆಲಸಗಳು ೧೯೨೦ ರ ಹೊತ್ತಿಗೆ ನಿಂತು ಹೋಗಿರಬಹುದು. ಈ ಸಮಯಕ್ಕೆ ಸುಮಾರು ೭೫ ಟನ್ನು ಚಿನ್ನವು ಉತ್ಪಾದನೆಯಾಗಿತ್ತು.

ಕ್ರಿ.ಶ. ೧೯೩೭ ರಲ್ಲಿ ಹೈದ್ರಾಬಾದ್ ಸರ್ಕಾರ ಹೈದ್ರಾಬಾದ್ ಗೋಲ್ಡ್ ಡೆವಲಪ್‌ಮೆಂಟ್ ಸಿಂಡಿಕೇಟ್ ಮತ್ತು ಜಾನ್ ಟೇಲರ್ ಕಂಪನಿ ಹಟ್ಟಿಯ ಪುರಾತನ ಚಿನ್ನದ ಗಣಿಗಳ ಕೂಲಂಕಷ ಅಧ್ಯಯನದಲ್ಲಿ ತೊಡಗಿದ್ದವು. ಆಗ ಚಿನ್ನದ ಬೆಲೆ ೩೭.೩೭ ರೂಪಾಯಿಗೆ ಏರಿತು. ಜೊತೆಗೆ ರಾಯಚೂರು ಜಿಲ್ಲೆ ಬರಪೀಡಿತ ಪ್ರದೇಶವಾಗಿದ್ದುದರಿಂದ ಪರಿಹಾರೋಪಾಯವಾಗಿ ಗಣಿಕಾರ್ಯವನ್ನು ಸರ್ಕಾರ ಕೈಗೆತ್ತಿಕೊಂಡಿತು. ಹಟ್ಟಿ ಚಿನ್ನದ ಗಣಿಗಳ ಅಭಿವೃದ್ಧಿಗೆ ಈ ಯೋಜನೆ ದಾರಿ ಮಾಡಿಕೊಟ್ಟಿತು. ೧೯೪೭ ರವರೆಗೂ ಗಣಿಕಾರ್ಯಾಚರಣೆ ಮುಂದುವರೆಯಲಿಲ್ಲ. ಕ್ರಿ.ಶ. ೧೯೪೮ ರಲ್ಲಿ ಹೈದ್ರಾಬಾದ್ ಗೋಲ್ಡ್‌ಮೈನ್ಸ್ ಕಂಪನಿ ಮತ್ತೇ ಚಿನ್ನವನ್ನು ಉತ್ಪಾದಿಸಲು ಆರಂಭಿಸಿತು. ೧೯೪೮ ರವರೆಗೆ ಇಲ್ಲಿ ಉತ್ಪಾದನೆಯಾದ ಚಿನ್ನ ೨೮೨೭ ಕಿ.ಗ್ರಾಂ. ಕರ್ನಾಟಕ ಏಕೀಕರಣದಿಂದ ಗಣಿಯ ಸ್ವಾಮ್ಯ ಕರ್ನಾಟಕ ಸರ್ಕಾರಕ್ಕೆ ಬಂದಿದೆ. ಕೋಲಾರದಲ್ಲಿರುವಂತೆ ಇಲ್ಲಿನ ಗಣಿಗಳಿಗೂ ತಮ್ಮದೇ ಆದ ತಾಂತ್ರಿಕ ಅನುಕೂಲಗಳಿವೆ. ೧೯೮೫ ರಲ್ಲಿ ಕರ್ನಾಟಕ ಸರ್ಕಾರ ನಡೆಸುತ್ತಿದ್ದ 'ಚಿತ್ರದುರ್ಗ ಕಾಪರ್ ಕಂಪನಿ ಲಿಮಿಟೆಡ್' ಮತ್ತು 'ಕರ್ನಾಟಕ ಕಾಪರ್ ಕನ್‌ಸಾರ್ಷಿಯಂ' ಕಂಪನಿಗಳು ಹಟ್ಟಿಗೋಲ್ಡ್ ಮೈನ್ಸ್ ಕಂಪನಿ ಯೊಡನೆ ಜೊತೆಗೂಡಿದವು. ಈ ಎರಡು ಕಂಪನಿಗಳು ಆರಂಭದಿಂದಲೂ ನಷ್ಟವನ್ನೇ ಅನುಭವಿಸುತ್ತಿದ್ದವು. ಕಂಪನಿಗಳು ಸಾಂದ್ರೀಕರಿಸುತ್ತಿದ್ದ ತಾಮ್ರದ ಸಾರವನ್ನು ಭಾರತ ಸರ್ಕಾರ 'ಹಿಂದೂಸ್ತಾನ್ ಕಾಪರ್ ಲಿಮಿಟೆಡ್' ಸಂಸ್ಥೆಗೆ ಮಾರುತ್ತಾ ಬರುತ್ತಿರುವುದರಿಂದ ಹಾಗೂ ಸಂಸ್ಥೆಯ ನಿಗದಿಪಡಿಸಿರುವ ತಾಮ್ರದ ಸಾರದ ಬೆಲೆ ತೀರಾ ಕಡಿಮೆಯಾಗಿರುವುದರಿಂದ ನಷ್ಟ ಸಂಭವಿಸುವುದು ಅನಿವಾರ್ಯವಾಗಿತ್ತು. ಸಂಸ್ಕರಿಸುತ್ತಿರುವ ತಾಮ್ರದ ಅದುರಿನ ದರ್ಜೆ ೦.೬ ರಿಂದ ೧.೦೦ ಶೇಕಡಾ ಆಗಿರುವುದು ಮುಖ್ಯ ಕಾರಣವಾಗಿದೆ. ಈ ಕಂಪನಿಗಳ ತಾಮ್ರದ ಸಾರ ಉತ್ಪನ್ನವನ್ನು ದಿನಕ್ಕೆ ೪೦೦ ಟನ್ನುಗಳಿಂದ ೧೦೦೦ ಟನ್ನುಗಳಿಗೆ ಹೆಚ್ಚಿಸುವ ಯೋಜನೆ ಇದೆ.

ಪ್ರಸ್ತುತ ಸಂದರ್ಭದಲ್ಲಿ ಹಟ್ಟಿ ಚಿನ್ನದ ಗಣಿಯು ಲಾಭಾಂಶದಿಂದ ಕೂಡಿದೆ. ಇದಕ್ಕೆ ಕಾರಣ 'ಊಟಿ' ಗ್ರಾಮದಲ್ಲಿ ಗಣಿಕಾರ್ಯಾಚರಣೆ ಆರಂಭಿಸಿದ್ದು ಹಾಗೂ ಚಿತ್ರದುರ್ಗ ಗಣಿ ಕಂಪನಿಯಾಗಿದೆ. ಹಟ್ಟಿ ಗಣಿಯಲ್ಲಿ ಭೂಮಿಯನ್ನು ಸಿಡಿಸಿ ಅನಿಯಮವಾಗಿ ಶೇಕಡವಾರು ಹೆಚ್ಚಳ ಚಿನ್ನ ದೊರಕುವ ಸೂಚನೆಗಳು ಸಿಕ್ಕರೆ ಅದನ್ನು ಹೊರಗಡೆ ತೆಗೆಯದೇ ಸಿಮೆಂಟ್ ಮತ್ತು ಕಂಕರ್‌ಗಳಿಂದ ಪ್ಲಾಸ್ಟರ್ ಮಾಡಿ ಶೇಖರಿಸಿಡುತ್ತಿದೆ. ಕಂಪನಿಯು ನಷ್ಟವನ್ನು ಎದುರಿಸುತ್ತಿದ್ದರೆ ಕಾರ್ಮಿರಿಗೆ ಹಣ ಕೊಡುವಂತಹ ಸಂದರ್ಭಗಳು ಬಂದಾಗ ಅದನ್ನು ಬಳಸಿಕೊಳ್ಳಲಾಗುತ್ತದೆ. ಈ ರೀತಿಯಾಗಿ ಹಟ್ಟಿ ಗಣಿಯಲ್ಲಿ ೪,೦೦೦ ಟನ್ನು ಚಿನ್ನವನ್ನು ಶೇಖರಿಸಿ ಇಟ್ಟುಕೊಂಡಿರುವುದನ್ನು ಕಂಪನಿಯ ಕೆಲವು ಅಧಿಕಾರಿಗಳು ಮೌಖಿಕವಾಗಿ ಹೇಳಿಕೊಂಡಿದ್ದಾರೆ.

೨.೫ ಗಣಿಯ ಸದ್ಯದ ಸ್ಥಿತಿಗತಿ

ಹಟ್ಟಿ ಚಿನ್ನದ ಗಣಿಯು ಪ್ರಸ್ತುತ ಸಂದರ್ಭದಲ್ಲಿ ದಿನಕ್ಕೆ ಕನಿಷ್ಠ ೬ ರಿಂದ ೭ ಕೆ.ಜಿ. ಬಂಗಾರವನ್ನು ಉತ್ಪಾದಿಸುತ್ತದೆ. ಹಟ್ಟಿ ಗಣಿಯಲ್ಲಿ ಎರಡು ಸಾಪ್ಟ್‌ಗಳಿಂದ ಗಣಿ ಕಾರ್ಯ ಮಾಡುತ್ತಿರುವುದು ತಿಳಿದು

ಬಂದಿದೆ. ಅದುವೇ ಮಲ್ಲಪ್ಪ ಸಾಫ್ಟ್ ಮತ್ತು ಸೆಂಟ್ರಲ್ ಸಾಫ್ಟ್ ತೀರ ಆಳದವರೆಗೆ ಅಂದರೆ ಸುಮಾರು ೩೦೦೦ ಮೀಟರ್‌ಗಳವರೆಗೆ ಅಗೆಯಲಾಗಿದ್ದು ಕಂಡುಬರುತ್ತದೆ.

ಇದರಲ್ಲಿ ಸಾಫ್ಟ್ ಒಂದಕ್ಕೆ ಮಲ್ಲಪ್ಪ ಎಂದು ಹೆಸರಿಡಲು ಕಾರಣ ಕೇಳಿದಾಗ ಈ ರೀತಿಯ ಮಾಹಿತಿ ತಿಳಿದುಬಂದಿದೆ. ಮಲ್ಲಪ್ಪ ಎಂಬುವರು ಹಟ್ಟಿ ಚಿನ್ನದ ಗಣಿಯ ಅಧ್ಯಕ್ಷರೂ ಮತ್ತು ರಾಜಕಾರಣಿಯೂ ಆಗಿದ್ದು ಇವರು ಈ ಸಾಫ್ಟ್‌ನ್ನು ಉದ್ಘಾಟಿಸಿದ ಕಾರಣ ಅದಕ್ಕೆ ಅದನ್ನು ಮಲ್ಲಪ್ಪ ಸಾಫ್ಟ್ ಎಂದು ಕರೆಯಲಾಯಿತು. ಮಲ್ಲಪ್ಪ ಸಾಫ್ಟ್‌ನಿಂದ ಚಿನ್ನದ ಅದಿರು ಹೆಚ್ಚಿನ ಪ್ರಮಾಣದಲ್ಲಿ ಹೊರ ತೆಗೆಯಲಾಗುತ್ತದೆ. ಕಬ್ಬಿಣದ ಸರಪಳಿಗಳಿಂದ ಭೂಮಿಯ ಆಳಕ್ಕೆ ಇಳಿದು ಅದಿರನ್ನು ಮೇಲಕ್ಕೆ ಹೊತ್ತು ತರುತ್ತದೆ. ಕೃತಕ ಗಾಳಿಯ ವ್ಯವಸ್ಥೆಯನ್ನು ಮಾಡಲಾಗಿದೆ. ಭೂಮಿಯ ಆಳಕ್ಕೆ ಡೈನಾಮಿಟ್ ಹಾಕಿ ಬಂಡೆಯನ್ನು ಸಿಡಿಸಿ ಅದನ್ನು ಟ್ರಕ್‌ಗಳ ಮೂಲಕ ಮೇಲಕ್ಕೆ ತರಲಾಗುತ್ತದೆ. ಅದು ನೇರವಾಗಿ ಮಿಲ್‌ಗಳಿಗೆ ಹೋಗಿ ಪುಡಿಯಾಗುತ್ತದೆ. ಅದಿರು ಸಣ್ಣಗೆ ಪುಡಿಯಾದ ನಂತರ ನೀರಿನಿಂದ ಮಿಶ್ರಣಗೊಳಿಸಿ ಜಾಲಿಸುವ ಕೆಲಸವು ಯಂತ್ರಗಳಿಂದಲೇ ನಡೆಯುತ್ತದೆ. ತದನಂತರ ಬೆಂಕಿಯಲ್ಲಿ ಕಾಯಿಸಿ ಹೊರತೆಗೆಯುವುದರಿಂದ ಚಿನ್ನವು ಕಸದಿಂದ ಹಾಗೂ ಅದಿರಿನಿಂದ ಶುದ್ಧವಾಗಿ ಹೊರಬರುತ್ತದೆ. ಈ ಕೆಲಸವು ದಿನ ೨೪ ಗಂಟೆಯವರೆಗೂ ನಡೆಯುತ್ತಲೇ ಇರುತ್ತದೆ. ಇವತ್ತಿನ ಸಂದರ್ಭದಲ್ಲಿ ಚಿನ್ನದ ಬೆಲೆಯು ಏರಿಕೆಯಾಗಿದ್ದು, ೧೦ ಗ್ರಾಂ ಚಿನ್ನಕ್ಕೆ ೧೦,೦೦೦ ರೂ ಮಾರಾಟವಾಗುತ್ತದೆ. ಇವತ್ತಿನ ದಿನ ಹಟ್ಟಿ ಚಿನ್ನದ ಗಣಿ ಕಂಪನಿಯು ಇಂಡೋಫಿಲ್ ಸಮಸ್ಯೆಯನ್ನು ಎದುರಿಸುತ್ತಲಿದೆ. ಇಲ್ಲಿಯ ಕಾರ್ಮಿಕರು ಇಂಡೋಫಿಲ್ ಕಂಪನಿಯನ್ನು ಸಂಪೂರ್ಣವಾಗಿ ವಿರೋಧಿಸುತ್ತಿರುವರು. ವಿದೇಶಿ ಕಂಪನಿಗೆ ಆಡಳಿತ ವಹಿಸಿದರೆ ಸ್ಥಳೀಯ ಕಾರ್ಮಿಕರುಗಳಿಗೆ ಉದ್ಯೋಗ ಬಗ್ಗೆ ಹಾಗೂ ಇತರ ಅವಕಾಶಗಳು ದೊರಕುವುದು ಕಷ್ಟವೆಂದು ಭಾವಿಸಿದ್ದಾರೆ. ಹಟ್ಟಿ ಗಣಿಯಲ್ಲಿ ಇನ್ನೂ ೭೫ ವರ್ಷಗಳವರೆಗೂ ಚಿನ್ನ ದೊರೆಯಬಹುದಾದ ಸಾಧ್ಯತೆಗಳಿವೆ ಎಂದು ಭೂಶಾಸ್ತ್ರಜ್ಞರ ಅಭಿಪ್ರಾಯವಾಗಿದೆ. ಆದರೆ ಒಂದು ರೀತಿಯಿಂದ ಪರಿಸರ ನಾಶಕ್ಕೆ ಎಡೆಮಾಡಿಕೊಡುತ್ತಿರುವುದು ಮರೆಯುವಂತಿಲ್ಲ. ಹಟ್ಟಿಚಿನ್ನದ ಗಣಿಕಂಪನಿಯ ಆಡಳಿತ ವ್ಯವಸ್ಥೆಯು ಡಿ.ವೈ. ವೆಂಕಟೇಶ್, ಜನರಲ್‌ಮ್ಯಾನೇಜರ್ ಇವರ ನೇತೃತ್ವದಲ್ಲಿ ಯಾವುದೇ ರೀತಿಯ ಸಮಸ್ಯೆಗಳಿಲ್ಲದೇ ಸುವ್ಯವಸ್ಥೆಯಿಂದ ಮುಂದುವರೆಯುತ್ತಿರುವುದು ಕಂಡು ಬರುತ್ತದೆ. ಗಣಿಯಲ್ಲಿ ಮಲ್ಲಪ್ಪ ಮತ್ತು ಸೆಂಟ್ರಲ್ ಸಾಫ್ಟ್‌ಗಳಿಗೆ ಪೂರಕವಾಗಿ ವಿಲೇಜ್‌ಸಾಫ್ಟ್ ಕಾರ್ಯನಿರ್ವಹಿಸುತ್ತಿದೆ. ಗಣಿಕಾರ್ಯ ಸುಸೂತ್ರವಾಗಿ ಮುಂದುವರೆಯಲು ಮತ್ತು ಅಭಿವೃದ್ಧಿ ಪಥದತ್ತ ಸಾಗಲು ಯಂತ್ರಗಳಿಗೆ ಸಮರ್ಪಕ ವಿದ್ಯುತ್ ಮತ್ತು ಡಿಸೇಲ್ ಇತರ ರಾಸಾಯನಿಕ ವಸ್ತುಗಳ ಪೂರೈಕೆಯಲ್ಲಿ ಯಾವುದೇ ವ್ಯತ್ಯಯ ಇರುವುದಿಲ್ಲ. ಮತ್ತು ಒಟ್ಟು ಕಾರ್ಮಿಕರುಗಳ ಹಗಲಿರುಳು ಶ್ರಮವಹಿಸಿ ದುಡಿಯುವುದರಿಂದ ಗಣಿಯ ಸದ್ಯದ ಸ್ಥಿತಿಯು ಯಾವುದೇ ತೊಂದರೆಗಳಿಲ್ಲದೇ ಮುಂದುವರೆಯುತ್ತಿರುವುದು ಕ್ಷೇತ್ರಕಾರ್ಯದ ಸಂದರ್ಭದಲ್ಲಿ ತಿಳಿದುಬಂದಿದೆ.

ಅಡಿಟಿಪ್ಪಣಿಗಳು

೧. ಕರ್ನಾಟಕ ಸಂಗಾತಿ, ಕನ್ನಡ ಅಭಿವೃದ್ಧಿ ಪ್ರಾಧಿಕಾರ, ಪು.೧೨ ರಿಂದ ೧೫

೨. Mysore State Raichur Distric Gezatear p.255-270

೩. ಪ್ರವಾಸ ಕಂಡ ಇಂಡಿಯಾ ಸಂಪುಟ-೧, ಎಚ್.ಎಲ್.ನಾಗೇಗೌಡ, ಪು.೭ ರಿಂದ ೯

೪. ಕರ್ನಾಟಕ ಸಂಗಾತಿ, ಕನ್ನಡ ಅಭಿವೃದ್ಧಿ ಪ್ರಾಧಿಕಾರ, ಪು.೧೭ ರಿಂದ ೨೦

೫. ಕನ್ನಡ ಶಾಸನಗಳಲ್ಲಿ ಸಾಂಸ್ಕೃತಿಕ ಅಧ್ಯಯನ, ಡಾ.ಚಿದಾನಂದ ಮೂರ್ತಿ

೬. ಕರ್ನಾಟಕ ಖನಿಜ ಸಂಪತ್ತು, ಪಿ.ಬಿ.ರಾಧಾಕೃಷ್ಣ, ಪು.೧೫೪-೨೦೪

೭. ರಾಯಚೂರು ಜಿಲ್ಲಾ ದರ್ಶನ

೮. ರಾಯಚೂರು ಜಿಲ್ಲೆ ಗ್ಯಾಸಿಟೇಯರ್, ಪು.

೯. ಮೌರ್ಯ ಮತ್ತು ಶಾತವಾಹನ ಯುಗ, ಲಕ್ಷ್ಮಣ್ ತೆಲಗಾವಿ, ಪು.೨೮ ರಿಂದ ೩೦

೧೦. ಭಿಲ್ಲಮ ಸ್ಮರಣ ಸಂಚಿಕೆ, ಪು.೭೫ ರಿಂದ ೭೬

೧೧. ರಾಜರ ಲೋಹ ಲೋಹಗಳ ರಾಜ: ಚಿನ್ನ, ಟಿ.ಆರ್.ಅನಂತರಾಮು, ಪು.೮೦ ರಿಂದ ೮೨

ಅಧ್ಯಾಯ ಮೂರು

ಹಟ್ಟಿ ಚಿನ್ನದ ಗಣಿಯ ಪ್ರಚಲಿತ ಅಧ್ಯಯನ

ಅಧ್ಯಾಯ ಮೂರು

ಹಟ್ಟಿ ಚಿನ್ನದ ಗಣಿಯ ಪ್ರಚಲಿತ ಅಧ್ಯಯನ


೩.೧ ಸಾಮಾಜಿಕ ನೆಲೆಯ ಅಧ್ಯಯನ

ಹಟ್ಟಿ ಚಿನ್ನದ ಗಣಿ ಕಂಪನಿಯ ಕಾರ್ಮಿಕರುಗಳ ಸಾಮಾಜಿಕ ಸ್ಥಿತಿಗತಿಗಳನ್ನು ಕುರಿತು ವಿವರಿಸಲು ನಿರ್ಧರಿಸಿಕೊಳ್ಳಲಾಗಿದೆ. ಗಣಿಕಾರ್ಮಿಕರು ಬೇರೆ ಬೇರೆ ಪ್ರದೇಶಗಳಿಂದ ಬಂದವರಾಗಿದ್ದಾರೆ. ಇವರಿಗೆ ಕಂಪನಿಯು ಅನೇಕ ಮೂಲಭೂತ ಸೌಲಭ್ಯಗಳು ಮತ್ತು ಅವಕಾಶಗಳನ್ನು ಪೂರೈಸುವಲ್ಲಿ ಯಶಸ್ವಿಯಾಗಿದ್ದಾರೆ. ಈ ಕಾರ್ಮಿಕರು ಆಂಧ್ರ, ಗೋವಾ, ಕೇರಳ, ತಮಿಳುನಾಡು ಪ್ರದೇಶಗಳಿಂದ ಬಂದವರಾಗಿದ್ದು ವಿವಿಧ ಸಂಸ್ಕೃತಿ, ಭಾಷೆ, ಧರ್ಮದವರಾಗಿದ್ದಾರೆ. ಕಂಪನಿಯು ಸುಮಾರು ೨೦೭೩ ಮನಗಳನ್ನು ನಿರ್ಮಿಸಿದ್ದು, ಅದರಲ್ಲಿ ೧೪೦ ಮನೆಗಳು ಪ್ರಥಮ ದರ್ಜೆಯ ನೌಕರರಿಗೆ ಹಂಚಿಕೆಯಾದರೆ ಉಳಿದಂತಹ ಮನೆಗಳು ದ್ವಿತೀಯ ಮತ್ತು ತೃತೀಯ ನೌಕರರಿಗೆ ಹಂಚಿಕೆಯಾಗಿರುವುದು ಕ್ಷೇತ್ರಕಾರ್ಯದ ಸಂದರ್ಭದಲ್ಲಿ ತಿಳಿದುಬಂದಿದೆ. ಸ್ಥಳೀಯ ಕಾರ್ಮಿಕರಿಗೆ ಮಾತ್ರ ಮನೆಗಳನ್ನು ನೀಡಿರುವುದಿಲ್ಲ. ಏಕೆಂದರೆ ಸುಮಾರು ಹತ್ತು ಕಿ.ಮೀ. ಅಂತರದಲ್ಲಿರುವ ಮನೆಗಳನ್ನು ನೀಡಲಾಗುವುದಿಲ್ಲವೆಂದು ನಿಯಮ ಹಾಕಿಕೊಂಡಿದೆ. ಕ್ಷೇತ್ರಕಾರ್ಯದ ಸಂದರ್ಭದಲ್ಲಿ ಕಾರ್ಮಿಕರನ್ನು ಸಂದರ್ಶಿಸಿದಾಗ ಕಂಪನಿಯಲ್ಲಿ ಕೆಲಸ ಮಾಡುವುದರಿಂದ ಜೀವನ ಪದ್ಧತಿಯು ತುಂಬಾ ಸುಧಾರಿಸಿರುವುದಾಗಿ ತಿಳಿಸಿದ್ದಾರೆ. ಹಬ್ಬಹರಿದಿನಗಳಲ್ಲಿ ಸಾಮೂಹಿಕವಾಗಿ ಪಾಲ್ಗೊಳ್ಳುತ್ತೇವೆ ಎಂದು ತಿಳಿಸಿರುವರು.

ಕಾರ್ಮಿಕ ಶಿಕ್ಷಕರಾದ ಶ್ರೀ ಮಲ್ಲಿಕಾರ್ಜುನ ರೆಡ್ಡಿ ಅವರು ಅನೇಕ ಸಾಂಸ್ಕೃತಿಕ ಚಟುವಟಿಕೆಗಳನ್ನು ಕಂಪನಿಯ ವತಿಯಿಂದ ಏರ್ಪಡಿಸಿ ಕಾರ್ಮಿಕರೆಲ್ಲಾ ಭಾಗವಹಿಸುವಂತೆ ನೋಡಿಕೊಳ್ಳುತ್ತಾರೆ. ಕಂಪನಿಯಲ್ಲಿ ಇದುವರೆಗೂ ಅನೇಕ ಯುವ ಜನಮೇಳದ ವತಿಯಿಂದ ಡೊಳ್ಳುಕುಣಿತ, ನಾಟಕ, ಸಂಗೀತ ಮುಂತಾದ ಮನೋರಂಜನೆಗಳು ಏರ್ಪಡಿಸಿರುವುದು ಕಂಪನಿಯು ಹೊರತಂದಿರುವ ಮಾಸಪತ್ರಿಕೆಯಾದ 'ಹೊನ್ನಕಿರಣ' ದಿಂದ ಮತ್ತು ಕಾರ್ಮಿಕರುಗಳ ನೇರ ಸಂದರ್ಶನದಿಂದ ತಿಳಿದಿರುತ್ತದೆ.

ಕ್ಷೇತ್ರಕಾರ್ಯದ ಸಂದರ್ಭದಲ್ಲಿ ಹಟ್ಟಿಕಂಪನಿಯು ೨೦೦೫ ರ ಡಿಸೆಂಬರ್ ಕೊನೆಯ ವಾರದಲ್ಲಿ ಸಂತ ಶಿಶುನಾಳ ಷರೀಫ ಮತ್ತು ಸ್ವಾತಂತ್ರ್ಯದ ಕಿಚ್ಚು, ಜಗಜ್ಯೋತಿ ಬಸವಣ್ಣ ಎಂಬ ಸಾಮಾಜಿಕ ನಾಟಕಗಳನ್ನು ಏರ್ಪಡಿಸಿರುವುದು ನೇರವಾಗಿಯೇ ಮನಗಾಣಬಹುದು.

ಹಟ್ಟಿ ಚಿನ್ನದಗಣಿ ಒಟ್ಟು ಮಹಿಳಾ ಕಾರ್ಮಿಕರನ್ನು ತೋರಿಸುವ ನಕ್ಷೆ



A= 10
B= 15
C= 30
D= 99


ಎ ಪ್ರಥಮ ದರ್ಜೆ ಕಾರ್ಮಿಕರು
ಬಿ. ದ್ವಿತೀಯ ದರ್ಜೆ ಕಾರ್ಮಿಕರು
ಸಿ. ತೃತೀಯ ದರ್ಜೆ ಕಾರ್ಮಿಕರು
ಡಿ. ನಾಲ್ಕನೆಯ ದರ್ಜೆ ಕಾರ್ಮಿಕರು
X=ಅಕ್ಷಾಂಶ ಕಾರ್ಮಿಕರ ಗುಂಪು
Y=ಅಕ್ಷಾಂಶ ಕಾರ್ಮಿಕರ ಸಂಖ್ಯೆ

ಅಲ್ಲದೆ, ಕಂಪನಿಯು ಅನುಕಂಪದ ಆಧಾರದ ಮೇಲೆ ಕೆಲಸಕ್ಕೆ ಸೇರಿಸಿಕೊಳ್ಳುವುದರಿಂದ ಜೀವನಾಂಶಕ್ಕೆ ಯಾವುದೇ ತೊಂದರೆಯಿರುವುದಿಲ್ಲ. ಜೊತೆಗೆ ಅಲ್ಲಿ ಕೆಲಸ ನಿರ್ವಹಿಸುತ್ತಿರುವ ಕಾರ್ಮಿಕರು ನಿವೃತ್ತಿಯಾದಾಗ್ಯೂ ಅದೇ ಕುಟುಂಬದಿಂದಲೇ ಇಲ್ಲವೆ ಸಂಬಂಧಿಕರ ಕುಟುಂಬಗಳ ಸದಸ್ಯರಿಗೆ ಕೆಲಸ ನೀಡುವುದರಿಂದ ಜೀವನ ಭದ್ರತೆ ಇರುವುದು ವಿಶೇಷ.

೩.೧.೧ ಕಾರ್ಮಿಕರ ಸ್ಥಿತಿಗತಿ

ಹಟ್ಟಿ ಗಣಿ ಕಂಪನಿಯಲ್ಲಿ ಸುಮಾರು ೪೦೦೦/- ಜನ ಕಾರ್ಮಿಕರು ಅರ್ಹತೆಯ ಆಧಾರದ ಮೆಲೆ ವಿವಿಧ ಶ್ರೇಣಿಯಲ್ಲಿ ಕೆಲಸ ಮಾಡುತ್ತಿರುವರು. ಪ್ರಸ್ತುತ ಸಂದರ್ಭದಲ್ಲಿ ಹಟ್ಟಿ ಚಿನ್ನದ ಗಣಿಯು ಲಾಭಾಂಶದಿಂದ ಕೂಡಿದೆ. ಇದಕ್ಕೆ ಕಾರಣ ಹೆಚ್ಚುವರಿ ಚಿನ್ನದ ಅದಿರು ಶೋಧಿಸಿ ಹೊರ ತೆಗೆಯುತ್ತಿರುವುದೇ ಆಗಿದೆ. ಪ್ರಚಲಿತ ಸಂದರ್ಭದಲ್ಲಿ ಕಾರ್ಮಿಕರ ಸ್ಥಿತಿಗತಿಗಳು ತುಂಬಾ ಸುಧಾರಿಸಿರುವುದು ಕಂಡುಬರುತ್ತದೆ. ಏಕೆಂದರೆ ೧೯೫೦ ಕ್ಕಿಂತ ಪೂರ್ವ ಕಾರ್ಮಿಕರ ಸ್ಥಿತಿಗತಿಗಳು ಶೋಚನೀಯ ಸ್ಥಿತಿಯಿಂದ ಕೂಡಿತ್ತು. ಆ ಸಮಯದಲ್ಲಿ ಯಂತ್ರಗಳು ಉಪಯೋಗವಿರಲಿಲ್ಲ. ಎಲ್ಲಾ ಕೆಲಸಗಳು ಮಾನವ ಶಕ್ತಿಯಿಂದಲೇ ನಡೆಯುತ್ತಿತ್ತು. ಹಾಗೂ ಕಾರ್ಮಿಕರ ಸಂಖ್ಯೆಯೂ ಕಡಿಮೆ ಇದರಿಂದಾಗಿ ಕಂಪನೆಯು ಅನೇಕ ಸಮಸ್ಯೆಗಳನ್ನು ಎದುರಿಸುತ್ತಿತ್ತು. ಸಾಮಾನ್ಯವಾಗಿಯೇ ಇಂತಹ ಸಂದರ್ಭದಲ್ಲಿ ಕಾರ್ಮಿಕರುಗಳ ಮೂಲಭೂತ ಪೂರೈಕೆಯೂ ಆಗುತ್ತಿರಲಿಲ್ಲ. ಎಂದು ೧೩.೧೨.೨೦೦೫ ರಂದು ಕ್ಷೇತ್ರಕಾರ್ಯದ ಅವಧಿಯಲ್ಲಿ ಕಾರ್ಮಿಕರನ್ನು ಸಂದರ್ಶಿಸಿದಾಗ ತಿಳಿದು ಬಂದಿತು. ಮೇಲಿನ ಯಾವ ಸಮಸ್ಯೆಗಳು ಇಂದಿನ ಕಾರ್ಮಿಕರಿಗೆ ಹೆಚ್ಚಿನ ಪ್ರಮಾಣದಲ್ಲಿ ಇರಲಿಕ್ಕಿಲ್ಲ. ಏಕೆಂದರೆ ಕಂಪನಿಯ ಉತ್ತಮ ಬೆಳವಣಿಗೆಯಿಂದ ಕಾರ್ಮಿಕರಿಗೆ ಎಲ್ಲಾ ರೀತಿಯ ಅವಕಾಶಗಳು, ಸೌಲಭ್ಯಗಳು, ದೊರಕುವಂತೆ ಮಾಡುವಲ್ಲಿ ಯಶಸ್ವಿಯಾಗಿದೆ. ಕಂಪನೆಯೂ ಕಾರ್ಮಿಕರಿಗೆ ಶ್ರೇಣಿ ವ್ಯವಸ್ಥೆಯಲ್ಲಿ ವಸತಿಗಳನ್ನು ನಿರ್ಮಿಸಿ ಕೊಟ್ಟಿರುವುದನ್ನು ಕಾಣಬಹುದು. ಪ್ರಥಮ ದರ್ಜೆ ನೌಕರರಿಗೆ ಎಲ್ಲಾ ಸೌಲಭ್ಯಗಳಿಂದ ಕೂಡಿದ ವ್ಯವಸ್ಥಿತವಾದ ಗೃಹಗಳನ್ನು ನಿರ್ಮಿಸಿ ಕೊಟ್ಟಿದೆ. ದ್ವಿತಿಯ ದರ್ಜೆ ನೌಕರರಿಗೆ ಸಣ್ಣ ಪ್ರಮಾಣದ ಮೂಲಭೂತ ಸೌಕರ್ಯಗಳು ಇಡೇರಿಸುವಂತೆ ಗೃಹಗಳನ್ನು ನಿರ್ಮಿಸಿ ಕೊಟ್ಟಿದೆ. ಹಟ್ಟಿ ಕಂಪೆನಿಯು ಉಚಿತ ವಿದ್ಯುತ್ ವ್ಯವಸ್ಥೆ ಕುಡಿಯುವ ನೀರಿನ ವ್ಯವಸ್ಥೆ ಇತರೆ ಅವಶ್ಯಕ ವಸ್ತುಗಳನ್ನು ಒದಗಿಸಿದೆ. ಕಾರ್ಮಿಕರಿಗೆ ಸೊಸೈಟಿ ವ್ಯವಸ್ಥೆ (ಸಹಕಾರ ಸಂಘ) ಯನ್ನು ಮಾಡಿಕೊಟ್ಟಿದೆ. ಸೊಸೈಟಿಯಲ್ಲಿ ಕಡಿಮೆ ಬೆಲೆಗೆ ಅಕ್ಕಿ, ಸಕ್ಕರೆ, ಸೀಮೆ ಎಣ್ಣೆಯನ್ನು, ನೀಡಲಾಗುತ್ತಿದೆ. ಕಾರ್ಮಿಕರ ವಸತಿ ನಿಲಯಗಳು ಸುಮಾರು ೩೦೦೦/- ಗಳಿರಬಹುದು. ಆದರಲ್ಲಿ ೧೦೦೦ ಮನೆಗಳು ಪ್ರಥಮ ದರ್ಜೆ ನೌಕರರಿಗೆ ಹಂಚಿಕೆಯಾಗಿದ್ದರೆ. ಉಳಿದ ೨೦೦೦ ವಸತಿಗಳು ದ್ವಿತಿಯ ಮತ್ತು ತೃತೀಯ ದರ್ಜೆ ನೌಕರರಿಗೆ ಹಂಚಿಕೆಯಾಗಿದೆ. ಇದರ ಜೊತೆಗೆಯೇ ೧೦ ಎಕರೆ ಭೂಮಿಯನ್ನು ಲಿಂಗಸ್ಗೂರು ಮಾರ್ಗದಲ್ಲಿ ವಸತಿಗಳ ನಿರ್ಮಾಣಕ್ಕಾಗಿ ಖರೀದಿಸಿದೆ. ನೊಂದಾಯಿಸಿಕೊಳ್ಳದ ವ್ಯಕ್ತಿಗಳಿಗೆ ಯಾವುದೇ ರೀತಿಯ ಸೌಲಭ್ಯಗಳು ಕಂಪೆನಿಯು ಒದಗಿಸುವುದಿಲ್ಲ. ಹಟ್ಟಿ ಕಂಪನೆಯು ಕಾರ್ಮಿಕರಿಗಾಗಿ ವೈಧ್ಯಕೀಯ ಸೌಲಭ್ಯಗಳು ಸ್ಥಳೀಯ ಮಟ್ಟದಲ್ಲಿಯೇ ರಾಯಚೂರು ಜಿಲ್ಲೆಯಿಂದ ಹಿರಿಯ ವೈಧ್ಯಧಿಕಾರಿಗಳು ವಾರಕ್ಕೆ

ಹಟ್ಟಿ ಚಿನ್ನದಗಣಿ ಒಟ್ಟು ಕಾರ್ಮಿಕರನ್ನು ತೋರಿಸುವ ನಕ್ಷೆ



A= 155
B= 138
C= 2002
D= 1778

ಎ ಪ್ರಥಮ ದರ್ಜೆ ಕಾರ್ಮಿಕರು
ಬಿ. ದ್ವಿತೀಯ ದರ್ಜೆ ಕಾರ್ಮಿಕರು
ಸಿ. ತೃತೀಯ ದರ್ಜೆ ಕಾರ್ಮಿಕರು
ಡಿ. ನಾಲ್ಕನೆಯ ದರ್ಜೆ ಕಾರ್ಮಿಕರು
X=ಅಕ್ಷಾಂಶ ಕಾರ್ಮಿಕರ ಗುಂಪು
Y=ಅಕ್ಷಾಂಶ ಕಾರ್ಮಿಕರ ಸಂಖ್ಯೆ

ಎರಡು ಸಾರಿ ಬಂದು ಚಿಕಿತ್ಸೆ ಮಾಡುತ್ತಾರೆ. ಹಾಗೂ ಸಾಮಾನ್ಯವಾಗಿ ಹಟ್ಟಿ ಕಂಪನಿಯ ಆಸ್ಪತ್ರೆಯಲ್ಲಿ ನಿರಂತರ ಸೇವೆಯು ದೊರೆಯುತ್ತದೆ. ಕಾರ್ಮಿಕರು ತಮ್ಮ ಕುಂದು-ಕೊರತೆಗಳು, ಇನ್ನಿತರ ಸಮಸ್ಯೆಗಳನ್ನು ಕುರಿತಂತೆ ಚರ್ಚಿಸಲು ಕ್ಲಬ್‌ನ್ನು ನಿರ್ಮಿಸಿಕೊಂಡಿದ್ದಾರೆ. ಇಲ್ಲಿ ಮಹಿಳಾ ಕಾರ್ಮಿಕರುಕೂಡ ಹೆಚ್ಚಿನ ಪ್ರಾಶಸ್ತ್ಯವನ್ನು ಹೊಂದಿದ್ದಾರೆ. ಇಲ್ಲಿ ತಮ್ಮ ಸಮಸ್ಯೆ ಹಾಗೂ ಸಾಂಸ್ಕೃತಿಕ ಸ್ಥಿತಿಗತಿಯ ಬಗ್ಗೆ ಚರ್ಚಿಸಿ ಸರ್ಕಾರ ಹಾಗೂ ಕಂಪನಿಯ ಜೊತೆ ಉತ್ತಮ ರೀತಿಯಲ್ಲಿ ವ್ಯವಹರಿಸಿ ಸಮಸ್ಯೆಗಳನ್ನು ಬಗೆಹರಿಸಿಕೊಂಡಿರುವುದು ಕಂಡು ಬರುತ್ತದೆ.

೩.೧.೨ ಮಹಿಳಾ ಕಾರ್ಮಿಕರ ಸ್ಥಿತಿಗತಿ

ಹಟ್ಟಿ ಚಿನ್ನದ ಗಣಿ ಕಂಪನಿಯಲ್ಲಿ ಮಹಿಳಾ ಕಾರ್ಮಿಕರ ಸಂಖ್ಯೆ ಕಡಿಮೆ ಸಂಖ್ಯೆಯಲ್ಲಿರುವುದನ್ನು ಕಾಣಬಹುದು. ಹಟ್ಟಿ ಕಂಪನಿಯಲ್ಲಿ ಮಹಿಳಾ ಕಾರ್ಮಿಕರು ಅನುಕಂಪದ ಆಧಾರದ ಮೇಲೆ ಆಯ್ಕೆಯಾಗಿರುತ್ತಾರೆ. ಪ್ರತಿಯೊಂದು ವಿಭಾಗದಲ್ಲಿ ಐದರಿಂದ ಆರು ಜನರಂತೆ ಕೆಲಸ ಮಾಡುತ್ತೀರುವುರು. ಹಟ್ಟಿ ಗಣಿಯಲ್ಲಿ ಒಟ್ಟು ೫೦ ರಿಂದ ೧೦೦ ಜನರು ಮಾತ್ರ ಮಹಿಳಾ ಕಾರ್ಮಿಕರು ಕಾರ್ಯನಿರ್ವಹಿಸುತ್ತಿರುವರು. ಒಟ್ಟು ಗಣಿಗಾರಿಕೆಯಲ್ಲಿ ಕೆಲಸ ಮಾಡುವ ಮಹಿಳಾ ಕಾರ್ಮಿಕರು ಸುಮಾರು ೧.೫ ಭಾಗ ಮಾತ್ರ ಭಾರತೀಯ ಸಮಾಜದಲ್ಲಿ ಮಹಿಳಾ ಕಾರ್ಮಿಕರನ್ನು ಅಥವಾ ಮಹಿಳೆಯರನ್ನು ದ್ವಿತಿಯ ದರ್ಜೆಯ ಸ್ಥಾನದಲ್ಲಿಟ್ಟಿರುವುದು ನೋಡಬಹುದು. ಅನುಕಂಪಾಧಾರಿತ ಮಹಿಳಾ ಕಾರ್ಮಿಕರಿಗೆ ಕಂಪನಿಯ ಕೆಲಸ ಕಾರ್ಯಗಳ ಬಗ್ಗೆ ತರಬೇತಿಯನ್ನು ನೀಡಲಾಗುತ್ತದೆ. ಮಹಿಳಾ ಕಾರ್ಮಿಕರಿಗಾಗಿ ಸರ್ಕಾರವು ಕೆಲಸದ ವೇಳಯನ್ನು ನಿಗದಿಗೊಳಿಸಿರುತ್ತದೆ. ಸಂಜೆ ೭ ಘಂಟೆಯಿಂದ ಬೆಳಿಗ್ಗೆ ೬ ಗಂಟೆಯವರೆಗೆ (ರಾತ್ರಿ) ಗಣಿಯಲ್ಲಿ ದುಡಿಸಿಕೊಳ್ಳದಂತೆ ೧೯೫೨ ರ ಗಣಿಗಳ ಶಾಸನದ ಅನ್ವಯ ನಿರ್ಭಂಧ ವಿಧಿಸಿದೆ. ಗಣಿಗಳ ಶಾಸನ ಸೆಕ್ಷನ್ ೪೬ ಮಹಿಳಾ ಕಾರ್ಮಿಕರನ್ನು ನೆಲದ ಮಟ್ಟದಿಂದ ಕೆಳಗಿನ ಸ್ಥಳಗಳಲ್ಲಿ ದುಡಿಸಿಕೊಳ್ಳುವುದು ನಿಷೇಧಿಸಿದೆ.[೨] ಐದು ಗಂಟೆಗಳಿಗಿಂತಲೂ ಹೆಚ್ಚು ಕನಿಷ್ಟ ಪಕ್ಷ ಅರ್ಧಗಂಟೆಯ ವಿಶ್ರಾಂತಿ ನೀಡದೆ ದುಡಿಸಿಕೊಳ್ಳುವುದನ್ನು ನಿರ್ಭಂಧಿಸಲಾಗಿದೆ.

ಒಂದು ವೇಳೆ ಗಣಿಯಲ್ಲಿ ಕೆಲಸ ನಿರ್ವಹಿಸುತ್ತಿರುವ ಪುರುಷ ಕಾರ್ಮಿಕರು ನಿಧನರಾದಲ್ಲಿ ಅವರಿಗೆ ಪರ್ಯಾಯವಾಗಿ ಅನುಕಂಪದ ಆಧಾರದ ಮೇಲೆ ಅವರ ಪತ್ನಿ ಅಥವಾ ಹೆಣ್ಣುಮಕ್ಕಳನ್ನು ಕೆಲಸಕ್ಕೆ ತೆಗೆದುಕೊಂಡರೂ, ಅವರು ನಿರ್ವಹಿಸುವ ಹಗುರದ ಕೆಲಸಗಳನ್ನು ವಹಿಸಲಾಗುತ್ತಿದೆ. ಕಾರ್ಮಿಕ ನೀತಿ ನಿಯಮದ ಪ್ರಕಾರ ಮಹಿಳಾ ಕಾರ್ಮಿಕರು ಅತ್ಯಂತ ಭಾರದ ಕೆಲಸಗಳು ಮಾಡುವಂತಿಲ್ಲ ಎಂದು ನಿರ್ಧರಿಸಿದೆ. ಹಟ್ಟಿ ಕಂಪನಿಯಲ್ಲಿ ಗಂಡ ಸತ್ತ ನಂತರ ಹೆಂಡತಿಯಷ್ಟೇ ಕೆಲಸಕ್ಕೆ ಅರ್ಹ ಎಂದು ಯಾವ ನಿಯಮವೂ ಹಾಕಿಕೊಂಡಿಲ್ಲ. ಕುಟುಂಬದ ಅರ್ಹ ಸದಸ್ಯರಲ್ಲಿ ಒಬ್ಬರನ್ನು ಉದ್ಯೋಗಕ್ಕೆ ಆಯ್ಕೆ ಮಾಡಿಕೊಳ್ಳಲಾಗುತ್ತದೆ.

ಮಹಿಳಾಕಾರ್ಮಿಕರು ಈ ಕಂಪನಿಯಲ್ಲಿ ಕೆಲಸ ಮಾಡುವುದರಿಂದ ಜೀವನ ಪದ್ಧತಿ ತುಂಬಾ ಸುಧಾರಿಸಿದೆ ಎಂದು ಹೇಳುತ್ತಾರೆ. ಹೇಗೆಂದರೆ ಬೇರೊಂದು ಕ್ಷೇತ್ರಕ್ಕೆ ಹೋಗಿ ಕೆಲಸಮಾಡುವುದರಿಂದ

ಇಲ್ಲಿ ಸಿಗುವಂತಹ ಯಾವ ಸೌಲಭ್ಯಗಳೂ ಬಹುಶಃ ಸಿಗುವುದು ಕಡಿಮೆಯೇ ಎಂದು ತಿಳಿಸುತ್ತಾರೆ. ಮಹಿಳಾ ಕಾರ್ಮಿಕರಲ್ಲಿ ಅತಿ ಹೆಚ್ಚು ಅನಕ್ಷರಸ್ಥರಾಗಿರುವುದು ಕ್ಷೇತ್ರಕಾರ್ಯದಿಂದ ತಿಳಿದು ಬಂದಿದೆ. ಮಹಿಳಾ ಕಾರ್ಮಿಕರು ಪ್ರತ್ಯೇಕವಾದ ಸಂಘವನ್ನು ನಿರ್ಮಿಸಿಕೊಂಡು ಅದರ ಮುಖಾಂತರ ತಮ್ಮ ಮೇಲೆ ಆಗುತ್ತಿರುವ ಅನ್ಯಾಯದ ವಿರುದ್ಧ ಪ್ರತಿಭಟಿಸಲು ಸಾಧ್ಯವೆಂದು ಹೇಳಿ ಸಂಘಟಿತರಾಗಲು ಪ್ರೋತ್ಸಾಹಿಸುವುದು ಅನಿವಾರ್ಯವಾಗಿದೆ. ಇವರು ಕಂಪನಿಯ ವಸತಿ ಸೌಲಭ್ಯಗಳನ್ನು ಇನ್ನೂ ವಿಸ್ತರಿಸಬೇಕೆಂದು ಹೇಳುತ್ತಾರೆ. ಪಕ್ಕದ ಗ್ರಾಮಗಳಿಂದ ಬಂದು ಕೆಲಸ ಮಾಡುತ್ತಿರುವುದರಿಂದ ಸಮಯಕ್ಕೆ ಸರಿಯಾಗಿ ಕೆಲಸಕ್ಕೆ ಹಾಜರಾಗದೇ ಹೋದರೆ ಮೇಲಾಧಿಕಾರಿಗಳು ಎಚ್ಚರಿಕೆಯನ್ನು ಸೂಚಿಸುತ್ತಾರೆ. ಅದಕ್ಕಾಗಿ ಹಟ್ಟಿಯಲ್ಲೇ ವಸತಿಗಳನ್ನು ಒದಗಿಸಿಕೊಡಬೇಕೆಂದು ಸುತ್ತಮುತ್ತಲಿನ ಗ್ರಾಮಗಳಿಂದ ಬರುವಂತಹ ಮಹಿಳಾ ಕಾರ್ಮಿಕರನ್ನು ಸಂದರ್ಶಿಸಿದಾಗ ಬಂದಂತಹ ಮಾಹಿತಿಯಾಗಿದೆ. ಹಟ್ಟಿ ಗಣಿಕಂಪನಿಯಲ್ಲಿ ಮಹಿಳಾಕಾರ್ಮಿಕರ ಸಂಖ್ಯೆ ತೀರಾ ಕಡಿಮೆಯಾಗಿರುವುದರಿಂದ ಸಂಘಟನೆಯ ಮನೋಭಾವ ಇಲ್ಲದಿರುವುದು ಕಂಡು ಬರುತ್ತದೆ. ಮಹಿಳಾಕಾರ್ಮಿಕರಿಗೆ ಪ್ರತ್ಯೇಕ ಸಂಘನಿರ್ಮಿಸಿಕೊಳ್ಳುವಂತೆ ಪ್ರೋತ್ಸಾಹಿಸಿದಾಗ ಸ್ವತಃ ಅವರೇ ಈ ರೀತಿಯಾಗಿ ಹೇಳುತ್ತಾರೆ. ಯಾವುದೇ ಮುಷ್ಕರದಲ್ಲಿ ಪಾಲ್ಗೊಳ್ಳುವುದು, ಮಾತನಾಡುವುದು ನಮಗೆ ಭಯವೆನಿಸುತ್ತದೆ. ಅಲ್ಲಿ ಪುರುಷರ ಸಂಖ್ಯೆಯೇ ಅತಿ ಹೆಚ್ಚಾಗಿರುವುದರಿಂದಾಗಿ ಸಂಕೋಚದಿಂದ ವರ್ತಿಸುವ ಅನಿವಾರ್ಯತೆ ಇದೆ. ಸಂಘ, ಸಂಘಟನೆ ಮುಷ್ಕರದಲ್ಲಿ ಪಾಲ್ಗೊಳ್ಳುವುದಕ್ಕಿಂತ ಮುನ್ನ ಚಂದಾ ವಸೂಲಿ ಮಾಡಿಕೊಳ್ಳುತ್ತಾರೆ. ನಂತರ ಎಲ್ಲರ ಪರವಾಗಿಯೇ ನಾವೇ ಮಾತನಾಡುತ್ತೇವೆ ಎಂದು ಪುರುಷ ಕಾರ್ಮಿಕರು ಹೇಳುವುದನ್ನು ಸಂದರ್ಶನದ ಸಮಯದಲ್ಲಿ ಮಹಿಳಾಕಾರ್ಮಿಕರು ತಿಳಿಸಿರುವರು.

೧. ಹಟ್ಟಿ ಚಿನ್ನದ ಗಣಿ ಮತ್ತು ಮಹಿಳೆ

ಹಟ್ಟಿ ಚಿನ್ನದ ಗಣಿಯಲ್ಲಿ ಮಹಿಳಾ ಕಾರ್ಮಿಕರು ಒಂದೇ ಕಡೆ ನಿಂತು ಕೆಲಸ ಮಾಡುತ್ತಿರವುದಿಲ್ಲ. ಅವರು ವಾರಕ್ಕೆ ಒಂದು ಸಾರಿ ವಿಭಾಗದಿಂದ ವಿಭಾಗಕ್ಕೆ ವರ್ಗವಾಗುತ್ತಾರೆ. ಇತ್ತೀಚಿನ ದಿನಗಳಲ್ಲಿ ಆಫೀಸ್‌ಗಳಲ್ಲಿ ಕಾರಕೂನರಾಗಿ ಮತ್ತು ಕಂಪ್ಯೂಟರ್ ಆಪ್ರೇಟರ್‌ಗಳನ್ನಾಗಿ ಮಹಿಳೆಯರನ್ನು ನೇರವಾಗಿ ಆಯ್ಕೆ ಮಾಡಿಕೊಂಡಿದ್ದಾರೆ.

ಮೇಲು ವರ್ಗದ ಮಹಿಳೆಯರಿಗೂ ಹಾಗೂ ಕೆಳವರ್ಗದ ಮಹಿಳೆಯರ ಸಮಸ್ಯೆಗಳಿಗೂ ತೀರ ಭಿನ್ನವಾಗಿರುತ್ತವೆ. ಕ್ಷೇತ್ರಕಾರ್ಯದ ಸಂದರ್ಭದಲ್ಲಿ ಮಹಿಳಾ ಕಾರ್ಮಿಕರನ್ನು ಸಂದರ್ಶಿಸಿದಾಗ ಸಿಕ್ಕ ಮಾಹಿತಿ ಅತ್ಯಂತ ಗಮನೀಯವಾದದ್ದಾಗಿದೆ. ಗಂಡ ಸತ್ತನಂತರ ಕಂಪನಿಯವರು ಕೆಲಸಕೆ ಸೇರಿಸಿಕೊಂಡಿದ್ದಾರೆ. ಆದರೆ ಹರಿಯರಸ್ಸ್ ದುಡ್ಡು ಇನ್ನೂ ಬಂದಿಲ್ಲ. ಬೋನಸ್ಸ್ ಸರಿಯಾದ ಸಮಯಕ್ಕೆ ಕೊಡುವುದಿಲ್ಲ. ಕುಟುಂಬದ ಪೂರ್ಣ ಜವಬ್ದಾರಿ ನಮ್ಮ ಮೇಲಿದೆ. ತಿಂಗಳು ಸಂಬಳ ನಮಗೆ ಸಾಕಾಗುತ್ತಿಲ್ಲ. ಕುಟುಂಬದ ಸಮಸ್ಯೆಗಳಿಗಾಗಿ ಕೆಲವುಬಾರಿ ಸಾಲ ಮಾಡಿಕೊಂಡಿದ್ದು ಇನ್ನೂ ಹಾಗೆಯೇ ಉಳಿದಿದೆ. ಅದರ ಬಡ್ಡಿಯು ಬೆಳೆಯುತ್ತಾ ಹೋಗುತ್ತಿದ್ದು ಇದನ್ನು ತೀರಿಸಲು ಇನ್ನೊಂದು ಸಾಲ ಮಾಡಿಕೊಂಡಿದ್ದೇವೆ. ಸಾಲ ನೀಡಿದವರೂ ಕೂಡ ಕಂಪನಿಯಲ್ಲಿ ಕೆಲಸ ಮಾಡುವವರೇ ಆಗಿರುವುದರಿಂದ ದಿನಾಲು ಮಾನಸಿಕ

ಹಿಂಸೆಯಾಗುವುದು. ಎಂದು ಅನುಕಂಪದ ಆಧಾರದ ಮೇಲೆ ಕೆಲಸಕ್ಕೆ ಸೇರಿದ ಮಹಿಳೆಯೊಬ್ಬಳ ಅಹವಾಲು ಕೇಳಿ ಬರುತ್ತದೆ.

ಮಕ್ಕಳ ಶಿಕ್ಷಣಕ್ಕಾಗಿ ಹಟ್ಟಿಯಲ್ಲಿ ಕನ್ನಡ ಮತ್ತು ಇಂಗ್ಲೀಷ್ ಭಾಷೆಯಲ್ಲಿ ಪ್ರಾಥಮಿಕ ಮತ್ತು ಮಾಧ್ಯಮಿಕ ಶಾಲೆಗಳು ಇರುವವು. ಇದರ ಜೊತೆಗೆ ಸರ್ಕಾರದ ಶಾಲೆಗಳು ಇವೆ. ಉನ್ನತ ಶಿಕ್ಷಣಕ್ಕಾಗಿ ವಿಧ್ಯಾರ್ಥಿಗಳು ಬೇರೆ ಊರಿಗೆ ತೆರಳಬೇಕಾಗುತ್ತದೆ. ಇಂತಹ ಸಂದರ್ಭದಲ್ಲಿ ಕಾರ್ಮಿಕರ ಮಕ್ಕಳಿಗೆ ಕಂಪನಿಯು ಸಾಲದ ವ್ಯವಸ್ಥೆಯನ್ನು ಮಾಡಿಕೊಟ್ಟಿದೆ. ಆದರೂ ಈ ಸೌಲಭ್ಯವನ್ನು ಕಂಪನಿಯು ವಿಸ್ತರಿಸಿದರೆ ಉತ್ತಮವೆನ್ನಬಹುದು. ಸಾಮಾನ್ಯವಾಗಿ ಎಲ್ಲಾ ಕ್ಷೇತ್ರಗಳಲ್ಲಿ ಅನುಭವಿಸುವಂತೆ ಮಹಿಳಾ ಕಾರ್ಮಿಕರು ಹಟ್ಟಿ ಗಣಿಯಲ್ಲಿಯೂ ಸಮಸ್ಯೆಗಳನ್ನು ಎದುರಿಸುತ್ತಿವರು ಕೆಲಸದ ಸಮಯದಲ್ಲಿ ವಿಶ್ರಾಂತಿ ಅಥವಾ ಶೌಚಾಲಯಕ್ಕೆ ಹೋಗಿ ಬರಲು ಸಹ ಕೆಲವುಕಡೆ ನಿರ್ಬಂಧಗಳಿರುವುದನ್ನು ಮಹಿಳಾ ಕಾರ್ಮಿಕರು ಕ್ಷೇತ್ರ ಕಾರ್ಯದ ಸಮಯದಲ್ಲಿ ತಿಳಿಸಿರುವುದು ವಿಷಾದನೀಯ.

೨. ಮಹಿಳಾ ಕಾರ್ಮಿಕರ ಕೆಲಸದ ಸ್ವರೂಪ

ಹಟ್ಟಿ ಚಿನ್ನದ ಗಣಿ ಕಂಪನೆಯಲ್ಲಿ ಮಹಿಳಾ ಕಾರ್ಮಿಕರುಗಳ ಕೆಲಸದ ಸ್ವರೂಪವನ್ನು ಹಂತ ಹಂತವಾಗಿ ವಿವರಿಸುವುದು ಸೂಕ್ತ ಏಕೆಂದರೆ ಎಲ್ಲಾ ಮಹಿಳಾ ಕಾರ್ಮಿಕರುಗಳ ಕೆಲಸದ ಸ್ವರೂಪಗಳು ಒಂದೇ ರೀತಿಯಾಗಿಲ್ಲ. ಅವರ ಸ್ಥಿತಿಗತಿಗಳು ಕೂಡ ಭಿನ್ನವಾಗಿರುತ್ತವೆ. ಉದಾಹರಣೆಗೆ ಒಂದೊಂದು ವಿಭಾಗದಲ್ಲಿ ಐದರಿಂದ ಆರು ಜನ ಕೆಲಸ ಮಾಡುತ್ತಿರುತ್ತಾರೆ ಇವರು ದಿನಾಲು ವಿಭಾಗದಿಂದ ವಿಭಾಗಕ್ಕೆ ಬದಲಾಗುತ್ತಾ ಹೋಗುವ ಸಾಧ್ಯತೆಗಳು ಕೆಲವು ಸಂದರ್ಬದಲ್ಲಿ ಇರುತ್ತವೆ.

೧. ಬಂಕ್ ಮಣ್ಣು ಎತ್ತುವುದು.

ಬಂಕ್ ಮಣ್ಣು ಎತ್ತುವ ಕೆಲಸದಲ್ಲಿ ಮಹಿಳಾ ಕಾರ್ಮಿಕರು ಆರು ಜನರಿಂದ ಏಳು ಜನರು ಮಾತ್ರ ಕಾರ್ಯ ನಿರ್ವಹಿಸುತ್ತಾರೆ. ಇವರು ಭೂಗರ್ಭದಿಂದ ಬಂದಿರುವಂತಹ ಅದಿರು ಮಿಶ್ರಿತ ಮಣ್ಣನ್ನು ಮತ್ತು ಸಣ್ಣ ಕಲ್ಲಿನ ತುಂಡುಗಳನ್ನು ಎತ್ತುವ ಕೆಲಸ ಮಾಡುತ್ತಾರೆ. ಈ ಮಣ್ಣನ್ನು ಪುನಃ ಮಿಲ್‌ಗಳಿಗೆ ಕಳುಹಿಸಿ ಚಿನ್ನದ ಅದಿರನ್ನು ಹೊರ ತೆಗೆಯುವರು. ಇದು ಒಂದೇ ಕಡೆ ನಿಂತು ಮಾಡುವ ಕೆಲಸವಾಗಿರುವುದಿಲ್ಲ. ಅಧಿಕಾರಿಗಳು ಸೂಚಿಸಿದ ಸ್ಥಳಗಳಲ್ಲಿ ಕೆಲಸ ಮಾಡಬೇಕಾಗುತ್ತದೆ. ಇವರಿಗೆ ಪ್ರತಿ ಗಂಟೆಗೆ ಒಂದಿಷ್ಟು ಹೊತ್ತು ವಿಶ್ರಾಂತಿ ತೆಗೆದುಕೊಳ್ಳಬೇಕಾಗುತ್ತದೆ. ಈ ವರ್ಗದ ಕಾರ್ಮಿಕರು ಧೂಳಿನಲ್ಲಿ ಹೆಚ್ಚಿನ ಸಮಯ ಕೆಲಸ ನಿರ್ವಹಿಸಬೇಕಾಗಿರುವುದರಿಂದ ಆರೋಗ್ಯಕ್ಕೆ ಸಂಬಂಧಿಸಿದ ಸಮಸ್ಯೆಗಳನ್ನು ಎದುರಿಸಬೇಕಾಗುತ್ತದೆ.

೨. ಮಿಲ್‌ನಲ್ಲಿ ಮಹಿಳೆ

ಭೂಗರ್ಭದಿಂದ ಮೇಲಕ್ಕೆ ಬಂದಿರುವ ಅದಿರುಗಳನ್ನು ಮಿಲ್‌ನಲ್ಲಿ ಹಾಕಿ ಸಣ್ಣಗೆ ಪುಡಿ ಮಾಡಲಾಗುತ್ತದೆ. ಇಲ್ಲಿಯೂ ಆರರಿಂದ ಏಳು ಜನ ಮಹಿಳಾ ಕಾರ್ಮಿಕರು ಕೆಲಸ ಮಾಡುತ್ತಿರುವರು. ಇವರು ಒಂದೊಂದು ಕಬ್ಬಿಣದ ಅಲಗೆಯ ಮೇಲೆ ನಿಂತು ಕಾರ್ಯನಿರ್ವಹಿಸುತ್ತಾರೆ. ಅದಿರು

ಪುಡಿಯಾದನಂತರ ಯಂತ್ರಗಳ ಸಹಾಯದಿಂದ ನೀರಿನಿಂದ ಮಿಶ್ರಣಗೊಳಿಸಿ ತಳಕ್ಕೆ ಕುಳಿತ ಚಿನ್ನದ ಅದಿರು ಒಂದೆಡೆ ಶೇಖರಣೆಯಾಗುತ್ತದೆ. ಈ ವಿಭಾಗದಲ್ಲಿ ಕೆಲಸ ಮಾಡುವ ಎಲ್ಲಾ ಕಾರ್ಮಿಕರಿಗೂ ಕೈ ಕಾಲುಗಳಿಗೆ ರಕ್ಷಣೆ ನೀಡುವಂತಹ ರಬ್ಬರ್ ಚೀಲಗಳನ್ನು ಕೊಟ್ಟಿರುತ್ತಾರೆ. ಅದನ್ನು ಧರಿಸಿಕೊಂಡು ಕೆಲಸ ಮಾಡುತ್ತಿರುತ್ತಾರೆ. ಇಲ್ಲಿಯ ಕೆಲಸ ತುಂಬಾ ಕಠಿಣವೆಂದು ತಿಳಿದುಬರುತ್ತದೆ. ಏಕೆಂದರೆ ದೊಡ್ಡದಾದ ಯಂತ್ರಗಳ ಮಧ್ಯೆ ನಿಂತು ಕೆಲಸ ಮಾಡಬೇಕಾಗಿರುತ್ತದೆ. ಬೇರೆಯಾವುದೇ ಯಂತ್ರವನ್ನು ತಿಳಿಯಲಾರದೆ ತಾಕಿದರೆ ಜೀವಕ್ಕೆ ಅಪಾಯವಾಗುವುದರಲ್ಲಿ ಸಂದೇಹವಿಲ್ಲ.

ತೃತೀಯ ದರ್ಜೆಯ ಮಹಿಳಾ ಕಾರ್ಮಿಕರಿಗೆ ಸಾಮನ್ಯವಾಗಿ ಕಛೇರಿಯಲ್ಲಿ ಮತ್ತು ಕಂಪನಿಯಲ್ಲಿ ಸ್ವಾಭಾವಿಕ ಕೆಲಸವನ್ನು ನೀಡಲಾಗುತ್ತದೆ. ಈ ಕೆಲಸವು ವಿವಿಧ ವಿಭಾಗಗಳಿಗೆ ವಾರಕ್ಕೆ ಒಂದು ಸುತ್ತಿನಂತೆ ಬದಲಾವಣೆ ಮಾಡುವ ವ್ಯವಸ್ಥೆಯು ಜಾರಿಯಲ್ಲಿದೆ. ಸಾಮಾನ್ಯವಾಗಿ ಈ ಕೆಲಸಕ್ಕೆ ಸ್ಥಳೀಯರೇ ಹೆಚ್ಚಾಗಿ ಆಯ್ಕೆಯಾಗಿದ್ದಾರೆ.

೩. ಕಾರಕೂನರಾಗಿ ಮತ್ತು ಕಂಪ್ಯೂಟರ್ ಆಪ್‌ರೇಟರ್‌ಗಳಾಗಿ ಮಹಿಳೆ

ಹಟ್ಟಿ ಚಿನ್ನದ ಗಣಿಕಂಪನಿಯಲ್ಲಿ ಇತ್ತೀಚಿನ ದಿನಗಳಲ್ಲಿ ಮಹಿಳೆಯರನ್ನು ನೇರವಾಗಿ ಆಯ್ಕೆ ಮಾಡಿಕೊಳ್ಳುತ್ತಿರುವರು. ಇವರು ಕಂಪ್ಯೂಟರ್ ಆಫ್‌ರೇಟರುಗಳಾಗಿ ಮತ್ತು ಕಾರಕೂನರಾಗಿ ಕೆಲಸ ನಿರ್ವಹಿಸುತ್ತಿರುವರು. ಪುರುಷರಷ್ಟೇ ದಕ್ಷವಾಗಿ ಕೆಲಸನಿರ್ವಹಿಸುತ್ತಿರುವರು. ಕಂಪನಿಯ ಅಭಿವೃದ್ಧಿಗೆ ಕೇವಲ ಕೆಳಹಂತದಲ್ಲಿ ಕಷ್ಟಕರ ಕೆಲಸನಿರ್ವಹಿಸುವ ಮಹಿಳೆಯರಷ್ಟೇ ಆಡಳಿತಾತ್ಮಕವಾಗಿಯು ಕೂಡ ಇವರ ಕಾರ್ಯ ಪರಿಗಣಿಸುವಂತಹದು.

೩.೧.೩ ಕಾರ್ಮಿಕ ಸಂಘಗಳ ಸ್ಥಿತಿಗತಿಗಳು

ಕಾರ್ಮಿಕರುಗಳ ಹಿತದೃಷ್ಟಿಯನ್ನು ಕಾಪಾಡುವ ಉದ್ದೇಶದಿಂದಾಗಿ ಎಲ್ಲಾ ಕ್ಷೇತ್ರಗಳಲ್ಲಿ ಸಂಘಗಳನ್ನು ನಿರ್ಮಿಸಿಕೊಂಡಿರುತ್ತಾರೆ. ಅದೇ ರೀತಿಯಾಗಿ ಹಟ್ಟಿ ಗಣಿ ಕಂಪನಿಯಲ್ಲಿಯೂ ಕಾರ್ಮಿಕ ಸಂಘವನ್ನು ನಿರ್ಮಿಸಿಕೊಂಡಿರುವುದು ಕಂಡುಬರುತ್ತದೆ. ಯಾವುದೇ ಸಮಸ್ಯೆಯನ್ನು ಕುರಿತು ವೈಯಕ್ತಿಕವಾಗಿ ಕೇಳಿದಾಗ ಅದಕ್ಕೆ ಅಷ್ಟೊಂದು ಬೆಲೆ ಸಿಕ್ಕುವುದಿಲ್ಲ ಅದುವೇ ಕಾರ್ಮಿಕರೆಲ್ಲಾ ಸಂಘಟನೆಗೊಂಡು ಹೋರಾಟ ಮಾಡಿದಾಗ ಬೇಡಿಕೆಗಳು ಅತಿ ಕಡಿಮೆ ಸಮಯದಲ್ಲಿ ಇಡೇರುತ್ತವೆ. ಎಂದು ಸಂದರ್ಶನದ ಸಮಯದಲ್ಲಿ ಹೇಳಿಕೊಂಡಿದ್ದಾರೆ.

ಹಟ್ಟಿ ಚಿನ್ನದ ಗಣಿ ಕಂಪನಿಯ ಕಾರ್ಮಿಕ ಮುಖಂಡರಲ್ಲಿ ಕೆಲವು ವಿಷಯಗಳಲ್ಲಿ ಭಿನ್ನಾಭಿಪ್ರಾಯಗಳುಂಟಾಗಿ ಸಾರ್ವಜನಿಕ ಸ್ಥಳದಲ್ಲಿ ಹೊಡೆದಾಟಕ್ಕೆ ಇಳಿದಿದ್ದ ಪ್ರಸಂಗಗಳು ನಡೆಯುತ್ತವೆ. (ಗುಲ್ಬರ್ಗಾ ಸಂಯುಕ್ತ ಕರ್ನಾಟಕ ೩.೦೫.೨೦೦೫ ಪು.ಸಂ.೦೩) ಇಂತಹ ಅನೇಕ ಭಿನ್ನಾಭಿಪ್ರಾಯಗಳು ನಡೆದಿರಬಹುದು. ಆದರೆ ಕಾರ್ಮಿಕರುಗಳಿಗೆ ಯಾವುದೇ ರೀತಿಯ ಸಮಸ್ಯೆಗಳಾಗದಂತೆ ಕಪನಿಯು ಎಚ್ಚರವಹಿಸುತ್ತಿರುವುದು ಕಂಡುಬರುತ್ತದೆ. ಕಾರ್ಮಿಕರುಗಳ ನಾಯಕರು ತಮ್ಮ ನಾಯಕತ್ವದ ಅವಧಿಯಲ್ಲಿ

ಅನೇಕ ಕಾರ್ಮಿಕ ಪರವಾದಂತಹ ಅಂಶಗಳ ಇಡೇರಿಕೆ ಹೋರಾಟಮಾಡಿವೆ. ಎಂದು ಕಾರ್ಮಿಕರು ಹೇಳಿಕೊಂಡಿದ್ದಾರೆ. ಇಂದಿನ ಕಾರ್ಮಿಕರ ಮುಖಂಡತ್ವ ವಹಿಸಿರುವ ವಾಲೇಬಾಬರುವರು ಕೂಡ ಅನೇಕ ಕಾರ್ಮಿಕರ ಸಮಸ್ಯೆಗಳನ್ನು ಬಗೆಹರಿಸಲು ಕಂಪನಿಯ ಮೇಲೆ ಒತ್ತಾಯ ತಂದು ಸಮಸ್ಯೆಗಳಿಗೆ ಪರಿಹಾರ ಸೂಚಿಸುವಲ್ಲಿ ಯಶಸ್ವಿಯಾಗಿದ್ದಾರೆ. ಈ ರೀತಿಯ ಸಾಧನೆಯೂ ಸಂಘದಿಂದ ಮಾತ್ರ ಸಾಧ್ಯ ಎಂದು ತಿಳಿಸಿದರೂ. ಮಹಿಳಾ ಕಾರ್ಮಿಕರು ಪ್ರತ್ಯೇಕವಾದ ಸಂಘವನ್ನು ನಿರ್ಮಿಸಿಕೊಂಡಿಲ್ಲ. ಅದನ್ನು ಕುರಿತು ಕೇಳಿದಾಗ ಅವರು ಹೇಳುವ ಉತ್ತರ ಈ ರೀತಿಯಾಗಿದೆ. ಮಹಿಳಾ ಕಾರ್ಮಿಕರುಗಳು ಸಂಘವನ್ನು ಕಟ್ಟಿಕೊಳ್ಳಲು ಯಾವುದೇ ರೀತಿಯಾದಂತಹ ಪ್ರೋತ್ಸಾಹ ಸಿಕ್ಕಿಲ್ಲ. ಹಾಗೂ ಅದರ ಅವಶ್ಯಕತೆ ನಮಗೆ ಇಲ್ಲ ಎಂದು. ೧೫.೧೨.೨೦೦೫ ರಂದು ಮಹಿಳಾ ಕಾರ್ಮಿಕರನ್ನು ಕುರಿತು ಸಂದರ್ಶಿಸಿದಾಗ ಬಂದಂತಹ ಮಾಹಿತಿಯಾಗಿದೆ. ಮಹಿಳಾ ಕಾರ್ಮಿಕರನ್ನು ಮುಷ್ಕರದ ಬಗ್ಗೆ ಕೇಳಿದಾಗ ಯಾವುದೇ ರೀತಿಯ ಅನುಭವವಿಲ್ಲ. ಏಕೆಂದರೆ ಚಂದಾ ವಸೂಲಿ ಮಾಡಿಕೊಂಡು ಹೋದನಂತರ ಮುಷ್ಕರದ ಬಗ್ಗೆ ನಿಮಗೆ ಅರ್ಥವಾಗುವುದಿಲ್ಲ. ನಿಮ್ಮ ಪರವಾಗಿ ನಾವೇ ಹೋರಾಟ ಮಾಡುತ್ತೇವೆ. ಇಲ್ಲಿ ಪುರುಷರ ಸಂಖ್ಯೆಯೇ ಅತಿ ಹೆಚ್ಚಾಗಿರುವುದರಿಂದ ನಿಮಗೆ ಮಾತನಾಡಲು ಆಗುವುದಿಲ್ಲ. ಅದಕ್ಕಾಗಿ ನೀವು ಸುಮ್ಮನೇ ನಮ್ಮ ಹಿಂದೆ ಬನ್ನಿ ಎಂದು ಹೇಳುತ್ತಾರೆ. ಈ ಮೇಲಿನ ಹೇಳಿಕೆ ಎಲ್ಲಾ ಮಹಿಳಾ ಕಾರ್ಮಿಕರುಗಳದ್ದಲ್ಲ ಅರ್ಧಕ್ಕಿಂತ ಹೆಚ್ಚಿನ ಮಹಿಳಾ ಕಾರ್ಮಿಕರು ಇದೇ ರೀತಿಯಾಗಿ ಹೇಳಿಕೊಳ್ಳುತ್ತಾರೆ. ಪ್ರಸ್ತುತ ದಿನಗಳಲ್ಲಿ ಶ್ರೀ ವಾಲೇಬಾಬು ಕಾರ್ಮಿಕ ಮುಖಂಡನಾದರೆ ಅಧ್ಯಕ್ಷರಾಗಿ ಶ್ರೀರಾಘವೇಂದ್ರ ಕುಷ್ಟಗಿ ಯವರು ಆಯ್ಕೆಯಾಗಿದ್ದಾರೆ ಇವರ ಅವಧಿಯಲ್ಲಿ ತಿಂಗಳವರೆಗೆ ನಿಂತುಕೊಂಡಿದ್ದ ಬೋನಸ್ಸ್ ಸರಿಯಾದ ಸಮಯಕ್ಕೆ ಬರುವಂತೆ ಮಾಡಿದ್ದಾರೆ. ಕೆಲವು ಕಾರ್ಮಿಕರ ಸಮಸ್ಯೆಗಳು ಬಹಳದಿವಸಗಳವರೆಗೆ ಪರಿಹರಿಸಿದ್ದಿಲ್ಲ ಅದನ್ನು ಕೂಡ ಸರಿಪಡಿಸಲು ಯಶಸ್ವಿಯಾಗಿದ್ದಾರೆ.

೩.೧.೪ ಸರ್ಕಾರ ಹಾಗೂ ಕಾರ್ಮಿಕ ನೀತಿಗಳು

ಭಾರತ ಸಂವಿಧಾನವು ಕಾರ್ಮಿಕರಿಗಾಗಿ ಅನೇಕ ಕಾನೂನುಗಳನ್ನು ರಚಿಸಿದ್ದು ಅದರನ್ವಯ ಕಾರ್ಮಿಕರುಗಳಿಗೆ ಅವಕಾಶ ಮತ್ತು ಸೌಲಭ್ಯಗಳನ್ನು ಒದಗಿಸಿಕೊಡಲು ಒತ್ತಾಯಿಸಿದೆ. ಸ್ವತಂತ್ರ ಪೂರ್ವದ ದಿನಗಳಲ್ಲಿ ಕೈಗಾರಿಕಾ ಅಭಿವೃದ್ಧಿ ಸೀಮಿತವಾಗಿದ್ದುದರಿಂದ ಕಾರ್ಮಿಕ ಸಂಘಟನೆಯೂ ಸಹ ಸೀಮಿತವಾಗಿತ್ತು ಹಾಗೆಯೇ ಕಾರ್ಮಿಕ ಕಾನೂನುಗಳು ಕಡಿಮೆಯಿದ್ದು ಅದರ ಬಳಿಕೆಗೆ ಅಷ್ಟು ಒತ್ತಾಯವಿರಲಿಲ್ಲ. ಮತ್ತು ಕಾರ್ಮಿಕರ ಕಲ್ಯಾಣದ ಕಡೆಗೂ ಹೆಚ್ಚು ಗಮನ ಕೊಡುತ್ತಿರಲಿಲ್ಲ ಕಾರ್ಮಿಕರನ್ನು ಹೆಚ್ಚಾಗಿ ನಿರ್ಜೀವ ವಸ್ತುಗಳಂತೆ ನಡೆಸಿಕೊಳ್ಳುತ್ತಿದ್ದರು.[೬] ಭಾರತ ಸಂವಿಧಾನ ರಚನೆಗೊಂಡ ನಂತರ ಕಾರ್ಮಿಕರಿಗಾಗಿಯೇ ಕನೂನುಗಳನ್ನು ವಿಧಿವಿಧಾನಗಳನ್ನು ಬರೆಯಲ್ಪಟ್ಟಿದೆ. ಈ ಕಾರ್ಮಿಕ ಕಾನೂನುಗಳಿಗೆ ಹಟ್ಟಿ ಚಿನ್ನದ ಗಣಿಯು ಬದ್ಧವಾಗಿ ಕಾರ್ಯನಿರ್ವಹಿಸುತ್ತದೆ. ಕಾರ್ಮಿಕರಿಗಾಗಿ ಅನ್ವಯವಾಗುವ ಇಂದಿನ ಕಾನೂನುಗಳು ಕೈಗಾರಿಕೆಗಳಲ್ಲಿ, ಕಛೇರಿಗಳಲ್ಲಿ ಉದ್ದಿಮೆಗಳಲ್ಲಿ ಉದ್ಯೋಗಿಗಳಾದವರು ತಮ್ಮ ಕೆಲಸಕಾರ್ಯಗಳನ್ನು ಕರ್ತವ್ಯವೆಂದು ಭಾವಿಸಿ ನಿರ್ವಹಿಸಬೇಕೆಂದು ಹೇಗೆ ತಿಳಿಸುತ್ತದೆಯೂ ಹಾಗೆಯೇ ಉದ್ಯೋಗ ಭದ್ರತೆಯನ್ನು ಕಾನೂನುನಿನಲ್ಲಿಯೇ ಕಲ್ಪಿಸಲಾಗಿದೆ.[೭]

ಸಂವಿಧಾನದ ೪೧,೪೨,೪೩, ಹಾಗೂ ೩೯ ನೇ ವಿಧಿಗಳಲ್ಲಿನ ತತ್ವಸಿದ್ಧಾಂತಗಳ ಅನುಸಾರ ಕಾರ್ಮಿಕರಿಗೆ ಮಹಿಳಾ ನೌಕರರಿಗೆ ಸಮಾನ ಕೆಲಸಕ್ಕೆ ಸಮಾನ ವೇತನ ಉದ್ಯೋಗದಲ್ಲಿ ಕಾಲ ಕಾಲಕ್ಕೆ ಬಡ್ತಿ ಬೋನಸ್ಸ್ ಮಕ್ಕಳಿಗೆ ಶಿಕ್ಷಣ ಸೌಲಭ್ಯ, ಕ್ಷೇಮ ನಿಧಿ, ಪರಿಹಾರ ಧನ ಪಿಂಚಣಿ, ವಿಮಾ ಸೌಲಭ್ಯ ಇತ್ಯಾದಿಗಳನ್ನು ಕಲ್ಪಿಸಲಾಗಿದೆ.[೫] ಕಾರ್ಮಿಕರಿಗೆ ಅನ್ವಯವಾಗುವ ಅಧಿನಿಯಮಗಳು ಸುಮಾರು ೫೦ ಕ್ಕೂ ಹೆಚ್ಚು ಸಂವಿಧಾನ ರಚಿಸಿದ ಕಾನೂನುಗಳಲ್ಲಿ ಕಾರ್ಮಿಕರಿಗೆ ಅನ್ವಯವಾಗುವಂತಹ ಕೆಲವು ವಿಧಿಗಳನ್ನು ಮಾತ್ರ ಆಯ್ಕೆ ಮಾಡಿಕೊಳ್ಳಲಾಗಿದೆ.

ಕೆಲಸಗಾರರ ಪರಿಹಾರ ಅಧಿನಿಯಮ ೧೯೨೩, ಇದು ಜುಲೈ ೧, ರಂದು ಜಾರಿಗೆ ಬಂದಿತು. ಈ ಅಧಿನಿಯಮವು ಗಣಿ ಬಂದರು ಕಟ್ಟಡ, ವಾಣಿಜ್ಯ, ರೈಲ್ವೆ ಟ್ರಾಮ್, ಕಾರ್ಖಾನೆ, ಹಾಗೂ ಅಗ್ನಿ ಶಾಮಕ ಮುಂತಾದ ವಲಯಗಳಲ್ಲಿ ಕೆಲಸ ಮಾಡುವ ಕಾರ್ಮಿಕರಿಗೆ ಅನ್ವಯವಾಗುತ್ತದೆ. ಈ ವಿಧಿಯು ಅಪಾಘಾತ ಹೊಂದಿದರೆ ಕೆಲಸ ಮಾಡಲು ಅಶಕ್ತರಾದರೆ ಜಾದ್ಯೋಗಿಕ ಕಾಯಿಲೆಗಳಿಗೆ ತುತ್ತಾದರೆ. ಅಂತಹ ಸಂದರ್ಭದಲ್ಲಿ ಕಾರ್ಮಿಕರಿಗೆ ಪರಿಹಾರ ಕೋಡುವುದ ಕುರಿತು ವಿವರಿಸುವಂತಹದ್ದಾಗಿದೆ.

೧. ವೇತನಗಳ ಪಾವತಿಯ ಅಧಿನಿಯಮ ೧೯೩೬ ರಲ್ಲಿ ಜಾರಿಗೆ ಬಂದಿದ್ದು ವೇತನಗಳು ಪಾವತಿಯ ಅಧಿನಿಯಮವು ಕೆಲಸಗಾರರಿಗೆ ವೇತನಗಳನ್ನು ಪ್ರತಿ ತಿಂಗಳ ಒಂದು ನಿರ್ದಿಷ್ಟ ದಿನದಂದು ವಿತರಿಸುವಂತೆ ಈ ಅಧಿನಿಯಮವು ತಿಳಿಸುತ್ತದೆ ವೇತನವನ್ನು ನೀಡುವಾಗ ಅನಧಿಕೃತವಾಗಿ ಕಡಿತಗಳನ್ನು ಮಾಡಿಕೊಳ್ಳದಂತೆ ಎಚ್ಚರವಹಿಸುವುದನ್ನು ಸ್ಪಷ್ಟಪಡಿಸುತ್ತದೆ.[೬]

೨. ಕನಿಷ್ಠ ವೇತನಗಳ ಅಧಿನಿಯಮ ೧೯೪೪ ಮಾರ್ಚ್ ೧೫ ರಂದು ಜಾರಿಗೆ ಬಂದಿತು. ಈ ಅಧಿನಿಯಮಕ್ಕೆ ೧೯೬೧ ರಿಂದ ೧೯೭೯ ರವರೆಗೆ ರಾಜ್ಯ ಸರ್ಕಾರಗಳ ಹಲವು ತಿದ್ದುಪಡಿಗಳನ್ನು ಮಾಡಿದೆ. ಕಾರ್ಮಿಕರನ್ನು ಅವರ ಶ್ರಮಿಕ ದುಡಿಮೆಯನ್ನು ಕೈಗಾರಿಕೆಗಳ ಮಾಲಿಕರು ದುರುಪಯೋಗ ಪಡಿಸಿಕೊಳ್ಳದಂತೆ ಹಾಗೂ ಕೆಲಸಗಾರರಿಗೆ ದುಡಿಮೆಗೆ ತಕ್ಕ ಪ್ರತಿಫಲವಿಲ್ಲದಿದ್ದರೂ ಕನಿಷ್ಠ ವೇತನ ದೊರಕಿಸಿ ಕೊಡುವಂತೆ ಈ ವಿಧಿ ಸೂಚಿಸುತ್ತದೆ.[೭]

೩. ಬೋನಸ್ ಪಾವತಿಯ ಅಧಿನಿಯಮ ೧೯೬೫ ಸೆಪ್ಟೆಂಬರ್ ೨೫ ರಂದು ಜಾರಿಗೆ ಬಂದಿರುತ್ತದೆ. ಈ ಅಧಿನಿಯಮದ ಅನ್ವಯ ಕೈಗಾರಿಕೆಗಳಲ್ಲಿನ ಉದ್ಯೆಮಗಳಲ್ಲಿನ ಕಾರ್ಮಿಕರಿಗೆ ಕೈಗಾರಿಕೆಯ ಉತ್ಪಾದನೆ ಅಥವಾ ಲಾಭದ ಆಧಾರದ ಮೇಲೆ ಲಾಭದ ಒಂದಂಶವನ್ನು 'ಬೋನಸ್ಸ್' ಆಗಿ ನೀಡಲು ಈ ಅಧಿನಿಯಮವು ಅವಕಾಶವನ್ನು ಕಲ್ಪಿಸಿರುತ್ತದೆ. ಕಂಪನಿಯ ಮಾಲಿಕರು. ತಮ್ಮ ಕಾರ್ಮಿಕರಿಗೆ ಖರ್ಚು ವೆಚ್ಚಗಳನ್ನು ಕಳೆದು ನಿವ್ವಳ ಲಾಭದಲ್ಲಿ ಶೇ. ೮.೩೩ ರಷ್ಟು ಕನಿಷ್ಠಬೋನಸ್ಸ್ ನ್ನು ನೀಡಬೇಕೆಂದು ಈ ವಿಧಿಯ ತಿಳಿಸುತ್ತದೆ.

ಮೇಲಿನ ಎಲ್ಲಾ ಅಂಶಗಳ ಜೊತೆಗೆ ಹಟ್ಟಿ ಗಣಿ ಕಂಪನಿಯು ಕೆಲವು ತಮ್ಮದೇ ಆಗಿರುವಂತಹ ನಿಯಮಗಳನ್ನು ಹಾಕಿಕೊಂಡಿದೆ. ಪ್ರಸ್ತುತ ಸಂದರ್ಭದಲ್ಲಿ ಹಟ್ಟಿ ಗಣಿ ಇಂಡೋಫಿಲ್ ಕಂಪನಿಯ ಸಮಸ್ಯೆಯನ್ನು ಎದುರಿಸುತ್ತಿದೆ. ಇಂಡೋಫಿಲ್ ಕಂಪನಿಯ ಆಡಳಿತಕ್ಕೆ ಒಳಪಟ್ಟರೆ ಹಟ್ಟಿ ಗಣಿಯ

ಸಂಪೂರ್ಣ ಹಿಡಿತ ಅವರ ಕೈಗೆ ಸೇರಬಹುದೆಂಬ ಭಯ ಕಾರ್ಮಿಕರಲ್ಲಿ ಕಾಡುತ್ತಿದೆ. ಕಾರ್ಮಿಕರನ್ನು ಅವರೇ ಕರೆದುಕೊಂಡು ಬಂದು ದುಡಿಸಿಕೊಳ್ಳುತ್ತಾರೆ. ಇದರಿಂದ ಸ್ಥಳೀಯ ಕಾರ್ಮಿಕರು ನಿರುದ್ಯೋಗಿಗಳಾಗುವ ಸಂಭವವಿರುತ್ತದೆ. ರಾಯಚೂರು ವಾಣಿ ದಿನ ಪತ್ರಿಕೆ. (ದಿನಾಂಕ ೦೮.೦೨.೨೦೦೬ ಪು.ಸಂ. ಒಂದು) ಈ ಸಮಸ್ಯೆಯನ್ನು ಕುರಿತು ಹಟ್ಟಿ ಗಣಿ ಕಂಪನಿಯ ಅಧ್ಯಕ್ಷರಾಗಿದ್ದ ಶ್ರೀ ಪಾರಸಮಲ್ ಸುಖಾಣಿ ಯವರು ಕಾರ್ಮಿಕರಿಗೆ ಈ ರೀತಿಯ ಹೇಳಿಕೆ ನೀಡುತ್ತಾರೆ. ಹಟ್ಟಿ ಗಣಿ ಕಂಪನಿಯ ಸಂಶೋಧನೆಗೆ ಇಂಡೋಫಿಲ್ ಕಂಪನಿಗೆ ಪರವಾನಿಗೆ ಕೊಡುವುದನ್ನು ನಾನು ಮೊದಲಿನಿಂದಲೂ ವಿರೋಧಿಸುತ್ತಾ ಬಂದಿದ್ದೇನೆ. ಈ ಕಂಪನಿಯ ಅಧ್ಯಕ್ಷನಾದಗ ಇಂಡೋಫಿಲ್ ಕಂಪನಿಯವರು ನನ್ನನ್ನು ಭೇಟಿಯಾದಾಗ ನೇರವಾಗಿ ಅದನ್ನು ತಿರಸ್ಕರಿಸಿದ್ದೇನೆ. (ರಾಯಚೂರು ವಾಣಿ ಫೆಬ್ರವರಿ ೧೦) ಇಂಡೋಫಿಲ್ ಕಂಪನಿಯ ಕುರಿತು ಬಂದಂತಹ ಎಲ್ಲಾ ವಿವಾದಗಳು ಕೂಡ ತಿರಸ್ಕರಿಸಲಾಗುವುದು. ಕಾರ್ಮಿಕರ ಹಿತದೃಷ್ಟಿಯಿಂದ ಹಾಗೂ ಸರ್ಕಾರದ ಆದಾಯದ ದೃಷ್ಟಿಯಿಂದ ಇಂಡೋಫಿಲ್ ಕಂಪನಿಗೆ ಕೊಡದೇ ಇರುವುದೇ ಸದ್ಯದ ಸ್ಥಿತಿಗತಿಗೆ ಕಂಪನಿಯ ಆಡಳಿತಾಂಗವೇ ಮುಂದುವರೆಸಿಕೊಂಡು ಹೋಗುತ್ತದೆ. ಎಂದು ಹೇಳಿಕೊಂಡಿದ್ದಾರೆ.

ಹಟ್ಟಿ ಕಂಪನಿಗೆ ವೈಯಕ್ತಿಕ ಸಮಸ್ಯೆಗಳೇನಾದರೂ ಬಂದರೆ ತಮ್ಮದೇ ಆದ ನೀತಿ ನಿಯಮಗಳನ್ನು ಅನುಸರಿಸುತ್ತದೆ.

೪. ಕೆಲಸಗಾರರಿಗೆ ಭವಿಷ್ಯ ನಿಧಿ ಅಧಿನಿಯಮ ೧೯೫೨ ಇಪಿಎಸ್ ಆಕ್ಟ್ ೧೯೫೨ರ ಅಧಿನಿಯಮವು ಕೈಗಾರಿಕೆಗಳಲ್ಲಿ ಹಾಗೂ ಇತರೆ ಉಧ್ಯಮಗಳಲ್ಲಿ ಕೆಲಸ ಮಾಡುವ ನೌಕರರ ಭವಿಷ್ಯ ನಿಧಿಗೆ ವ್ಯವಸ್ಥೆ ಮಾಡಬೇಕೆಂದು ತಿಳಿಸುತ್ತದೆ. ಮಹಿಳಾ ಕಾರ್ಮಿಕರು ನಿವೃತ್ತಗೊಂಡ ಮೇಲೆ ಅವರು ತಮ್ಮ ನಿವೃತ್ತಿ ಜೀವನವನ್ನು ಹಾಗೂ ಅವರನ್ನು ಅವಲಂಬಿಸಿದ ವ್ಯಕ್ತಿಗಳಿಗೆ ಅನುಕೂಲವಾಗುವ ದೃಷ್ಟಿಯಿಂದ ಭವಿಷ್ಯನಧಿ ಅಧಿನಿಯಮವನ್ನು ರಚಿಸಲಾಗಿದೆ. ಈ ಅಧಿನಿಯಮದ ೬-ಎ ಪ್ರಕರಣದ ಅನ್ವಯ ಕುಟುಂಬ ಪಿಂಚಣಿ ಯೋಜನೆಗೆ ಅವಕಾಶ ಕಲ್ಪಿಸಿದರೆ ಅಧಿನಿಯಮ ೬-ಸಿ ಅನ್ವಯ ಎಂಪ್ಲಾಂಯೀಸ್ ಡಿಪಾಸಿಟ್ ಲಿಂಕೆಡ್ ಇನ್ಸೂರೆನ್ಸ್ ಸ್ಕೀಂ ಯೋಜನೆಯನ್ನು ಪ್ರಾರಂಭಿಸಿತು.

೫. ಪ್ರಸೂತಿ ಸೌಲಭ್ಯಗಳ ಅಧಿನಿಯಮವು ೧೯೬೧ ಡಿಸೆಂಬರ್ ೧೨ ರಂದು ಜಾರಿಗೆ ಬಂದಿರುತ್ತದೆ. ಈ ಅಧಿನಿಯಮಕ್ಕೆ ೧೯೭೦, ೧೯೭೩ ಹಾಗೂ ೧೯೭೬ ರಲ್ಲಿ ಹಲವು ತಿದ್ದುಪಡಿಗಳನ್ನು ತರಲಾಯಿತು. ಇ.ಎಸ್.ಐ. ಅಧಿನಿಯಮ ಮತ್ತು ಪ್ರಸೂತಿ ಸೌಲಭ್ಯಗಳನ್ನು ಕುರಿತು ಚರ್ಚಿಸುತ್ತದೆ.

ಕೈಗಾರಿಕೆಯ ಮಾಲಿಕನು ಪ್ರಸೂತಿ ಸೌಲಭ್ಯಗಳ ಅಧಿನಿಯಮ ಉಲ್ಲಂಘಿಸಿದರೆ ಕಠಿಣ ಶಿಕ್ಷೆಗೆಗುರಿಯಾಗುತ್ತಾರೆ.

೬. ಕಾರ್ಮಿಕರ ರಾಜ್ಯ ವಿಮಾ ೧೯೪೮ ಏಪ್ರಿಲ್ ೧೯ ರಂದು ಜಾರಿಗೆ ಬಂದಿದ್ದು ಈ ಅಧಿನಿಯಮಕ್ಕೆ ೧೯೫೧,೧೯೬೦,೧೦೭೦, ೧೯೭೫ ಹಾಗೂ ೧೯೭೮ ರಲ್ಲಿ ತಿದ್ದು ಪಡಿಗಳನ್ನು ತರಲಾಯಿತು. ಕಾರ್ಖಾನೆಗಳಲ್ಲಿ ಕೆಲಸ ಮಾಡುವ ನೌಕರರಿಗೆ ಮತ್ತು ಅವರನ್ನು ಅವಲಂಭಿಸಿರುವ ವ್ಯಕ್ತಿಗಳಿಗೆ ಕಾಯಿಲೆಯಾಗಿರುವಾಗ ಅಶಕ್ತರಾಗಿರುವಾಗಿ, ಪ್ರಸೂತಿಯ ಖರ್ಚು, ವೆಚ್ಚಗಳ ಸೌಲಭ್ಯಗಳನ್ನು ಕಲ್ಪಿಸುವುದು

ಅಧಿನಿಯಮದ ಉದ್ದೇಶವಾಗಿದೆ. ಇದು ಕಾರ್ಮಿಕರ ಅವಲಂಬಿತ ವ್ಯಕ್ತಿಗಳಿಗೂ ಸೌಲಭ್ಯ ಒದಗಿಸಿಕೊಡುವಂತೆ ಒತ್ತಾಯಿಸಿದೆ.

೭. **ಕಾರ್ಖಾನೆಗಳ ಅಧಿನಿಯಮ** ೧೯೪೮ ಸೆಪ್ಟೆಂಬರ್ ೩ ರಂದು ಜಾರಿಗೆ ಬಂದಿದೆ. ಕಾರ್ಮಿಕರು ಕಾರ್ಖಾನೆಗಳಲ್ಲಿ ಎಷ್ಟು ಗಂಟೆಗಳ ಕೆಲಸ ಮಾಡಬೇಕೆಂದು ಅವರಿಗೆ ಸಂಬಂಧಿಸಿದ ರಜೆಯನ್ನು ವೇತನಗಳನ್ನು ಕುರಿತು ವಿವರಿಸುವ ವಿಧಿಯಾಗಿದೆ.

ಕೈಗಾರಿಕೆಗಳ ಅಧಿನಿಯಮದ ೪೮ ನೇ ಪ್ರಕರಣದ ಅನ್ವಯ ಒಂದು ಕೈಗಾರಿಕೆಯಲ್ಲಿ ೩೦ಕ್ಕಿಂತ ಹೆಚ್ಚು ಮಹಿಳಾ ಕಾರ್ಮಿಕರು ಕೆಲಸ ಮಾಡುತ್ತಿದ್ದರೆ ಅಲ್ಲಿ ಒಂದು ಮಕ್ಕಳ ಕೊಠಡಿ ಇರಬೇಕೆಂದು ನಿಯಮವಿದೆ. ಈ ವ್ಯವಸ್ಥೆ ಹಟ್ಟಿ ಗಣಿ ಕಂಪನಿಯಲ್ಲಿ ಇಲ್ಲದಿರುವುದು ಕ್ಷೇತ್ರಕಾರ್ಯದ ಸಂರ್ದದಲ್ಲಿ ಕಂಡುಕೊಳ್ಳಲಾಗಿದೆ. ಮಹಿಳೆಯರಿಗೆ ವಿಶ್ರಾಂತಿ ಕೊಠಡಿ ಶೌಚಾಲಯ ಗೃಹ ನೀರಿನ ವ್ಯವಸ್ಥೆ ಬಿಟ್ಟರೆ ಮತ್ತಾವುದೇ ವಿಶೇಷ ಸೌಲಭ್ಯಗಳು ಹಟ್ಟಿ ಕಾರ್ಮಿಕರಿಗಿಲ್ಲ.

೩.೧.೫ ಕಾರ್ಮಿಕರ ಮಾನಸಿಕ ದೈಹಿಕ ಹಾಗೂ
ಆರೋಗ್ಯಕ್ಕೆ ಸಂಬಂಧಿಸಿದ ನೀತಿಗಳು

ಹಟ್ಟಿ ಚಿನ್ನದ ಗಣಿ ಕಂಪನಿಯು ಕಾರ್ಮಿಕರಿಗಾಗಿ ಹಾಗೂ ಕಾರ್ಮಿಕರುಗಳ ಸಮಸ್ತ ಕುಟುಂಬಾಕ್ಕಾಗಿ ಅನೇಕ ವೈಧ್ಯಕೀಯ ಸೌಲಭ್ಯಗಳನ್ನು ಒದಗಿಸಿಕೊಟ್ಟಿದೆ. ಹಟ್ಟಿಯಲ್ಲಿ ಆರೋಗ್ಯಾ ಕೇಂದ್ರವನ್ನು ಆರಂಭಿಸಲಾಗಿದ್ದು ಎಲ್ಲಾ ರೋಗಗಳಿಗೆ ಚಿಕಿತ್ಸೆಯನ್ನು ನೀಡಲಾಗುತ್ತದೆ. ಗಣಿ ಕಾರ್ಮಿಕರಿಗೆ ಕೆಲಸ ನಿರ್ವಹಿಸುವ ಸಮಯದಲ್ಲಿ ಅಪಘಾತ ಸಂಭವಿಸಿದರೆ ಅಂತಹ ಕಾರ್ಮಿಕರಿಗೆ ತುರ್ತು ಚಿಕಿತ್ಸೆಗಾಗಿ ಬೇರೆ ಕಡೆಗೆ ವೈಧ್ಯಕೀಯ, ಸೌಲಭ್ಯಗಳನ್ನು ಒದಗಿಸಿಕೊಡುತ್ತಿದೆ. ಎಲ್ಲಾ ಖರ್ಚು ವೆಚ್ಚಗಳು ಕಂಪನಿಯೇ ನೋಡಿಕೊಳ್ಳುತ್ತದೆ. ಒಂದು ವೇಳೆ ಚಿಕಿತ್ಸೆ ಯಶಸ್ವಿಯಾಗದೇ ಹೋದರೆ ಅಂತಹ ಕುಟುಂಬಕ್ಕೆ ಪರಿಹಾರವನ್ನು ನೀಡಿ ಕುಟುಂಬದಿಂದ ಒಬ್ಬರಿಗೆ ಕೆಲಸ ನೀಡುವ ಸೌಲಭ್ಯವನ್ನು (ಸರ್ಕಾರದ ನಿಯಮ) ಪಾಲಿಸಿಕೊಂಡು ಬಂದಿದೆ.

ಹಟ್ಟಿ ಚಿನ್ನದ ಗಣಿ ಕಂಪನಿಯು ಆರೋಗ್ಯ ಕೇಂದ್ರವು ವಿಶಾಲವಾದ ಕಟ್ಟಡದಿಂದ ಕೂಡಿದೆ. ಸುಮಾರು ೭೦ ರಿಂದ ೮೦ ಹಾಸಿಗೆಯಿಂದ ಕೂಡಿದಂತಹ ಆಸ್ಪತ್ರೆಯಾಗಿದೆ. ಆರೋಗ್ಯ ಕೇಂದ್ರದ ವತಿಯಿಂದ ಕಂಪನಿಯು ಕಾರ್ಮಿಕರಿಗಾಗಿ ಅನೇಕ ಜಾಗೃತಿಶಿಬಿರಗಳನ್ನು ಏರ್ಪಡಿಸಿದೆ. ಏಡ್ಸ್ ಜಾಗೃತಿ ಶಿಬಿರ, ರಕ್ತದಾನ ಶಿಬಿರ, ಉಚಿತ ನೇತ್ರ ಚಿಕಿತ್ಸ, ಪರಿಣಿತ ತಜ್ಞರಿಂದ ರೋಗದ ಬಗ್ಗೆ ಮಾಹಿತಗಳನ್ನು ನೀಡುತ್ತಾ ಬರುತ್ತಲಿದೆ.

ಜೀವ ವಿಮಾ, ಅಪಘಾತ ಸಂಭವಿಸಿದಾಗ ಅದಕ್ಕೂ ವಿಶೇಷವಾದ ವಿಮೆ ಸೌಲಭ್ಯ ಜಾರಿಗೆ ತಂದಿದೆ. ಇಷ್ಟೆಲ್ಲಾ ಸೌಲಭ್ಯಗಳನ್ನು ಮಾಡಿಕೊಟ್ಟಿರುವ ಕಂಪನಿಯು ಕಾರ್ಮಿಕರ ದಶ್ಚಟಗಳಿಗೆ ಯಾವುದೇ ರೀತಿಯ ತಡೆಯನ್ನು ಮಾಡಿಲ್ಲ. ಸಾಯಂಕಾಲ ಆರು ಗಂಟೆಯಾಗುತ್ತಿದ್ದ ಹಾಗೇ ಅನೇಕ ಕಾರ್ಮಿಕರು ಮಧ್ಯದ ಅಂಗಡಿಗೆ ಹೋಗಿ ಕುಡಿದು ಬೀದಿಯಲ್ಲಿ ಬಿದ್ದಿರುವ ದೃಶ್ಯ ಕ್ಷೇತ್ರ ಕಾರ್ಯದ ಸಂದರ್ಭದಲ್ಲಿ

ಮನಗಾಣಲಾಗಿದೆ. ಕುಡಿತದ ಜೋತೆಗೆ ಮಟಗಾ (ಓಸಿ) ಆಡುವ ಕೆಟ್ಟ ಚಟವನ್ನು ಇಲ್ಲಿಯ ಕಾರ್ಮಿಕರು ರೂಢಿಸಿಕೊಂಡಿರುವರು. ಇದರಿಂದ ತಮ್ಮ ಜೀವನವನ್ನೆ ದಶ್ಚಟಗಳಿಗೆ ಬಲಿಯಾಗಿ ಹಾಳು ಮಾಡಿಕೊಳ್ಳುತ್ತಿರುವರು. ಇದರಿಂದ ಅವರ ಮಾನಸಿಕ ಸ್ಥಿತಿಯು ಉತ್ತಮವಾಗಿರಲು ಸಾಧ್ಯವಿಲ್ಲ. ಕೆಲಸದಲ್ಲಿ ಏಕಾಗ್ರತೆ ಮೂಡುವುದು ಕೂಡ ಕಠಿಣವೆನ್ನಬಹುದು. ಮೇಲಿನ ಹವ್ಯಾಸದಿಂದಾಗಿ ಹಣ ಸಾಕಾಗದೇ ಇದ್ದಾಗ ಕುಟುಂಬದಲ್ಲಿ ಕಲಹಗಳು, ಮನಸ್ತಾಪಗಳು ಏರ್ಪಡುವುದು ಸರ್ವೇಸಾಮಾನ್ಯ.

ಕುಡಿತಕ್ಕೆ ಒಳಗಾಗಿರುವ ಕಾರ್ಮಿಕರನ್ನು ಕುರಿತು ಪ್ರಶ್ನಿಸಿದಾಗ ಅವರು ಹೇಳಿಕೊಳ್ಳುವ ಸಮಾಧಾನ ಈ ರೀತಿಯಾಗಿದೆ. ನಮ್ಮ ಗಣಿ ಕೆಲಸ ತುಂಬಾ ಕಠಿಣವಾದದ್ದು ಅದಕ್ಕಾಗಿ ಮನಸ್ಸು ಮತ್ತು ದೇಹ ಭಾರವಾಗಿರಬಾರದು. ಅದಕ್ಕಾಗಿ ಕುಡಿಯಬೇಕೆನಿಸುತ್ತದೆ. ಭೂಮಿಯ ಆಳಕ್ಕೆ ಇಳಿದು ಕಾರ್ಯ ನಿರ್ವಹಿಸುವ ನಮ್ಮ ಈ ಸಮಸ್ಯೆ ಯಾರಿಗೂ ಅರ್ಥವಾಗುವುದಿಲ್ಲ. ಏಕೆಂದರೆ ಭೂಮಿಯ ಆಳಕ್ಕೆ ಇಳಿದಾಗ ಜೀವಂತವಾಗಿ ಹೋರಬರುತ್ತೆವೆ ಎಂಬ ಆಸೆಯೇ ಇರುವುದಿಲ್ಲ ಒಳಗಡೆ ಭೂಮಿಯ ಸ್ಫೋಟಿಸಿದಾಗ ಸಡಿಲಿಕೆಯಿಂದ ಕಾರ್ಮಿಕರ ಮೇಲೆ ಬಿದ್ದುಬಿಡಬಹುದು ಅಂತಹ ಭೀಕರವಾದ ಸಮಸ್ಯೆಯನ್ನು ಎದುರಿಸಲು ಧೈರ್ಯ ಬೇಕು. ಆಧೈರ್ಯ ನಮಗೆ ಕುಡಿಯುವುದರಿಂದ ಬರುತ್ತದೆ. ಎಂದು ಹೇಳಿಕೊಳ್ಳುತ್ತಾರೆ.

ಹಟ್ಟಿ ಚಿನ್ನದ ಗಣಿ ಕಂಪನಿಯಲ್ಲಿ ಕೆಲಸಮಾಡುತ್ತಿರುವ ಕಾರ್ಮಿಕರುಗಳಿಗೆ ಅತಿ ಹೆಚ್ಚು ಏಡ್ಸ್ ಗೋಗಿಗಳಾಗಿರುವರು. ರಾಯಚೂರು ಜಿಲ್ಲೆಯಲ್ಲಿಯೇ ಹಟ್ಟಿ ಹಳ್ಳಿಯಲ್ಲಿ ಅತಿ ಹೆಚ್ಚು ಎಂದು ಧಾಖಲೆಗಳಿಂದ ತಿಳಿದುಬರುತ್ತದೆ. ೨೦೦೪ ಮತ್ತು ೨೦೦೫ ರ ಒಂದು ವರ್ಷದ ದಾಖಲಾತಿ ಪುಸ್ತಕವನ್ನು ಆರೋಗ್ಯ ಕೇಂದ್ರದಲ್ಲಿತೆಗೆದು ನೋಡಿದಾಗ ಏಡ್ಸ್ ಗೋಗದಿಂದ ಸುಮಾರು ೮೦ ಕ್ಕೂ ಹೆಚ್ಚು ಜನರು ಎಚ್.ಐ.ವಿ. ಪೀಡಿತರಾಗಿದ್ದಾರೆ. ಇದರಿಂದ ಕಾರ್ಮಿಕರುಗಳು ಎಷ್ಟು ಅಜಾಗೃತರಾಗಿದ್ದಾರೆ ಎಂದು ತಿಳಿದು ಬರುತ್ತದೆ. ಇದರ ಜೊತೆಗೆ ಅಲ್ಸರ್ ಅಧಿಕ ರಕ್ತ ಸ್ರಾವ, ಶ್ವಾಸಕೋಶದ ಬಾಧೆ, ಟಿ.ಬಿ. ಇನ್ನು ಮುಂತಾದ ರೋಗಗಳಿಂದ ಬಳಲುತ್ತಿರುವ ಅಂಕಿ ಸಂಖ್ಯೆಗಳು ಸಿಗುತ್ತಿಲ್ಲ. (ರಾಯಚೂರು ವಾಣಿ ದಿನ ಪತ್ರಿಕೆ ದಿನಾಂಕ) ಇದಕ್ಕೆಲ್ಲಾ ಒಂದು ರೀತಿಯಿಂದಾಗಿ ಕುಡಿತವೇ ಕಾರಣವೆಂದು ಹೇಳಬಹುದು. ಹಟ್ಟಿ ಚಿನ್ನದ ಗಣಿ ಕಂಪನಿಯ ಮುಖ್ಯಸ್ಥರಲ್ಲಿ ಪ್ರೀತಿ ಪೂರ್ವಕ ಮನವಿಯೆಂದರೆ ಆದಷ್ಟು ಹಟ್ಟಿ ಸುತ್ತ-ಮುತ್ತ ಮಧ್ಯದಂಗಡಿ ಮತ್ತು ಮಟಗಾ ಆಡುವ ಜನರನ್ನು ವಿಚಾರಣೆಗೆ ತೆಗೆದುಕೊಂಡು ಕಡಿಮೆಗೊಳಿಸಬೇಕು. ಹಾಗೂ ಕಡಿತದಿಂದ ಕೆಲಸಕ್ಕೆ ಬರುವ ಕಾರ್ಮಿಕರನ್ನು ಅಮಾನತ್ತು ಗೊಳಿಸುವುದಾಗಿ ತಿಳಿಸಿದಾಗ ಬಹುಶಃ ಈ ಸಮಸ್ಯೆ ಸ್ವಲ್ಪ ಕಡಿಮೆಯಾಗಬಹುದು.

೩.೨ ಆರ್ಥಿಕ ನೆಲೆಯ ಅಧ್ಯಯನ

೩.೨.೧ ಕಾರ್ಮಿಕರ ಸದ್ಯದ ಆರ್ಥಿಕ ಸ್ಥಿತಿಗತಿ

ಪ್ರಸ್ತುತ ಅಧ್ಯಯನದ ವ್ಯಾಪ್ತಿಯು ಹಟ್ಟಿ ಚಿನ್ನದ ಗಣಿ ಕಾರ್ಮಿಕರ ಆರ್ಥಿಕ ಪರಿಸ್ಥಿತಿಗಳನ್ನು ವಿವರಿಸಲು ನಿರ್ಧರಿಸಿಕೊಳ್ಳಲಾಗಿದೆ. ಹಟ್ಟಿ ಚಿನ್ನದ ಗಣಿ ಕಾರ್ಮಿಕರೊಂದಿಗೆ ನಡೆಸಿದ ಸಂದರ್ಶನ ಹಾಗೂ

ಪ್ರಶ್ನಾವಳಿಯನ್ನಾಧರಿಸಿದ ಮಾಹಿತಿಯ ಪ್ರಕಾರ ಸದ್ಯದ ಆರ್ಥಿಕ ಪರಿಸ್ಥಿತಿಗಳಲ್ಲಿ ಸಾಕಷ್ಟು ಬದಲಾವಣೆಗಳು ಕಂಡುಬಂದಿವೆ. ಕೆಲವು ಕಾರ್ಮಿಕರ ಹೇಳಿಕೆ ಪ್ರಕಾರ ಬೇರೆ ಕ್ಷೇತ್ರದಲ್ಲಿ ದುಡಿಯುತ್ತಿರುವ ಕಾರ್ಮಿಕರುಗಳಿಗೆ ಹೋಲಿಸಿಕೊಂಡರೆ ನಮ್ಮ ಪರಿಸ್ಥಿತಿಗಳೇ ತುಂಬಾ ಸುಧಾರಿಸಿವೆ. ಬೋನಸ್, ಹೆಚ್ಚುವರಿ ಭತ್ಯ ಇತ್ಯಾದಿ ಲಾಭಾಂಶಗಳು ಬೇರೆ ವಲಯದ ಕಾರ್ಮಿಕರಿಗೆ ಬಹುಶಃ ಸಿಗುವುದು ಕಡಿಮೆ. ಹಟ್ಟಿ ಗಣಿ ಕಂಪನಿಯಲ್ಲಿ ದುಡಿಯುವುದರಿಂದ ಸಾಮಾಜಿಕವಾಗಿ, ಆರ್ಥಿಕವಾಗಿ, ಸಾಂಸ್ಕೃತಿಕವಾಗಿ ಬಹಳಷ್ಟು ಬದಲಾವಣೆಗಳು ಕಂಡುಬಂದಿವೆ. ಮೇಲಿನ ಹೇಳಿಕೆ ಎಲ್ಲಾ ಕಾರ್ಮಿಕರಿಗೆ ಅನ್ವಯಿಸುವುದಿಲ್ಲ. ಹಟ್ಟಿ ಕಂಪನಿಯಲ್ಲಿ ಕೆಳಸ್ತರದ ಕಾರ್ಮಿಕರು ಇಂದಿಗೂ ಅನೇಕ ಸಮಸ್ಯೆಗಳನ್ನು ಎದುರಿಸುತ್ತಿರುವರು. ಇವರು ಅನಕ್ಷರಸ್ಥರಾಗಿರುವುದರಿಂದ ಉನ್ನತ ಮಟ್ಟದ ಉದ್ಯೋಗವಕಾಶಗಳು ಲಭಿಸುವುದಿಲ್ಲ. ದೊರೆತಂತಹ ಉದ್ಯೋಗದಲ್ಲಿ ಜೀವನ ನಿರ್ವಹಿಸುವುದು ತುಂಬಾ ಕಷ್ಟಕರವಾಗಿರುತ್ತದೆ. ಕೆಳಸ್ತರದ ಕಾರ್ಮಿಕರಲ್ಲಿ ಹೆಚ್ಚಿನ ಜನ ದುಶ್ಚಟಗಳಿಗೆ ಬಲಿಯಾಗಿರುತ್ತಾರೆ. ತಮ್ಮ ವೇತನದ ಅರ್ಧಭಾಗ ಕುಡಿತಕ್ಕೆ, ಮಟ್ಕಾ ಹಾಗೂ ಇನ್ನಿತರ ಚಟಗಳಿಗೆ ಖರ್ಚಾಗುವುದು. ಇದರಿಂದಾಗಿ ಜೀವನದ ನಿರ್ವಹಣೆಗೆ, ಸಮಸ್ಯೆಗಳುಂಟಾಗುತ್ತವೆ. ಇನ್ನಿತರ ಅವಕಾಶಗಳಿಗೆ ಸಾಲಕ್ಕೆ ಮೊರೆಹೋಗಿ ಉನ್ನತ ಅಧಿಕಾರಿಗಳಲ್ಲಿ ಅಥವಾ ಶ್ರೀಮಂತ ವ್ಯಕ್ತಿಗಳಲ್ಲಿ ಬಡ್ಡಿಗಾಗಿ ಸಾಲಕ್ಕೆ ಮೊರೆ ಹೋಗಿ ತಮ್ಮ ಜೀವನವನ್ನು ಸಾಲದಲ್ಲಿಯೇ ಮುಗಿಸಿ ಮುಂದಿನ ಅವರ ಪೀಳಿಗೆಯವರಿಗೂ ಸಾಲವನ್ನು ಪಿತ್ರಾರ್ಜಿತ ಆಸ್ತಿಯನ್ನಾಗಿ ಬಿಟ್ಟು ಹೋಗುತ್ತಿದ್ದಾರೆ.

ಹಟ್ಟಿ ಗಣಿ ಕಂಪನಿಯು ಕಾರ್ಮಿಕರುಗಳಿಗೆ ವಸತಿ ಸೌಲಭ್ಯ ಒದಗಿಸಿಕೊಟ್ಟಿದೆ. ಒಂದೊಂದು ಮನೆಯು ಆರು ಕೋಣೆಗಳಿಂದ ಕೂಡಿದೆ. ಎಲ್ಲಾ ಸೌಲಭ್ಯಗಳ ಜೊತೆಗೆ ಉತ್ತಮವಾದ ಗಾರ್ಡನ್ ವ್ಯವಸ್ಥೆಯನ್ನು ಮಾಡಿದೆ. ಆದರೆ ಇಲ್ಲಿಯ ಕಾರ್ಮಿಕರು ಅದನ್ನು ಸ್ವಂತಕ್ಕಾಗಿ ಉಪಯೋಗಿಸದೇ ಬಾಡಿಗೆಗೆ ನೀಡಿರುವುದು ಕ್ಷೇತ್ರಕಾರ್ಯ ಸಂದರ್ಭದಲ್ಲಿ ಕಂಡುಕೊಳ್ಳಲಾಗಿದೆ.

ಹಟ್ಟಿ ಚಿನ್ನದ ಗಣಿ ಕಂಪನಿಯು ಕಾರ್ಮಿಕರಿಗಾಗಿ ಅನೇಕ ಆರ್ಥಿಕ ನೆರವುಗಳನ್ನು ಮಾಡಿಕೊಟ್ಟಿದೆ.

೧. ಔದ್ಯೋಗಿಕ ಖಾಯಿಲೆ ವಿಮೆ

೨. ಎಲ್.ಐ.ಸಿ. ಜೀವವಿಮೆ


೩. ಅಪಘಾತ ವಿಮೆ

ಇವುಗಳ ಜೊತೆಗೆ ಸರ್ಕಾರ ಹಾಗೂ ಖಾಸಗಿಯವರು ನೀಡುವ ಜೀವವಿಮೆಯ ಸೌಲಭ್ಯಗಳನ್ನು ಕಾರ್ಮಿಕರಿಗೆ ಸಂಪೂರ್ಣವಾಗಿ ಒದಗಿಸಿದೆ.

೩.೨.೨ ಖಾಯಂ ಹಾಗೂ ಗುತ್ತಿಗೆ ಆಧಾರದ ನೌಕರರ ಸಮೀಕ್ಷೆ

ದೇಶದಾದ್ಯಂತ ಅನೇಕ ವಲಯಗಳಲ್ಲಿ ಕಾರ್ಮಿಕರುಗಳ ತಮ್ಮನ್ನು ಒಂದಲ್ಲಾ ಒಂದು ನೆಲೆಯಲ್ಲಿ ಗುರುತಿಸಿಕೊಂಡು ಕೆಲಸ ಮಾಡುತ್ತಾ ಬರುತ್ತಿರುವರು. ಸಂಘಟಿತ ವಲಯದ ಕಾರ್ಮಿಕರಿಗಿಂತ ಅಸಂಘಟಿತ ವಲಯದ ಕಾರ್ಮಿಕರುಗಳ ಸಂಖ್ಯೆ ಅತಿ ಹೆಚ್ಚು. ಸುಮಾರು ಎರಡು ಲಕ್ಷ ಜನರು ಅಸಂಘಟಿತ ವಲಯದ

ಹಟ್ಟಿ ಚಿನ್ನದಗಣಿ ಒಟ್ಟು ಕಾರ್ಮಿಕರ ಶೈಕ್ಷಣಿಕ ಮಟ್ಟವನ್ನು ತೋರಿಸುವ ನಕ



A= 100%
B= 100%
C= 8%
D= 57%

ಎ. ಪ್ರಥಮ ದರ್ಜೆ ಕಾರ್ಮಿಕರು
ಬಿ. ದ್ವಿತೀಯ ದರ್ಜೆ ಕಾರ್ಮಿಕರು
ಸಿ. ತೃತೀಯ ದರ್ಜೆ ಕಾರ್ಮಿಕರು
ಡಿ. ನಾಲ್ಕನೆಯ ದರ್ಜೆ ಕಾರ್ಮಿಕರು
X= ಅಕ್ಷಾಂಶ ಕಾರ್ಮಿಕರ ಗುಂಪು
Y= ಶಿಕ್ಷಣ ಪಡೆದ ಕಾರ್ಮಿಕರ ಸಂಖ್ಯೆ

ಕಾರ್ಮಿಕರು ಕೆಲಸ ಮಾಡುತ್ತಿದ್ದಾರೆ. ಇವರಿಗೆ ಕನಿಷ್ಠ ವೇತನ ದೊರಕದೆ ಸಮಸ್ಯೆಗಳಲ್ಲಿ ಸಿಲುಕಿರುತ್ತಾರೆ. (ವರ್ಗಸಮರ, ಸಂಚಿಕೆ ೪, ಮಾ.ಪತ್ರಿಕೆ) ಹಟ್ಟಿ ಚಿನ್ನದ ಗಣಿ ಕಂಪನಿಯಲ್ಲಿ ಅತಿ ಹೆಚ್ಚು ಖಾಯಂ ನೌಕರರುಗಳೇ ಇರುವುದರಿಂದ ಗುತ್ತಿಗೆ ಆಧಾರಿತ ನೌಕರರ ಸಂಖ್ಯೆ ಕಡಿಮೆಯಿರುವುದು ಕಂಡುಬರುತ್ತದೆ. ಖಾಯಂ ನೌಕರರಿಗೆ ಕಂಪನಿಯು ಅನೇಕ ಸೌಲಭ್ಯಗಳನ್ನು ಒದಗಿಸಿ ಕೊಟ್ಟಿದ್ದು ಕಂಡು ಬರುತ್ತದೆ. ಔದ್ಯೋಗಿಕ ಭದ್ರತೆ, ವಸತಿ, ವೈದ್ಯಕೀಯ, ಸೊಸೈಟಿ ವ್ಯವಸ್ಥೆ ಇತ್ಯಾದಿ. ಜೀವವಿಮೆಗಳ ಸೌಲಭ್ಯ ಮುಂತಾದವುಗಳು. ಮೇಲಿನ ಯಾವ ಸೌಲಭ್ಯಗಳು ಗುತ್ತಿಗೆ ಆಧಾರಿತ ನೌಕರರು, ಒಂದು ವೇಳೆ ಕೆಲಸದ ಸಮಯದಲ್ಲಿ ಅಪಘಾತ ಸಂಭವಿಸಿದಾಗ ಇವರಿಗೆ ಪರಿಹಾರ ಸೂಚಿಸುವುದು ಕಷ್ಟವಾಗಿರುತ್ತದೆ. ಯಾವುದಾದರೊಂದು ನೆಪಹೇಳಿ ಕಂಪನಿಯು ತಪ್ಪಿಸಿಕೊಳ್ಳುವ ಸಂಭವವೇ ಅತಿ ಹೆಚ್ಚು. (೧೬.೧೨.೦೫ ರಂದು ಮಾಡಿದ ಸಂದರ್ಶನ) ಎಂದು ತಿಳಿಯಲಾಗಿದೆ. ಕೆಲಸವನ್ನು ಗುತ್ತಿಗೆಗೆ ಪಡೆದು ಕೆಲಸ ಮಾಡುತ್ತಿರುವುದು ಕಂಡುಬರುತ್ತದೆ. ಕೆಲಸ ಮುಗಿದ ನಂತರ ಕಂಪನಿಗೆ ಮತ್ತು ಇವರಿಗೆ ಯಾವುದೇ ರೀತಿಯ ಸಂಬಂಧಗಳಿರುವುದಿಲ್ಲ. ಗುತ್ತಿಗೆ ನೌಕರರು ಪ್ರತ್ಯೇಕವಾದ ಸಂಘವನ್ನು ನಿರ್ಮಿಸಿಕೊಂಡಿಲ್ಲ, ನಿರ್ಮಿಸಿಕೊಂಡರೂ ಸಂಘಟನೆಯ ಮನೋಭಾವನೆಗಳು ಇವರ ಮಧ್ಯೆ ಕಂಡುಬರುತ್ತಿಲ್ಲ. ಪ್ರತಿಯೊಬ್ಬರ ಭಿನ್ನ ವಿಚಾರಗಳಿಂದ ಒಂದೇ ರೀತಿಯ ಅಭಿಪ್ರಾಯಗಳಿಗೆ ಸಮ್ಮತಿಸುವುದು ಕಷ್ಟಕರವಾಗಿರುತ್ತದೆ. ದಿನಗೂಲಿ ನೌಕರರಂತೆ ಆಯ್ಕೆಯಾಗಿದ್ದು, ಹೆಚ್ಚುವರಿ ಭತ್ಯೆ, ಬೋನಸ್ ಯಾವುದು ನೀಡಲಾಗುವುದಿಲ್ಲ. ಕನಿಷ್ಟ ವೇತನವನ್ನು ಮಾತ್ರ ಪಡೆದುಕೊಂಡು ಕೆಲಸಮಾಡುತ್ತಿರುವರು. ಗುತ್ತಿಗೆ ಆಧಾರಿತ ನೌಕರರನ್ನು ಕೆಲಸವಿದ್ದಾಗ ಮಾತ್ರ ಕಂಪನಿಗೆ ಕರೆಸಿಕೊಂಡು ಕೆಲಸಮಾಡಿಸುತ್ತಾರೆ. ಕೆಲಸ ಮುಗಿದ ನಂತರ ಕಾರ್ಮಿಕರಿಗೂ ಕಂಪನಿಗೂ ಯಾವುದೇ ಸಂಬಂಧವಿರುವುದಿಲ್ಲ. ಇವರಿಗೆ ಔದ್ಯೋಗಿಕ ಭದ್ರತೆ ನೀಡಿರುವುದಿಲ್ಲ. ಆದ್ದರಿಂದ ಗುತ್ತಿಗೆ ನೌಕರರು ಕಂಪನಿಯ ಜೊತೆ ಯಾವುದೇ ರೀತಿಯ ಒಡನಾಟ ಬೆಳಸಿಕೊಂಡಿಲ್ಲ ಎಂದು ಸಂದರ್ಶನ ಸಮಯದಲ್ಲಿ ತಿಳಿಸಿರುವರು. ಗುತ್ತಿಗೆ ನೌಕರರನ್ನು ಖಾಯಂ ಗೊಳಿಸದೇ ಇದ್ದರೂ ಅವರಿಗೆ ನಿರಂತರ ಕೆಲಸ ಮತ್ತು ಕನಿಷ್ಟ ವೇತನವನ್ನಾದರೂ ನೀಡಿದರೆ ಜೀವನ ಮಟ್ಟ ಸುಧಾರಿಸಿಕೊಳ್ಳಲು ಸಾಧ್ಯವಾಗುತ್ತದೆ. ಈ ವರ್ಗದ ಕಾರ್ಮಿಕರು ನಮಗೆ ನಿರಂತರ ಕೆಲಸಗಳು ದೊರಕುವುದಿಲ್ಲ ಅವಶ್ಯಕತೆ ಬಿದ್ದಾಗ ಮಾತ್ರ ಕಂಪನಿಯು ಕೆಲಸ ನೀಡುತ್ತದೆ, ನಂತರ ನಾವೆಲ್ಲ ನಿರುದ್ಯೋಗಿಗಳಾಗುತ್ತೇವೆ ಎಂದು ತಮ್ಮ ಸಮಸ್ಯೆಯನ್ನು ಹೇಳಿಕೊಳ್ಳುತ್ತಾರೆ. ಖಾಯಂ ನೌಕರರುಗಳಿಗೆ ಇರುವಂತಹ ಯಾವ ಸೌಲಭ್ಯಗಳೂ ನಮಗೆ ನೀಡುವುದಿಲ್ಲ, ನಮ್ಮ ಕೆಲಸ ಕೇವಲ ಹಟ್ಟಿಕಂಪನಿ ಮಾತ್ರವಾಗಿರದೇ ಬೇರೆ ಬೇರೆ ವಲಯಗಳಿಗೂ ಕೆಲಸವನ್ನು ಹುಡುಕಿಕೊಂಡು ಹೋಗುತ್ತೇವೆ ಎನ್ನುತ್ತಾರೆ.

೩.೨.೩ ಕಾರ್ಮಿಕರಿಗೆ ಬೋನಸ್ ಹಾಗೂ ಇತರೆ ಸೌಲಭ್ಯಗಳ ಸಮೀಕ್ಷೆ

ದೇಶದ ಎಲ್ಲಾ ಕೈಗಾರಿಕಾ ಕಂಪನಿಗಳು ತಮ್ಮ ಲಾಭಾಂಶವನ್ನು ಗಮನದಲ್ಲಿಟ್ಟುಕೊಂಡು ಕಾರ್ಮಿಕರಿಗೆ ಬೋನಸ್ ಹಾಗೂ ಇತರೆ ಸೌಲಭ್ಯಗಳನ್ನು ಇಂತಿಷ್ಟು ಎಂದು ನಿರ್ಧರಿಸಿಕೊಂಡು ವಿತರಿಸುತ್ತಾ ಬರುತ್ತಿರುತ್ತವೆ. ಅದೇ ರೀತಿಯಾಗಿ ಹಟ್ಟಿಚಿನ್ನದ ಗಣಿ ಕಂಪನಿಯು ಕೂಡ ಕಾರ್ಮಿಕರಿಗೆ ಬೋನಸ್ ಹೆಚ್ಚುವರಿ ಭತ್ಯೆಗಳ ಜೊತೆ ಇನ್ನು ಅನೇಕ ಸೌಲಭ್ಯಗಳನ್ನು ಒದಗಿಸಿಕೊಟ್ಟಿದೆ.

ಕಂಪನಿಯು ಕಾರ್ಮಿಕರಿಗೆ ಮಾಡಿಕೊಟ್ಟ ಸೌಲಭ್ಯಗಳು

೧. ದುಡುಮೆಗೆ ತಕ್ಕ ವೇತನವನ್ನು ಹಾಗೂ ಹೆಚ್ಚುವರಿ ದುಡಿಮೆಗೆ ಭತ್ಯೆಯನ್ನು ನೀಡುತ್ತಾರೆ.

೨. ಬೋನಸ್ ಒಬ್ಬೊಬ್ಬ ಕಾರ್ಮಿಕನಿಗೆ ೩೦೦೦ ರೂಪಾಯಿಯ ತನಕ ನೀಡಿದ್ದು ಕ್ಷೇತ್ರಕಾರ್ಯದ ಸಂದರ್ಭದಲ್ಲಿ ಮನಗಾಣಲಾಗಿದೆ ವರ್ಷಕ್ಕೆ ಒಂದು ಸಲ ಬೋನಸ್ ನೀಡುವರು. ಹಾಜರಾತಿಯು೨೬೦ ದಿನಗಳಿಗಿಂತ ಕಡಿಮೆಯಿದ್ದಲ್ಲಿ ಬೋನಸ್‌ನಲ್ಲಿ ಕಡಿತಗೊಳಿಸಲಾಗುತ್ತದೆ.

೩. ಪ್ರಸ್ತುತ ಸಂದರ್ಭದಲ್ಲಿ ಕಂಪನಿಯು ಹೆಚ್ಚುವರಿ ಲಾಭಾಂಶದಿಂದ ಕೂಡಿದೆ. ಅದಕ್ಕಾಗಿ ಕಾರ್ಮಿಕರುಗಳಿಗೆ ಕನಿಷ್ಟ ೨೦೦೦ ರೂಪಾಯಿ ನೀಡಿರುವುದು ಕಂಡು ಬಂದಿದೆ.

೪. ವಸತಿ ಸೌಲಭ್ಯಗಳ ಜೊತೆಗೆ, ವಿದ್ಯುತ್, ಕುಡಿಯುವ ನೀರು ಹಾಗೂ ಸಹಕಾರ ಸಂಘ ಹಾಗೂ ಪಡಿತರ ವ್ಯವಸ್ಥೆಯನ್ನು ಮಾಡಿಕೊಟ್ಟಿರುವರು.

೫. ಉಚಿತ ವೈದ್ಯಕೀಯ ಸೌಲಭ್ಯಗಳನ್ನು ಕಂಪನಿಯು ಒದಗಿಸಿದೆ.

೬. ಕಾಮಿರ್ಕರಿಗೆ ಜೀವ ವಿಮೆ, ಅಪಘಾತ ವಿಮ ಹಾಗೂ ಪಿಂಚಣಿ ಬರುವಂತೆ ವ್ಯವಸ್ಥೆಯನ್ನು ಕಂಪನಿಯು ಒದಗಿಸಿದೆ.

ವಾಹನ ಖರೀದಿ, ಮಕ್ಕಳ ಮದುವೆ, ಮನೆಕಟ್ಟಲು ಹಾಗೂ ಶಿಕ್ಷಣಕ್ಕಾಗಿ ಸಹಾಯ, ಅಲ್ಲದೆ ಹೆಚ್ಚುವರಿ ವೈದ್ಯಕೀಯ ಸೌಲಭ್ಯಕ್ಕೆ ಕಂಪನಿಯು ಸಾಲ ಕೊಡುವ ಯೋಜನೆ ಕೂಡ ಹಾಕಿಕೊಂಡಿದೆ.

ಪ್ರಸ್ತುತ ಸಂದರ್ಭದಲ್ಲಿ ಕಾರ್ಮಿಕ ಸಂಘದ ಅಧ್ಯಕ್ಷರಾಗಿ ಶ್ರೀ ರಾಘುವೇಂದ್ರ ಕುಷ್ಟಗಿಯವರು ಹಾಗೂ ಪ್ರಧಾನ ಕಾಯದರ್ಶಿಯಾಗಿ ಶ್ರೀ ವಾಲೇಬಾಬುರವರು ಆಯ್ಕೆಯಾದ ನಂತರ ಕಾರ್ಮಿಕರ ಅನೇಕ ಸಮಸ್ಯೆಗಳಿಗೆ ಪರಿಹಾರವನ್ನು ಜೊತೆಗೆ ಸೌಲಭ್ಯಗಳನ್ನು ಒದಗಿಸಿಕೊಡಲು ಕಂಪನಿಗೆ ಒತ್ತಾಯಿಸಿದರು. ಇವರ ಅಧ್ಯಕ್ಷತೆಯಲ್ಲಿ ಆದ ಕೆಲವು ಬದಲಾವಣೆಗಳು ಈ ರೀತಿಯಾಗಿವೆ.

೧. ಎಕ್ಸ್‌ಗ್ರೇಶಿಯಾ ಶೇಕಡ ೨೦, ಹೆಚ್ಚುವರಿ ಬಕ್ಷೀಸು ರೂಪಾಯಿ ೪೦೦೦ ಕೊಡುವಂತೆ ಕಂಪನಿಯಲ್ಲಿ ಮನವಿ ಸಲ್ಲಿಸಿ ಕಾರ್ಮಿಕರಿಗೆ ನೀಡುವಂತೆ ಒತ್ತಾಯಿಸಿದ್ದು ಕಂಡುಬರುತ್ತದೆ.

೨. ಸುಮಾರು ೩೦೦ ಜನ ಕಾರ್ಮಿಕರಿಗೆ ಕೆಲಸದ ಶ್ರೇಣಿಯಲ್ಲಿ ಆಗಿರುವ ತಾರತಮ್ಯ ಸರಿಪಡಿಸುವುದು.

೩. ಸುಮಾರು ೧೧೦೦ ಕಾರ್ಮಿಕರಿಗೆ ಟೈಮ್ ಸ್ಕೇಲ್‌ನಲ್ಲಿ ಬಡ್ತಿ ಒದಗಿಸಿ ಹೆಚ್ಚುವರಿ ವೇತನ ಮಾಡಿರುವುದು

ಸ್ವಯಂ ನಿವೃತ್ತಿ ಯೋಜನೆಯಡಿಯಲ್ಲಿ ಕಾರ್ಮಿಕರ ಮಕ್ಕಳಿಗೆ ಕೆಲಸ ಕೊಡಿಸಲು ಹಲವಾರು ಸುತ್ತಿನ ಚರ್ಚೆ ನಡೆದಿದ್ದು, ಸನ್ಮಾನ್ಯ ಸಕ್ಕರೆ ಖಾತೆ ಸಚಿವ ಹಾಗೂ ರಾಯಚೂರು ಜಿಲ್ಲೆಯ ಉಸ್ತುವಾರಿ ಸಚಿವರ ಮಧ್ಯಸ್ಥಿಕೆಯಿಂದ ಯೋಜನೆ ಕಾರ್ಯರೂಪಕ್ಕೆ ಬರುವ ಸಾಧ್ಯತೆಯಿದೆ.

ಹಟ್ಟಿ ಗಣಿ ಕಂಪನಿಯು ಇಷ್ಟೆಲ್ಲಾ ಸೌಲಭ್ಯಗಳನ್ನು ಒದಗಿಸಿಕೊಟ್ಟಿದ್ದಾಗ್ಯೂ ಕಾರ್ಮಿಕರು ಅನೇಕ ಸಮಸ್ಯೆಗಳ ಸುಳಿಯಲ್ಲಿ ಸಿಲುಕಿರುವುದು ಕ್ಷೇತ್ರಕಾರ್ಯದ ಸಂದರ್ಭದಲ್ಲಿ ಮನಗಾಣಲಾಗಿದೆ.

ಅಡಿಟಿಪ್ಪಣಿಗಳು

೧. ಕಾರ್ಮಿಕ ಕಾನೂನು (ಲೇ) ಎಂ.ಪಿ.ರಾವ್ ಪು.ಸಂ. ೫೦ ರಿಂದ ೫೪

೨. ಮಹಿಳೆ ಮತ್ತು ಕಾನೂನು (ಲೇ) ಟಿ.ಕಾ. ಮೂರ್ತೀಶ್ವರಯ್ಯ ಪು.ಸಂಖ್ಯೆ ೨೫ ರಿಂದ ೩೦

೩. ಕರ್ನಾಟಕ ರಾಜ್ಯ ಗ್ಯಾಸೆಟಿಯರ್ ಭಾಗ ಮೂರು. ೧೯೪ - ೧೯೫

೪. ಮಹಿಳೆ ಮತ್ತು ಕಾನೂನು (ಲೇ) ಟಿ. ಕಾ. ಮೂರ್ತೀಶ್ವರಯ್ಯ ಪು.ಸಂ ೩೨ ರಿಂದ ೩೭

೫. ಕಾರ್ಮಿಕ ಕಾನೂನು ಮತ್ತು ಮಾದರಿ ಪತ್ರಗಳು (ಲೇ) ಎಂ.ಆರ್. ನಟರಾಜ್ ಪು.ಸಂ. ೨೬ ರಿಂದ ೨೮

೬. ಕರ್ನಾಟಕ ರಾಜ್ಯ ಗ್ಯಾಸೆಟೀಯರ್ ಭಾಗ ೩. ಪು.ಸಂ ೧೯೭

೭. ಕಂಪನಿಯು ನೀಡಿದಂತ ಮಾಹಿತಿಗಳ ಪಟ್ಟಿ

ಅಧ್ಯಾಯ ನಾಲ್ಕು

ಸಂದರ್ಶನವನ್ನಾಧರಿಸಿದ ಮಾಹಿತಿ

ಅಧ್ಯಾಯ ನಾಲ್ಕು

ಸಂದರ್ಶನವನ್ನಾಧರಿಸಿದ ಮಾಹಿತಿ

ಅಧ್ಯಯನಕ್ಕೆ ಪೂರಕವಾಗಿರುವಂತಹ ಮಾಹಿತಿ ಸಂಗ್ರಹಣೆಗೆ ಹಟ್ಟಿ ಚಿನ್ನದ ಗಣಿ ಕಾರ್ಮಿಕರನ್ನು ಸಂದರ್ಶಿಸಲಾಯಿತು. ಸಂದರ್ಶಿಸಿದಂತಹ ಮಾಹಿತಿಗಳು ಈ ರೀತಿಯಾಗಿವೆ.

೧೩.೧೨.೦೫ ರಂದು ಸಂದರ್ಶಿಸಿದಾಗ ಬಂದಂತಹ ಮಾಹಿತಿ, ಕೆಲವು ಕಾರ್ಮಿಕರು ಈ ರೀತಿಯ ಹೇಳಿಕೆ ನೀಡುತ್ತಾರೆ. ಇಲ್ಲಿಯ ವೇತನ ತೃಪ್ತಿದಾಯಕವಾಗಿದೆ. ಆದರೆ ಬೋನಸ್ ಮಾತ್ರ ಸರಿಯಾದ ಸಮಯಕ್ಕೆ ಬರುವುದಿಲ್ಲ. ಇದರಿಂದ ಅನೇಕ ಸಮಸ್ಯೆಗಳುಂಟಾಗುತ್ತವೆ. ರಜೆಯನ್ನು ನೀಡುವುದು ಕೂಡ ನಮ್ಮ ದುಡಿತವನ್ನು ಅವಲಂಬಿಸಿರುತ್ತದೆ. ಒಂದು ವರ್ಷಕ್ಕೆ ೨೦ ದಿವಸ ಸಿ.ಎಲ್. ರಜೆ ಹಾಗೂ ಪಿ.ಎಲ್. ೧೦ ದಿವಸ ರಜೆಯನ್ನು ನೀಡುತ್ತಾರೆ. ಅದಕ್ಕಿಂತ ಹೆಚ್ಚು ರಜೆಯನ್ನು ಪಡೆದರೆ ವೇತನದಲ್ಲಿ ಕಡಿತಗೊಳಿಸುತ್ತಾರೆ ಎಂದು ತಿಳಿಸಿದರು.

೧೪.೧೨.೨೦೦೫ ರಂದು ಬಂದಂತಹ ಮಾಹಿತಗಳು ಇಲ್ಲಿ ಆರೋಗ್ಯಕ್ಕೆ ಸಂಬಂಧಿಸಿದ ಪ್ರಶ್ನೆಗಳನ್ನು ಕೇಳಲಾಗಿತ್ತು. ಪ್ರಥಮವಾಗಿ ಆರೋಗ್ಯ ಕೇಂದ್ರವನ್ನು ಸಂದರ್ಶಿಸಲಾಯಿತು.

ಹಟ್ಟಿ ಚಿನ್ನದ ಗಣಿ ಕಂಪಿನಿಯು ಕಾರ್ಮಿಕರಿಗಾಗಿ ಅನೇಕ ಸೌಲಭ್ಯಗಳನ್ನು ಒದಗಿಸಿಕೊಟ್ಟಿದೆ ಅದರಲ್ಲಿ ವೈಧ್ಯಕೀಯ ಸೌಲಭ್ಯೂ ಒಂದು ಇಲ್ಲಿ ಎಲ್ಲಾ ರೋಗಕ್ಕೆ ಚಿಕಿತ್ಸೆ ನೀಡಲಾಗುತ್ತದೆ. ಆದರೆ ಇಲ್ಲಿಯ ಬಹುಳಷ್ಟು ಕಾರ್ಮಿಕರು ಕುಡಿತದ ಚಟಕ್ಕೆ ಒಳಗಾಗಿರುವುದರಿಂದ ನಾವು ನೀಡಿದಂತಹ ಚಿಕಿತ್ಸೆ ವ್ಯರ್ಥವಾಗುತ್ತಲಿದೆ.

೨೦೦೪-೨೦೦೫ ನೇ ಒಂದು ವರ್ಷದ ದಾಖಲಾತಿ ಪುಸ್ತಕವನ್ನು ತೆಗೆದುನೋಡಿದಾಗ ಹೆಚ್.ಐ.ವಿ/ ಏಡ್ಸ್ ರೋಗಕ್ಕೆ ಬಲಿಯಾದ ಕಾರ್ಮಿಕರ ಸಂಖ್ಯೆ ೮೩ ಜನರು ಎಂದು ವೈಧ್ಯಕೀಯ ಮೂಲಗಳು ತಿಳಿಸುತ್ತವೆ. ಇಲ್ಲಿಯ ಕಾರ್ಮಿಕರು ಅತಿಹೆಚ್ಚು ಟಿ.ಬಿ. ಕ್ಯಾನ್ಸರ್, ಅಲ್ಸರ್ ದಂತಹ ರೋಗಗಳಿಗೆ ತುತ್ತಾಗುತ್ತೀರುವರು.

೨೦.೦೨.೨೦೦೫ ಮಹಿಳಾ ಕಾರ್ಮಿಕರನ್ನು ಸಂದರ್ಶಿಸಿದಾಗ ಬಂದಂತಹ ಮಾಹಿತಿಗಳು. ಮಿಲ್‌ಗಳಲ್ಲಿನ ಕೆಲವು ಮಹಿಳೆಯರ ಹೇಳಿಕೆಗಳು ಈ ರೀತಿಯಾಗಿವೆ. ನಮಗೆ ಗಂಡ ಸತ್ತನಂತರ ನಮ್ಮನ್ನು ಕೆಲಸಕ್ಕೆ ಸೇರಿಸಿಕೊಂಡರು. ನಾವು ಕೆಲಸಕ್ಕೆ ಸೇರಿ ಒಂದುವರೆ ತಿಂಗಳಾದರೂ ಇನ್ನು ನಮಗೆ ಬರಬೇಕಾದ

ಹರಿಯರ್ಸ್ ದುಡ್ಡು ಇನ್ನೂ ಬಂದಿಲ್ಲ. ಬೋನಸ್ಸ್ ಕೂಡ ಸರಿಯಾದ ಸಮಯಕ್ಕೆ ಬರುವುದಿಲ್ಲ. ಇದರಿಂದ ನಮ್ಮ ಕುಟುಂಬದ ನಿರ್ವಹಣೆಗೆ ತುಂಬಾ ಸಮಸ್ಯೆಯಾಗುತ್ತದೆ. ಎಂದು ಹೇಳಿಕೊಂಡಿದ್ದಾರೆ.

ಸಂಘವನ್ನು ನಿರ್ಮಿಸಿಕೊಳ್ಳುವುದರ ಕುರಿತು ಪ್ರಶ್ನೆ ಮಾಡಿದಾಗ ನಮಗೆ ಪ್ರತ್ಯೇಕ ಸಂಘ ನಿರ್ಮಿಸಿಕೊಳ್ಳುವಂತೆ ಕಂಪನಿಯು ಯಾವುದೇ ರೀತಿಯಿಂದ ಪ್ರೋತ್ಸಾಹಿಸಿಲ್ಲ ಎಂದು ಹೇಳಿಕೊಂಡಿದ್ದಾರೆ. ಹಟ್ಟಿ ಕಂಪನಿಯಲ್ಲಿ ಒಂದು ಮನವಿಯೆಂದರೆ ಮಹಿಳಾ ಕಾರ್ಮಿಕರಿಗೆ ಒಂದು ಪ್ರತ್ಯೇಕ ಸಂಘ ನಿರ್ಮಿಸಿಕೊಳ್ಳುವಂತೆ ಪ್ರೋತ್ಸಾಹಿಸಬೇಕು. ಮುಷ್ಕರದಲ್ಲಿ ಪಾಲ್ಗೊಂಡಂತಹ ಅನುಭವಿಲ್ಲವೆಂದು ಹೇಳಿಕೊಂಡಿದ್ದಾರೆ.

ಸಂಘ ಸಂಸ್ಥೆಗಳು ಕಾರ್ಮಿಕರ ಪರವಾಗಿಯೇ ಹೋರಾಡುತ್ತಲಿವೆ. ಎಂದು ಬಹಳಷ್ಟು ಕಾರ್ಮಿಕರು ನೀಡಿದ ಮಾಹಿತಿಯಾಗಿದೆ. ಶ್ರೀ ಪಾಲೇಬಾಬುರವರು ಕಾರ್ಮಿಕರ ಮುಕಂಡರಾದನಂತರ ಅನೇಕ ದಿವಸಗಳವರೆಗೆ ಬರದೆ ಇರುವಂತಹ ಬೋನಸ್ಸ್ ಇವರು ಬಂದನಂತರ ಕಂಪನಿಗೆ ಒತ್ತಾಯ ತಂದು ಬೇಗ ಕೊಡಿಸಿದರು. ಕೆಲವು ಕಾರ್ಮಿಕರುಗಳ ವೈಯಕ್ತಿಕ ಸಮಸ್ಯೆಗಳನ್ನು ಪರಿಹರಿಸಿದ್ದಾರೆ. ಇನ್ನೂ ಹತ್ತ ಹಲವಾರು ಕೆಲಸಗಳು ಮಾಡಿದ್ದಾರೆ. ಎಂದು ಹೇಳಿಕೊಂಡಿದ್ದಾರೆ.

ಗರ್ಭಿಣಿ ಸ್ತ್ರೀಯರಿಗೆ ಕುಟುಂಬ ಯೋಜನೆ ಕುರಿತು ಮಾಹಿತಿ ತಿಳಿಸಿದನಂತರ I.F.A Tab ತೆಗೆದುಕೊಳ್ಳುವಂತೆ ಒತ್ತಾಯ ತರುತ್ತೇವೆ ಹಾಗೂ ಹೆರಿಗೆಯನ್ನು ಆಸ್ಪತ್ರೆಯಲ್ಲಿ ಮಾಡಿಸುವುದಾಗಿ ಮಾಹಿತಿ ನೀಡುತ್ತೇವೆ. ಈಮಟ್ಟದಲ್ಲಿ ಮಹಿಳೆಯರು. ತುಂಬಾ ಎಚ್ಚೆತ್ತುಕೊಳ್ಳುತ್ತೀರುವುದಾಗಿ ಆರೋಗ್ಯ ಕೇಂದ್ರ ತಿಳಿಸಿದೆ.

ಕಾರ್ಮಿಕರುಗಳಿಗೆ ಅಪಘಾತ ಸಂಭವಿಸಿ ತುಂಬಾ ಪೆಟ್ಟಾಗಿದ್ದರೆ ಅವರನ್ನು ತುರ್ತುಚಿಕಿತ್ಸೆ ನೀಡಿ ಜಿಲ್ಲಾ ಆಸ್ಪತ್ರೆಗೆ ಹೋಗುವಂತ ಹೇಳಿ, ಕಂಪನಿಯವರಿಗೆ ಅತಿ ಬೇಗ ವಾಹನ ವ್ಯವಸ್ಥೆ ಮಾಡಿಸಲಾಗುತ್ತದೆ.

೧೭.೦೪.೨೦೦೫ ರಂದು Mallapa saft ನಲ್ಲಿ ಕಾರ್ಮಿಕರನ್ನು ಸಂದರ್ಶಿಸಿದಾಗ ಒಬ್ಬ ಕಾರ್ಮಿಕನ ಹೇಳಿಕೆ ಈ ರೀತಿಯಾಗಿತ್ತು ನನ್ನ ಸಿ.ಎಲ್. ಮತ್ತು ಪಿ.ಎಲ್. ರಜೆಗಳು ಮುಗಿದಿವೆ. ಈಗ ರಜೆ ನೀಡುತಿಲ್ಲ ಒಂದು ವೇಳೆ ರಜೆ ನೀಡಿದರು ವೇತನದಲ್ಲಿ ಕಡಿತಗೊಳಿಸುತ್ತಾರೆ. ನನ್ನಲ್ಲಿ ವೇತನ ಮತ್ತು ಬೋನಸ್ಸ್ ಹಣ ಯಾವುದು ಉಳಿದಿಲ್ಲ. ಈಗ ನನ್ನ ತಾಯಿಯನ್ನು ಆಸ್ಪತ್ರೆಗೆ ಸೇರಿಸಲು ಹಣ ಬೇಕು. ಎಂದು ತನ್ನ ವೈಯಕ್ತಿಕ ಸಮಸ್ಯೆಯನ್ನು ಹೇಳಿಕೊಂಡಿರುತ್ತಾನೆ.

ವಸತಿ ಸೌಲಭ್ಯಗಳು ಎಲ್ಲಾ ಕಾರ್ಮಿಕರಿಗೆ ನೀಡಿದ್ದಾರೆ ಆದರೆ ಅವು ಶ್ರೇಣಿಕೃತ ವ್ಯವಸ್ಥೆಯಲ್ಲಿವೆ. ವಿದ್ಯುತ್, ಕುಡಿಯುವ ನೀರು, ರೇಷನ್ ಕಾರ್ಡ್ ವ್ಯವಸ್ಥೆ ಸಾಮಾನ್ಯವಾಗಿ ಎಲ್ಲಾ ಕಾರ್ಮಿಕರಿಗೆ ಮಾಡಿಕೊಟ್ಟಿದ್ದಾರೆ. ಒಂದು ವೇಳೆ ವಸತಿಯಲ್ಲಿ ಯಾವುದೇ ಸಮಸ್ಯೆಯುಂಟಾದರೆ ಬೇರೆ ಮನೆಯನ್ನು ನೀಡುತ್ತಾರೆ. ಆದರೆ ಸ್ಥಳೀಯ ಕಾರ್ಮಿಕರಿಗೆ ವಸತಿ ಸೌಲಭ್ಯ ಒದಗಿಸಿಲ್ಲ.

ಮೊದಲ ದರ್ಜೆಯ ಕಾರ್ಮಿಕರುಗಳು ನೀಡಿದಂತಹ ಮಾಹಿತಿಗಳು

ಪ್ರಥಮ ದರ್ಜೆ ಕಾರ್ಮಿಕರು ಕಂಪನಿಯ ಪರವಾಗಿಯೇ ಮಾಹಿತಿಗಳನ್ನು ನೀಡಿರುವುದಾಗಿ ತಿಳಿದು ಬರುತ್ತಿದೆ. ಯಾವುದೇ ವಿಷಯ ಕುರಿತು ಕೇಳಿದಂತಹ ಪ್ರಶ್ನೆಗಳಿಗೆ ಸರಿ ಎಂಬಂತೆ ಮಾಹಿತಿ ನೀಡಿದ್ದಾರೆ. ಆರ್ಥಿಕ ಸ್ಥಿತಿಗತಿಗಳನ್ನು ಕುರಿತು ಕೇಳಿದ ಪ್ರಶ್ನೆಗೆ ಹಣಕಾಸಿನ ವ್ಯವಸ್ಥೆಯಲ್ಲಿ ಕಂಪನಿಯು ಇನ್ನೂ ವಿಸ್ತರಿಸಬೇಕಾಗಿ ತಿಳಿಸಿರುತ್ತಾರೆ. ಅಪಘಾತ ಸಂಭವಿಸಿದಾಗ ಕಂಪನಿಯು ಕಾರ್ಮಿಕರಿಗೆ ಒಳ್ಳೆಯ ಸೌಲಭ್ಯಗಳನ್ನು ಮಾಡಿಕೊಟ್ಟಿರುವುದಾಗಿ ತಿಳಿಸಿರುತ್ತಾರೆ. ಅಪಘಾತ ಸಂಭವಿಸಿ ಮರಣ ಹೊಂದಿದರೆ ಅಂತಹ ಕಾರ್ಮಿಕರ ಕುಟುಂಬಕ್ಕೆ ೧ ಲಕ್ಷ ರೂಪಾಯಿ ಪರಿಹಾರ ಪತ್ನಿಗೆ ಪೆನ್‌ಶನ್ ಮಕ್ಕಳಿಗೆ ನೌಕರಿ ನೀಡುವುದಾಗಿ ಹೇಳಿಕೊಂಡಿದ್ದಾರೆ. ಈ ವರ್ಗದ ನೌಕರರೂ ಕೂಡಾ ಮಹಿಳಾ ಕಾರ್ಮಿಕರ ಸಂಘಗಳಿಗೆ ಪಾಲ್ಗೊಳ್ಳುವುದಾಗಿ ಕೇಳಿದಾಗ ನಾಚಿಕೆಯಿಂದ, ಭಯದಿಂದ ಸಂಘಗಳಲ್ಲಿ ಹೆಚ್ಚಾಗಿ ಪಾಲ್ಗೊಳ್ಳುವುದಿಲ್ಲವಾಗಿ ತಿಳಿಸಿರುವರು ಸಂಘಗಳಲ್ಲಿ ಅತಿ ಹೆಚ್ಚು ಕುಡುಕರಿರುವುದರಿಂದ ಯಾವುದೇ ಅವಾಚ್ಯೆ ಶಬ್ದಗಳಿಂದ ನಿಂದಿಸುವರೆಂಬ ಭಯ ಕಾಡುತ್ತೀರುವುದಾಗಿ ತಿಳಿಸಿರುವರು.

ಈ ವರ್ಗದ ಮಹಿಳಾ ಕಾರ್ಮಿಕರು ನೆರಳಿನಲ್ಲಿ ಕುಳಿತು ಕೆಲಸ ಮಾಡುವುದರಿಂದ ಕಛೇರಿಯಲ್ಲಿ ಯಾವುದೇ ಆಡಳಿತಾಂಗಕ್ಕೆ ಸಂಬಂಧಿಸಿದಂತೆ ಸೂಕ್ಷ್ಮ ಸಮಸ್ಯೆಗಳನ್ನು ಬಿಟ್ಟರೆ ಮತ್ಯಾವುದೇ ರೀತಿಯ ತೊಂದರೆಗಳಿಲ್ಲವೆಂದು ತಿಳಿಸಿರುವರು. ಮಹಿಳಾ ಕಾರ್ಮಿಕರು ಮನೋರಂಜನೆಗಾಗಿ ಟಿ.ವಿ. ಸಂಗೀತ, ಮನೆಯಲ್ಲಿ ಮಕ್ಕಳಜೊತೆ ಕಾಲ ಕಳೆಯುದಾಗಿ ತಿಳಿರುವರು.

ಬೀದಿ ನಾಟಕ, ಸಮೂಹ ಸಂರಕ್ಷೆ, ನಮ್ಮ ಬದುಕು ತಂಡದವರೊಂದಿಗೆ ಅನೇಕ ಸಾಮಾಜಿಕ ನಾಟಕಗಳನ್ನು ಕಂಪನಿಯು ಏರ್ಪಡಿಸುವುದಾಗಿ ತಿಳಿಸಿರುವರು.

ದ್ವಿತಿಯ ಮತ್ತು ತೃತೀಯ ದರ್ಜೆ ಕಾರ್ಮಿಕರುಗಳು ನೀಡಿದಂತಹ ಮಾಹಿತಿಗಳು

ಈ ವರ್ಗದ ಕಾರ್ಮಿಕರುಗಳು ಯಾವುದೇ ಹೇಳಿಕೆಯನ್ನು ನಿಖರವಾಗಿ ಹೇಳಲು ಮುಂದಾಗುತ್ತಿಲ್ಲ. ಏಕೆಂದರೆ ಓರಿಯ ಅಧಿಕಾರಿಗಳು ಭಯದಿಂದಾಗಿ ಕಂಪನಿಯಲ್ಲಿ ಆಗುವ ಸಮಸ್ಯೆಗಳನ್ನು ಹೇಳಿಕೊಳ್ಳುತ್ತಿಲ್ಲ. ಮೂಲಭೂತ ಸೌಕರ್ಯಗಳನ್ನು ಕಂಪನಿಯು ಉತ್ತಮವಾದ ರೀತಿಯಿಂದ ಕಲ್ಪಿಸಿಕೊಟ್ಟಿದೆ. ಶಿಕ್ಷಣಕ್ಕಾಗಿ ಮದುವೆ ಸಮಾರಂಭಗಳಿಗೆ ಕಂಪನಿಯ ಸಾಲ ಸೌಲಭ್ಯವನ್ನು ನೀಡುತ್ತಿದೆ. ವೈಧ್ಯಕೀಯ ಸೌಲಭ್ಯಗಳು ಮಾತ್ರ ಹಟ್ಟಿ ಕಂಪನಿಯಲ್ಲಿ ತೃಪ್ತಿಕರವಾಗಿಲ್ಲ. ಅದನ್ನು ವಿಸ್ತರಿಸಬೇಕೆಂದು ಕಂಪನಿಯವರಿಗೆ ತಿಳಿಸಿರುವುದಾಗಿ ಹೇಳಿರುವರು.

ಈ ವರ್ಗದ ಮಹಿಳಾ ಕಾರ್ಮಿಕರು ಸಾಮಾಜಿಕ ಮತ್ತು ಆರ್ಥಿಕ ಸ್ಥಿತಿಗತಿಗಳನ್ನು ಕುರಿತು ಕೇಳಿದ ಪ್ರಶ್ನೆಗಳಿಗೆ ಅವರು ಹೇಳುವ ಉತ್ತರಗಳು, ಸಾಮಾಜಿಕ ದೃಷ್ಟಿಯಿಂದ ನಮ್ಮ ಸ್ಥಿತಿಗತಿಗಳು ತುಂಬಾ ಸುಧಾರಿಸಿವೆ. ಆದರೆ ಪತಿ ಸತ್ತನಂತರ ಅನುಕಂಪದ ಆಧಾರದ ಮೇಲೆ ಕೆಲಸಕ್ಕೆ ಆಯ್ಕೆಯಾಗಿದ್ದೇವೆ

ಆದರೆ ಯಾವುದೇ ರೀತಿಯ ಹರಿಯರ್ಸ್ ದುಡ್ಡು ಇನ್ನು ನೀಡಿಲ್ಲ. ಕೇಳಿದರೆ ಯಾವುದಾದರೊಂದು ಕಾರಣಗಳನ್ನು ಹೇಳುತ್ತಾರೆ. ಕುಟುಂಬದ ನಿರ್ವಹಣೆಗೆ ತುಂಬಾ ಸಮಸ್ಯೆಯಾಗುತ್ತಿದೆ ಎಂದು ಹೇಳಿಕೊಂಡಿದ್ದಾರೆ. ಕುಟುಂಬದ ಜವಾಬ್ದಾರಿ ಸಂಪೂರ್ಣವಾಗಿ ನಮ್ಮ ಮೇಲೆಯೇ ಇರುವುದಾಗಿಯೂ ಹೇಳಿಕೊಂಡಿರುತ್ತಾರೆ. ಕಂಪನಿಯು ದ್ವಿತೀಯ ಮತ್ತು ತೃತೀಯ ವರ್ಗದ ನೌಕರರಿಗೆ ಸೌಲಭ್ಯಗಳನ್ನು ಮತ್ತಷ್ಟು ವಿಸ್ತರಿಸಲು ಕಂಪನಿಯು ಮುಂದಾಗಬೇಕು. ಸಾಮಾಜಿಕ, ಶೈಕ್ಷಣಿಕವಾಗಿ ಅಭಿವೃದ್ಧಿ ಹೊಂದುತ್ತಿದ್ದೇವೆ. ಆರ್ಥಿಕವಾಗಿ ಇನ್ನೂ ಹಿಂದೇ ಉಳಿದಿರವುದಾಗಿ ತಿಳಿಸಿರುವರು. ಈ ವರ್ಗದ ಕಾರ್ಮಿಕರು ಕೆಲಸಕ್ಕೆ ಮುನ್ನ ತರಬೇತಿ ನೀಡಿರುವುದಾಗಿ ತಿಳಿಸುತ್ತಾರೆ. ೪ ವರ್ಗದ ಕಾರ್ಮಿಕರು ಹೆಚ್ಚಾಗಿ ಔದ್ಯೋಗಿಕ ಖಾಯಿಲೆಗಳಿಗೆ ಗುರಿಯಾಗುವ ಸಂಭವವೇ ಹೆಚ್ಚು, ಏಕೆಂದರೆ ಇವರು ಮಾಡುವಂತಹ ಕೆಲಸಗಳಲ್ಲಿ ಅತಿ ಹೆಚ್ಚು ದೂಳಿನಿಂದ ಕೂಡಿದ್ದು ಆರೋಗ್ಯದ ಮೇಲೆ ಕೆಟ್ಟ ಪರಿಣಾಮ ಬೀರುವಂತಹ ಸಾಧ್ಯತೆಗಳೇ ಅತಿ ಹೆಚ್ಚಾಗಿರುತ್ತದೆ. ಏಡ್ಸ್ ಜಾಗೃತಿ ಶಿಬಿರಗಳಲ್ಲಿ ಪಾಲ್ಗೊಂಡಿಲ್ಲವೆಂಬಂತ ಉತ್ತರಗಳೇ ಅತಿ ಹೆಚ್ಚಿನ ಸಂಖ್ಯೆಯಲ್ಲಿ ತಿಳಿಸಿರುತ್ತಾರೆ.

ಈ ವರ್ಗದ ಮಹಿಳಾ ಕಾರ್ಮಿಕರನ್ನು ಕುರಿತು ಪ್ರಶ್ನೆ ಮಾಡಿದಾಗ ಅವರಿಗೆ ಯಾವುದೇ ಸಂಘಗಳಿಗೆ ಭಾಗವಹಿಸುವುದಕ್ಕೆ ಆಸಕ್ತಿ ಇಲ್ಲದಿರುವುದು ತಿಳಿದು ಬರುತ್ತದೆ. ಚಂದಾ ನೀಡುತ್ತೇವೆ. ನಮ್ಮ ಪರವಾಗಿ ಪುರುಷರುಗಳ ಹೋರಾಟ ಮಾಡುತ್ತಾರೆ. ರಾಜಕೀಯದ ಬಗ್ಗೆ ನಮಗೆ ಗೋತಾಗುವುದಿಲ್ಲ, ಕಂಪನಿಯ ಜೊತೆ ಯಾವ ಬೇಡಿಕೆಗಳಿಗೆ ನಿಮ್ಮ ಸಂಘ ಹೋರಾಟ ಮಾಡುತ್ತಿದೆ ಎಂದು ಕೇಳಿದರೆ ಅದ್ಯಾವುದು ನಮಗೆ ಗೋತ್ತಿಲ್ಲ ಎಂಬ ಮಾಹಿತಿಯೇ ಅತಿ ಹೆಚ್ಚು ಹೇಳಿಕೊಂಡಿದ್ದಾರೆ. ಮಹಿಳಾ ಕಾರ್ಮಿಕರುಗಳಿಗೆ ಪ್ರತ್ಯೇಕ ಸಂಘ ನಿರ್ಮಿಸಿಕೊಳ್ಳಲು ಕಂಪನಿಯು ಪ್ರೋತ್ಸಾಹಿಸಬೇಕು. ಅಂದಾಗ ವೈಯಕ್ತಿಕ ಸಮಸ್ಯೆಗಳನ್ನು ಪರಿಹರಿಸಿಕೊಳ್ಳಲು ಸಾಧ್ಯವಾಗುತ್ತದೆ.

ನಾಲ್ಕನೇ ದರ್ಜೆಯ ಕಾರ್ಮಿಕರುಗಳ ಹೇಳಿಕೆಗಳು

ಹಟ್ಟಿ ಚಿನ್ನದ ಗಣಿಯು ಕಾರ್ಮಿಕರುಗಳಿಗೆ ಎಲ್ಲಾ ರೀತಿಯ ಅನುಕೂಲಗಳು, ಸೌಲಭ್ಯಗಳನ್ನು ಒದಗಿಸಿಕೊಟ್ಟಿದೆ. ಆದರೂ ಕೂಡಾ ಅನೇಕ ಸಮಸ್ಯೆಗಳಿಂದ ಕಾರ್ಮಿಕರು ಮುಕ್ತವಾಗಿಲ್ಲ ದರ್ಜೆಯ ಕಾರ್ಮಿಕರ ಸ್ಥಿತಿಗತಿಗಳನ್ನು ಕುರಿತು ಪ್ರಶ್ನೆ ಮಾಡಿದಾಗ ಅನೇಕ ಸಮಸ್ಯೆಗಳ ಸುಳಿಯಲ್ಲಿ ಸುತ್ತುತ್ತಿರುವುದು ಕ್ಷೇತ್ರಕಾರ್ಯದ ಸಂದರ್ಭದಲ್ಲಿ ಮನಗಾಣಲಾಗಿದೆ. ೪ ನೇ ದರ್ಜೆ ಕಾರ್ಮಿಕರುಗಳಿಗೆ ಗೌರವ ಕೊಡದಂತ ಮಾತನಾಡಿಸುತ್ತಾರೆ. ನಮ್ಮನ್ನು ಕೆಲವು ಬಾರಿ ಮನಸ್ಸಿಗೆ ನೋವು ಆಗುವಂತೆ ನಿಂದಿಸುತ್ತಾರೆ ಎಂದು ಈ ವರ್ಗದ ಕಾರ್ಮಿಕರಲ್ಲಿ ಕೆಲವರು ಮಾತ್ರ ಹೇಳಿಕೊಂಡಿದ್ದಾರೆ. ಬೋನಸ್ಸ್ ಸರಿಯಾದಂತಹ ಸಮಯಕ್ಕೆ ನೀಡುತ್ತಿಲ್ಲ, ಆಡಳಿತದ ಯಾವುದಾದರೊಂದು ಸಮಸ್ಯೆಯಿಂದ ಪ್ರಿತಿಸಲೂ ತಡವಾಗಿ ಬರುತ್ತದೆ ಎನ್ನುತ್ತಾರೆ.

ಮಾಲೀಕರ ಮತ್ತು ಕಾರ್ಮಿಕರ ಸಂಬಂಧಗಳನ್ನು ಕುರಿತು ಕೇಳಿದ ಪ್ರಶ್ನೆಗೆ ಪರವಾಗಿಲ್ಲ ಎಂದು ಉತ್ತರಿಸುತ್ತಾರೆ. ಕೆಲವು ಸಂದರ್ಭದಲ್ಲಿ ಉತ್ತಮವಾಗಿದೆ. ಮತ್ತೆ ಕೆಲವು ಸಂದರ್ಭಗಳಲ್ಲಿ ಉತ್ತಮವಾಗಿಲ್ಲ.

ಕಂಪನಿಯಲ್ಲಿ ದುಡಿಯುವುದರಿಂದಾಗಿ ನಿಮ್ಮ ಜೀವನ ಕ್ರಮವು ಸಾಮಾಜಿಕ, ಶೈಕ್ಷಣಿಕ, ಮತ್ತು ಆರ್ಥಿಕ ದೃಷ್ಠಿಯಿಂದ ಸುಧಾರಿಸಿದೆಯೇ ಎಂದು ಕೇಳಿದರೆ ಅವರು ನೀಡುವ ಮಾಹಿತಿ ಜೀವನ ಕ್ರಮ ಸುಧಾರಿಸಿದೆ, ಆದರೆ ನೀವು ಕೇಳಿದಂತೆ ಇಲ್ಲ ಈ ವರ್ಗ ಕಾರ್ಮಿಕರು ಇಂಡೋಫಿಲ್ ಸಮಸ್ಯೆಯನ್ನು ಕುರಿತು ಕೇಳಿದ ಪ್ರಶ್ನೆಗೆ ತೀವ್ರವಾದ ಉತ್ತರ ನೀಡುತ್ತಾರೆ. ಇಂಡೋಫಿಲ್ ಕಂಪನಿಗೆ ಆಡಳಿತ ಕೊಟ್ಟರೆ. ತೀವ್ರವಾಗಿ ಹೋರಾಟ ಮಾಡುತ್ತೇವೆ. ಈ ಕಂಪನಿಗೆ ಆಡಳಿತ ವಹಿಸಿಕೊಡುವುದರಿಂದ ನಾವೆಲ್ಲರು ನಿರುದ್ಯೋಗಿಗಳಾಗುತ್ತೇವೆ ಆದೆಷ್ಟು ಭೂತದಂತೆ ಕಾಡುವ ಈ ವಿದೇಶಿ ಕಂಪನೆ ಸಮಸ್ಯೆಯನ್ನು ಎದುರಿಸಲು ಶಕ್ತಿ ಮೀರಿ ಹೋರಾಟ ಮಾಡುವುದಾಗಿ ಹೇಳಿಕೊಂಡಿದ್ದಾರೆ.

ಕನ್ನಡ ವಿಶ್ವವಿದ್ಯಾಲಯ, ಹಂಪಿ

ವಿದ್ಯಾರಣ್ಯ- ೫೮೩೨೭೬, ತಾಲೂಕು: ಹೊಸಪೇಟೆ, ಜಿಲ್ಲೆ: ಬಳ್ಳಾರಿ.

ಹಟ್ಟಿಚಿನ್ನದ ಗಣಿ: ಕಾರ್ಮಿಕರ ಕೆಳಸ್ತರದ ಅಧ್ಯಯನ

(ಸಾಮಾಜಿಕ, ಆರ್ಥಿಕ ಹಾಗೂ ಪ್ರಚಲಿತ ನೆಲೆಯಲ್ಲಿ)

ಎಂ.ಫಿಲ್. ಅಧ್ಯಯನಕ್ಕಾಗಿ ಮಾಡಿಕೊಳ್ಳಲಾದ ಪ್ರಶ್ನಾವಳಿಗಳು.

ದಿನಾಂಕ:............

೧. ಹೆಸರು : ಮಲ್ಲಿಕಾರ್ಜುನ ರಡ್ಡಿ

೨. ವಯಸ್ಸು : ೪೨

೩. ಕೆಲಸ : ಕಾರ್ಮಿಕ ಶಿಕ್ಷಕ

೪. ವೇತನ : ೭೫೦೦

೫. ಜಾತಿ : ಲಿಂಗಾಯಿತ

೬. ವೈವಾಹಿಕ ಸಂಬಂಧ : ಚೆನ್ನಾಗಿದೆ.

೭. ಮಕ್ಕಳ ಸಂಖ್ಯೆ : ಮೂರು ಜನ

೮. ಕುಟುಂಬ ಯೋಜನೆ : ಕುಟುಂಬ ಯೋಜನೆ ಇಲ್ಲ

೯. ಮಕ್ಕಳ ಶಿಕ್ಷಣ : ಪಿ.ಯು.ಸಿ. ವಿಜ್ಞಾನ

೧೦. ಮಾಲಿಕ ಮತ್ತು ಕಾರ್ಮಿಕ ಸಂಬಂಧ : ಚೆನ್ನಾಗಿದೆ.

೧೧. ಬೋನಸ್ ಸರಿಯಾದ ಸಮಯಕ್ಕೆ ತಲುಪತ್ತದೆಯೇ : ಕಾರಣಾಂತರದಿಂದ ವಿಳಂಬವಾಗುವುದು

೧೨. ಸಂಘಸಂಸ್ಥೆಗಳ ಪಾತ್ರ : ಕಾರ್ಮಿಕ ಸಂಘದ ಕಾರ್ಯದರ್ಶಿಯಾಗಿ ಕಾರ್ಯನಿರ್ವಹಣೆ

೧೩. ಮುಷ್ಕರದಲ್ಲಿ ಪಾಲ್ಗೊಂಡ ಬಗ್ಗೆ : ಹಲವು ಬಾರಿ, ಕೆಲವು ಪರಿಣಾಮಗಳು ಉಂಟು.

೧೪. ಆರೋಗ್ಯದ ಬಗ್ಗೆ : ಒಳ್ಳೆಯ ವ್ಯವಸ್ಥೆ ಮಾಡಿಕೊಟ್ಟಿರುವರು

೧೫. ಏಡ್ಸ್ ಜಾಗೃತಿ ಶಿಬಿರದಲ್ಲಿ ಪಾಲ್ಗೊಂಡು ಪ್ರಯೋಜನೆ :

ಹಳ್ಳಿಗಳಲ್ಲಿ ಪ್ರಚಾರ ಮಾಡಲಾಯಿತು. ಏಡ್ಸ್ ಕುರಿತಾದ ಬೀದಿ ನಾಟಕ, ಗೋಡೆಬರಹ, ಹಾಗೂ ಪಡೆದಿರುವಿರಾ - ಯಾವ ರೀತಿ ಲಾವಣಿ ಹಾಡುಗಳಿಂದ (ಸಮೂಹ ಸಂರಕ್ಷೆ ನಮ್ಮ ಬದುಕು ತಂಡದೊಂದಿಗೆ)

೧೬. ಕೆಲಸಕ್ಕೆ ಸರಿಯಾದ ತರಬೇತಿ ನೀಡಲಾಗಿದೆಯೇ : ನೀಡಲಾಗಿದೆ.

೧೭. ನೀವು ಖಾಯಂ ನೌಕರರೇ, ಕ್ರೋಢೀಕೃತ ನೌಕರರೇ ಅಥವಾ ದಿನಗೂಲಿ ನೌಕರರೇ : ಖಾಯಂ ನೌಕರರು

೧೮. ಕಂಪನಿಯಿಂದಾಗಿ ನಿಮ್ಮ ಜೀವನ ಕ್ರಮವು ಸುಧಾರಿಸಿದೆಯೇ : ಎಲ್ಲವೂ ಸೂಸೂತ್ರವಾಗಿ ನಡೆದಿದೆ.

ಶೈಕ್ಷಣಿಕ ಸಾಮಾಜಿಕ ಆರ್ಥಿಕ ದೃಷ್ಟಿಯಿಂದ

೧೯. ಕಾರ್ಮಿಕ ಸಂಘದೊಡನೆ ನಿಮ್ಮ ಸಂಬಂಧ ಉತ್ತಮವಾಗಿದೆಯೇ : ಹೌದು

೨೦. ಕಾರ್ಮಿಕ ಸಂಘದಿಂದ ಸಾಮಾಜಿಕ ಪ್ರಜ್ಞೆಯನ್ನು ಮೂಡಿಸುವ

ಕೆಲಸ ಮಾಡಲಾಗಿದೆಯೇ ಕ್ರೀಡೆ, ಸಾಂಸ್ಕೃತಿಕ ಇತರ ದೃಷ್ಟಿಯಿಂದ : ಆರೋಗ್ಯ ಮಾಹಿತಿ ಕಾರ್ಯಕ್ರಮ, ಏಡ್ಸ್ ಕಾರ್ಯಕ್ರಮ, ನಾಟಕ, ಸಾಂಸ್ಕೃತಿಕ ಕಲಾತಂಡಗಳ ಪ್ರದರ್ಶನ ಏರ್ಪಡಿಸಲಾಗಿತ್ತು.

೨೧. ಕಾರ್ಮಿಕ ಸಂಘದ ಕೆಲಸ ಕಾರ್ಯಗಳಲ್ಲಿ ಮಹಿಳೆಯರು ಸಂಪೂರ್ಣವಾಗಿ ತೊಡಗಿರುತ್ತಾರೆಯೇ :

*ಹೌದಾಗಿದ್ದರೆ - ಹೇಗೆ? ಭಯದಿಂದ ನಾಚಿಕೆಯಿಂದ, ಸಂಘಗಳಲ್ಲಿ ಹೆಚ್ಚಾಗಿ ಭಾಗವಹಿಸುವುದಿಲ್ಲ.

*ಇಲ್ಲವಾದರೆ - ಏಕೆ?

೨೨. ಕಂಪನಿಯ ಜೊತೆ ಹೆಚ್ಚಾಗಿ ಯಾವ ಯಾವ ಬೇಡಿಕೆಗಾಗಿ : ಮೂಲಭೂತ ಸೌಲಭ್ಯ

ನಿಮ್ಮ ಚಳುವಳಿ ನಡೆಯುತ್ತದೆ.

೨೩. ಕಾರ್ಮಿಕರ ಇಂದಿನ ಸ್ಥಿತಿ ಉತ್ತಮವಾಗಿದೆಯೇ? :

*ಉತ್ತಮವಾಗಿದ್ದರೆ - ಹೇಗೆ? ಉತ್ತಮವಾಗಿದೆ

*ಇಲ್ಲವಾದರೆ - ಏಕೆ? ಒಳ್ಳೆಯ ಉತ್ಪಾದನೆ, ಚಿನ್ನಕ್ಕೆ ತಕ್ಕ ಬೆಲೆಯಿರುವುದರಿಂದ ಸರಿಯಾದ ಸಮಯಕ್ಕೆ ಸಂಬಳ ಬೋನಸ್ ಇತ್ಯಾದಿ ದೊರೆಯುತ್ತದೆ.

೨೪. ಅಪಘಾತ ಹಾಗೂ ಕೆಲಸದ ವೇಳೆ ಮರಣ ಹೊಂದಿದರೆ ಅಂತಹ ಕಾರ್ಮಿಕರಿಗೆ ಉತ್ತಮ ಸೌಲಭ್ಯವಿದೆಯೇ

*ಇದ್ದರೆ - ಹೇಗೆ? ಒಂದು ಲಕ್ಷಕ್ಕೂ ಪರಿಹಾರ, ಮಕ್ಕಳಿಗೆ ನೌಕರಿ, ಪತ್ನಿಗೆ ಪೆನ್ಶನ್ ಇತ್ಯಾದಿ ಸೌಲಭ್ಯಗಳು ದೊರೆಯುತ್ತವೆ.

*ಇಲ್ಲ - ಏಕೆ?

೨೫. ರಾಜಕೀಯದೊಂದಿಗೆ ನಿಮ್ಮ ಕಾರ್ಮಿಕ ಸಂಘ ಗುರುತಿಸಿಕೊಂಡಿದೆಯೇ

*ಏಕೆ? ಸಂಸ್ಥೆ ಸರ್ಕಾರದ ಅಧೀನದಲ್ಲಿರುವುದರಿಂದ ರಾಜಕೀಯ ಅನಿವಾರ್ಯ

*ಹೇಗೆ?

೨೬. ಸ್ಥಳೀಯವಾಗಿ ಮತ ಚಲಾಯಿಸುವ ಹಕ್ಕು ಇದೆಯೇ? : ಇದೆ.

೨೭. ವಾಚನಾಲಯ ಮತ್ತು ಗ್ರಂಥಾಲಯದ ಸೌಲಭ್ಯ ಇದೆಯೇ? : ಇದೆ.

೨೮. ಮನೋರಂಜನೆಗಾಗಿ ಯಾವ ಕ್ಷೇತ್ರ ಆಯ್ಕೆ ಮಾಡಿಕೊಂಡಿದ್ದೀರಿ. : ನಾಟಕ ಕ್ಷೇತ್ರ

೨೯. ಸ್ತ್ರೀ ಕಾರ್ಮಿಕರಿಗೆ ವಿಶ್ರಾಂತಿ ಕೊಠಡಿ ಶೌಚಾಲಯ ವ್ಯವಸ್ಥೆ : ಇಲ್ಲ

ಮಾಡಿಕೊಡಲಾಗಿದೆಯೇ?

೩೦. ರಾಷ್ಟ್ರೀಯ ಹಬ್ಬಗಳ ಆಚರಣೆ : ಅಂಬೇಡ್ಕರ್ ಜಯಂತಿ, ಬಸವ ಜಯಂತಿ, ಗಾಂಧೀ ಜಯಂತಿ, ಮೇಡೆ, ಮಹಿಳಾ ದಿನಾಚಾರಣೆ ಆಚರಿಸುತ್ತಿದ್ದೇವೆ.

೩೧. ಇಂಡೋಫಿಲ್ ಸಮಸ್ಯೆ : ಇದೆ

೩೨. ವ್ಯಕ್ತಿಯ ವ್ಯಕ್ತಿತ್ವ ನಿರ್ಮಾಣಕ್ಕೆ ಕಂಪನಿಯು ಸಂಪೂರ್ಣ ಹೊಣೆ ಹೊತ್ತಿದೆಯೇ : ಇಲ್ಲ

೩೩. ರಜೆಯನ್ನು ನೀಡುವಾಗ ಮಾಲಿಕರ ಪ್ರತಿಕ್ರಿಯೆ ಯಾವ ರೀತಿಯಾಗಿರುತ್ತದೆ : ನಮ್ಮ ಕರ್ತವ್ಯ, ಸಂಸ್ಥೆ, ಉಳಿದರೆ ನಾನು ಉಳಿಯುತ್ತೇನೆ. ಅಂತಹ ಸಂದರ್ಭದಲ್ಲಿ ಅಧಿಕಾರಿಗಳ ಮಾತಿನಂತೆ ನಡೆಯಬೇಕಾಗುತ್ತದೆ. ಅದಕ್ಕೆ ಹೊಂದಿಕೊಂಡಂತೆ ನಮ್ಮ ವರ್ತನೆ ಇರಲೇಬೇಕು.

ಸಂಶೋಧಕರು

ಸಂದರ್ಶನಕಾರರು

ವಿಜಯಲಕ್ಷ್ಮೀ

ಕನ್ನಡ ವಿಶ್ವವಿದ್ಯಾಲಯ, ಹಂಪಿ

ವಿದ್ಯಾರಣ್ಯ- ೫೮೩೨೭೬, ತಾಲೂಕು: ಹೊಸಪೇಟೆ, ಜಿಲ್ಲೆ: ಬಳ್ಳಾರಿ.

ಹಟ್ಟಿಚಿನ್ನದ ಗಣಿ: ಕಾರ್ಮಿಕರ ಕೆಳಸ್ತರದ ಅಧ್ಯಯನ

(ಸಾಮಾಜಿಕ, ಆರ್ಥಿಕ ಹಾಗೂ ಪ್ರಚಲಿತ ನೆಲೆಯಲ್ಲಿ)

ಎಂ.ಫಿಲ್. ಅಧ್ಯಯನಕ್ಕಾಗಿ ಮಾಡಿಕೊಳ್ಳಲಾದ ಪ್ರಶ್ನಾವಳಿಗಳು.

ದಿನಾಂಕ:............

೧. ಹೆಸರು : ಕೆಂಚಪ್ಪ

೨. ವಯಸ್ಸು : ೪೦

೩. ಕೆಲಸ : ತೋಟಮಾಲಿ

೪. ವೇತನ : ೪೦೦೦

೫. ಜಾತಿ : ನಾಯಕ

೬. ವೈವಾಹಿಕ ಸಂಬಂಧ : ಚೆನ್ನಾಗಿದೆ.

೭. ಮಕ್ಕಳ ಸಂಖ್ಯೆ : ೫

೮. ಕುಟುಂಬ ಯೋಜನೆ : ಮಾಡಿಸಲಾಗಿದೆ

೯. ಮಕ್ಕಳ ಶಿಕ್ಷಣ :

೧೦. ಮಾಲಿಕ ಮತ್ತು ಕಾರ್ಮಿಕ ಸಂಬಂಧ : ಚೆನ್ನಾಗಿದೆ.

೧೧. ಬೋನಸ್ ಸರಿಯಾದ ಸಮಯಕ್ಕೆ ತಲುಪತ್ತದೆಯೇ : ಇಲ್ಲ

೧೨. ಸಂಘಸಂಸ್ಥೆಗಳ ಪಾತ್ರ : ಚೆನ್ನಾಗಿದೆ.

೧೩. ಮುಷ್ಕರದಲ್ಲಿ ಪಾಲ್ಗೊಂಡ ಬಗ್ಗೆ : ಗೊತ್ತಿಲ್ಲ

೧೪. ಆರೋಗ್ಯದ ಬಗ್ಗೆ : ಗೊತ್ತಿಲ್ಲ

೧೫. ಏಡ್ಸ್ ಜಾಗೃತಿ ಶಿಬಿರದಲ್ಲಿ ಪಾಲ್ಗೊಂಡು ಪ್ರಯೋಜನೆ : ಪಡೆದಿದ್ದೇನೆ.
ಹಳ್ಳಿಗಳಲ್ಲಿ ಪ್ರಚಾರ ಮಾಡಲಾಯಿತು.

೧೬. ಕೆಲಸಕ್ಕೆ ಸರಿಯಾದ ತರಬೇತಿ ನೀಡಲಾಗಿದೆಯೇ : ನೀಡಲಾಗಿದೆ.

೧೭. ನೀವು ಖಾಯಂ ನೌಕರರೇ, ಕ್ರೋಢೀಕೃತ ನೌಕರರೇ ಅಥವಾ ದಿನಗೂಲಿ ನೌಕರರೇ : ಖಾಯಂ ನೌಕರ

೧೮. ಕಂಪನಿಯಿಂದಾಗಿ ನಿಮ್ಮ ಜೀವನ ಕ್ರಮವು ಸುಧಾರಿಸಿದೆಯೇ ಶೈಕ್ಷಣಿಕ ಸಾಮಾಜಿಕ ಆರ್ಥಿಕ ದೃಷ್ಟಿಯಿಂದ : ಸರಿಯಾಗಿದೆ

೧೯. ಕಾರ್ಮಿಕ ಸಂಘದೊಡನೆ ನಿಮ್ಮ ಸಂಬಂಧ ಉತ್ತಮವಾಗಿದೆಯೇ : ಉತ್ತಮವಾಗಿದೆ

೨೦. ಕಾರ್ಮಿಕ ಸಂಘದಿಂದ ಸಾಮಾಜಿಕ ಪ್ರಜ್ಞೆಯನ್ನು ಮೂಡಿಸುವ

ಕೆಲಸ ಮಾಡಲಾಗಿದೆಯೇ ಕ್ರೀಡೆ, ಸಾಂಸ್ಕೃತಿಕ ಇತರ ದೃಷ್ಟಿಯಿಂದ : ಹೌದು

೨೧. ಕಾರ್ಮಿಕ ಸಂಘದ ಕೆಲಸ ಕಾರ್ಯಗಳಲ್ಲಿ ಮಹಿಳೆಯರು ಸಂಪೂರ್ಣವಾಗಿ ತೊಡಗಿರುತ್ತಾರೆಯೇ :

*ಹೌದಾಗಿದ್ದರೆ - ಹೇಗೆ?

*ಇಲ್ಲವಾದರೆ - ಏಕೆ?

೨೨. ಕಂಪನಿಯ ಜೊತೆ ಹೆಚ್ಚಾಗಿ ಯಾವ ಯಾವ ಬೇಡಿಕೆಗಾಗಿ : ಬೋನಸ್ ಮತ್ತು ವಿ.ಆರ್.ಎಸ್.

ನಿಮ್ಮ ಚಳುವಳಿ ನಡೆಯುತ್ತದೆ.

೨೩. ಕಾರ್ಮಿಕರ ಇಂದಿನ ಸ್ಥಿತಿ ಉತ್ತಮವಾಗಿದೆಯೇ? :

*ಉತ್ತಮವಾಗಿದ್ದರೆ - ಹೇಗೆ? ಉತ್ತಮವಾಗಿದೆ

*ಇಲ್ಲವಾದರೆ - ಏಕೆ?

೨೪. ಅಪಘಾತ ಹಾಗೂ ಕೆಲಸದ ವೇಳೆ ಮರಣ ಹೊಂದಿದರೆ ಅಂತಹ ಕಾರ್ಮಿಕರಿಗೆ ಉತ್ತಮ ಸೌಲಭ್ಯವಿದೆಯೇ

*ಇದ್ದರೆ - ಹೇಗೆ?

*ಇಲ್ಲ - ಏಕೆ? ಇದೆ. ಪರಿಹಾರ ಧನ ಮತ್ತು ಮಕ್ಕಳಿಗೆ ನೌಕರಿ

೨೫. ರಾಜಕೀಯದೊಂದಿಗೆ ನಿಮ್ಮ ಕಾರ್ಮಿಕ ಸಂಘ ಗುರುತಿಸಿಕೊಂಡಿದೆಯೇ

*ಏಕೆ?

*ಹೇಗೆ? ಗೊತ್ತಿಲ್ಲ

೨೬. ಸ್ಥಳೀಯವಾಗಿ ಮತ ಚಲಾಯಿಸುವ ಹಕ್ಕು ಇದೆಯೇ? : ಇದೆ

೨೭. ವಾಚನಾಲಯ ಮತ್ತು ಗ್ರಂಥಾಲಯದ ಸೌಲಭ್ಯ ಇದೆಯೇ? : ಇದೆ

೨೮. ಮನೋರಂಜನೆಗಾಗಿ ಯಾವ ಕ್ಷೇತ್ರ ಆಯ್ಕೆ ಮಾಡಿಕೊಂಡಿದ್ದೀರಿ. : ರೇಡಿಯೋ

೨೯. ಸ್ತ್ರೀ ಕಾರ್ಮಿಕರಿಗೆ ವಿಶ್ರಾಂತಿ ಕೊಠಡಿ ಶೌಚಾಲಯ ವ್ಯವಸ್ಥೆ : ಹೌದು

ಮಾಡಿಕೊಡಲಾಗಿದೆಯೇ?

೩೦. ರಾಷ್ಟ್ರೀಯ ಹಬ್ಬಗಳ ಆಚರಣೆ : ಮಾಡುತ್ತಾರೆ.

೩೧. ಇಂಡೋಫಿಲ್ ಸಮಸ್ಯೆ : ಗೊತ್ತಿಲ್ಲ

೩೨. ವ್ಯಕ್ತಿಯ ವ್ಯಕ್ತಿತ್ವ ನಿರ್ಮಾಣಕ್ಕೆ ಕಂಪನಿಯು ಸಂಪೂರ್ಣ ಹೊಣೆ ಹೊತ್ತಿದೆಯೇ : ಗೊತ್ತಿಲ್ಲ

೩೩. ರಜೆಯನ್ನು ನೀಡುವಾಗ ಮಾಲಿಕರ ಪ್ರತಿಕ್ರಿಯೆ ಯಾವ ರೀತಿಯಾಗಿರುತ್ತದೆ : ಕಿರಿ ಕಿರಿಯಾಗುತ್ತದೆ.

ಸಂಶೋಧಕರು

ಸಂದರ್ಶನಕಾರರು

ವಿಜಯಲಕ್ಷ್ಮೀ

ಕನ್ನಡ ವಿಶ್ವವಿದ್ಯಾಲಯ, ಹಂಪಿ

ವಿದ್ಯಾರಣ್ಯ- ೫೮೩೨೭೬, ತಾಲೂಕು: ಹೊಸಪೇಟೆ, ಜಿಲ್ಲೆ: ಬಳ್ಳಾರಿ.

ಹಟ್ಟಿಚಿನ್ನದ ಗಣಿ: ಕಾರ್ಮಿಕರ ಕೆಳಸ್ತರದ ಅಧ್ಯಯನ

(ಸಾಮಾಜಿಕ, ಆರ್ಥಿಕ ಹಾಗೂ ಪ್ರಚಲಿತ ನೆಲೆಯಲ್ಲಿ)

ಎಂ.ಫಿಲ್. ಅಧ್ಯಯನಕ್ಕಾಗಿ ಮಾಡಿಕೊಳ್ಳಲಾದ ಪ್ರಶ್ನಾವಳಿಗಳು.

ದಿನಾಂಕ:............

೧. ಹೆಸರು : ಶ್ರೀಮತಿ ಉಮಾ

೨. ವಯಸ್ಸು : ೪೨

೩. ಕೆಲಸ : ಗುಮಾಸ್ತೆ ದರ್ಜೆ ೨

೪. ವೇತನ : ೫೦೦೦

೫. ಜಾತಿ : ಹಿಂದು ಬ್ರಾಹ್ಮಣ

೬. ವೈವಾಹಿಕ ಸಂಬಂಧ : ವಿವಾಹಿತೆ

೭. ಮಕ್ಕಳ ಸಂಖ್ಯೆ : ಮೂರು ಜನ

೮. ಕುಟುಂಬ ಯೋಜನೆ : ಕುಟುಂಬ ಯೋಜನೆ ಇಲ್ಲ

೯. ಮಕ್ಕಳ ಶಿಕ್ಷಣ : ಅಭ್ಯಾಸದಲ್ಲಿದ್ದಾರೆ.

೧೦. ಮಾಲಿಕ ಮತ್ತು ಕಾರ್ಮಿಕ ಸಂಬಂಧ : ಉತ್ತಮ

೧೧. ಬೋನಸ್ ಸರಿಯಾದ ಸಮಯಕ್ಕೆ ತಲುಪತ್ತದೆಯೇ : ಹೌದು

೧೨. ಸಂಘಸಂಸ್ಥೆಗಳ ಪಾತ್ರ :

೧೩. ಮುಷ್ಕರದಲ್ಲಿ ಪಾಲ್ಗೊಂಡ ಬಗ್ಗೆ :

೧೪. ಆರೋಗ್ಯದ ಬಗ್ಗೆ : ಉತ್ತಮವಾಗಿದೆ.

೧೫. ಏಡ್ಸ್ ಜಾಗೃತಿ ಶಿಬಿರದಲ್ಲಿ ಪಾಲ್ಗೊಂಡು ಪ್ರಯೋಜನೆ :
ಹಳ್ಳಿಗಳಲ್ಲಿ ಪ್ರಚಾರ ಮಾಡಲಾಯಿತು.

೧೬. ಕೆಲಸಕ್ಕೆ ಸರಿಯಾದ ತರಬೇತಿ ನೀಡಲಾಗಿದೆಯೇ : ನೀಡಲಾಗಿದೆ.

೧೭. ನೀವು ಖಾಯಂ ನೌಕರರೇ, ಕ್ರೋಢೀಕೃತ ನೌಕರರೇ ಅಥವಾ ದಿನಗೂಲಿ ನೌಕರರೇ : ಖಾಯಂ ನೌಕರರು

೧೮. ಕಂಪನಿಯಿಂದಾಗಿ ನಿಮ್ಮ ಜೀವನ ಕ್ರಮವು ಸುಧಾರಿಸಿದೆಯೇ : ಶೈಕ್ಷಣಿಕ ಸಾಮಾಜಿಕ ಆರ್ಥಿಕ ದೃಷ್ಟಿಯಿಂದ

ಸುಧಾರಿಸಿದೆ.ಶೈಕ್ಷಣಿಕ, ಸಾಮಾಜಿಕ, ಆರ್ಥಿಕ ದೃಷ್ಟಿಯಿಂದ ನಮ್ಮ ಕುಟುಂಬಕ್ಕೆ ಅನುಕೂಲವಾಗಿದೆ.

೧೯. ಕಾರ್ಮಿಕ ಸಂಘದೊಡನೆ ನಿಮ್ಮ ಸಂಬಂಧ ಉತ್ತಮವಾಗಿದೆಯೇ : ಹೌದು ಉತ್ತಮವಾಗಿದೆ.

೨೦. ಕಾರ್ಮಿಕ ಸಂಘದಿಂದ ಸಾಮಾಜಿಕ ಪ್ರಜ್ಞೆಯನ್ನು ಮೂಡಿಸುವ

ಕೆಲಸ ಮಾಡಲಾಗಿದೆಯೇ ಕ್ರೀಡೆ, ಸಾಂಸ್ಕೃತಿಕ ಇತರ ದೃಷ್ಟಿಯಿಂದ : ಹೌದು

೨೧. ಕಾರ್ಮಿಕ ಸಂಘದ ಕೆಲಸ ಕಾರ್ಯಗಳಲ್ಲಿ ಮಹಿಳೆಯರು ಸಂಪೂರ್ಣವಾಗಿ ತೊಡಗಿರುತ್ತಾರೆಯೇ :

೨೨. ಕಂಪನಿಯ ಜೊತೆ ಹೆಚ್ಚಾಗಿ ಯಾವ ಯಾವ ಬೇಡಿಕೆಗಾಗಿ :

ನಿಮ್ಮ ಚಳುವಳಿ ನಡೆಯುತ್ತದೆ.

೨೩. ಕಾರ್ಮಿಕರ ಇಂದಿನ ಸ್ಥಿತಿ ಉತ್ತಮವಾಗಿದೆಯೇ? : ಉತ್ತಮವಾಗಿದೆ.

*ಉತ್ತಮವಾಗಿದ್ದರೆ - ಹೇಗೆ? ಉತ್ತಮವಾಗಿದೆ

*ಇಲ್ಲವಾದರೆ - ಏಕೆ?

೨೪. ಅಪಘಾತ ಹಾಗೂ ಕೆಲಸದ ವೇಳೆ ಮರಣ ಹೊಂದಿದರೆ ಅಂತಹ ಕಾರ್ಮಿಕರಿಗೆ ಉತ್ತಮ ಸೌಲಭ್ಯವಿದೆಯೇ

*ಇದ್ದರೆ - ಹೇಗೆ?. ಇದೆ

*ಇಲ್ಲ - ಏಕೆ?

೨೫. ರಾಜಕೀಯದೊಂದಿಗೆ ನಿಮ್ಮ ಕಾರ್ಮಿಕ ಸಂಘ ಗುರುತಿಸಿಕೊಂಡಿದೆಯೇ

*ಏಕೆ?

*ಹೇಗೆ?

೨೬. ಸ್ಥಳೀಯವಾಗಿ ಮತ ಚಲಾಯಿಸುವ ಹಕ್ಕು ಇದೆಯೇ? : ಇದೆ.

೨೭. ವಾಚನಾಲಯ ಮತ್ತು ಗ್ರಂಥಾಲಯದ ಸೌಲಭ್ಯ ಇದೆಯೇ? : ಇದೆ.

೨೮. ಮನೋರಂಜನೆಗಾಗಿ ಯಾವ ಕ್ಷೇತ್ರ ಆಯ್ಕೆ ಮಾಡಿಕೊಂಡಿದ್ದೀರಿ. : ಟಿ.ವಿ.ನೋಡುತ್ತೇನೆ.

೨೯. ಸ್ತ್ರೀ ಕಾರ್ಮಿಕರಿಗೆ ವಿಶ್ರಾಂತಿ ಕೊಠಡಿ ಶೌಚಾಲಯ ವ್ಯವಸ್ಥೆ : ಇದೆ.

ಮಾಡಿಕೊಡಲಾಗಿದೆಯೇ?

೩೦. ರಾಷ್ಟ್ರೀಯ ಹಬ್ಬಗಳ ಆಚರಣೆ : ಅಂಬೇಡ್ಕರ್ ಜಯಂತಿ, ಬಸವ ಜಯಂತಿ, ಗಾಂಧೀ ಜಯಂತಿ, ಮೇಡೆ, ಮಹಿಳಾ ದಿನಾಚಾರಣೆ ಆಚರಿಸುತ್ತಿದ್ದೇವೆ.

೩೧. ಇಂಡೋಫಿಲ್ ಸಮಸ್ಯೆ : ಇದೆ

೩೨. ವ್ಯಕ್ತಿಯ ವ್ಯಕ್ತಿತ್ವ ನಿರ್ಮಾಣಕ್ಕೆ ಕಂಪನಿಯು ಸಂಪೂರ್ಣ ಹೊಣೆ ಹೊತ್ತಿದೆಯೇ :

೩೩. ರಜೆಯನ್ನು ನೀಡುವಾಗ ಮಾಲಿಕರ ಪ್ರತಿಕ್ರಿಯೆ ಯಾವ ರೀತಿಯಾಗಿರುತ್ತದೆ :

ಸಂಶೋಧಕರು

ಸಂದರ್ಶನಕಾರರು

ವಿಜಯಲಕ್ಷ್ಮೀ

ಕನ್ನಡ ವಿಶ್ವವಿದ್ಯಾಲಯ, ಹಂಪಿ

ವಿದ್ಯಾರಣ್ಯ- ೫೮೩೨೭೬, ತಾಲೂಕು: ಹೊಸಪೇಟೆ, ಜಿಲ್ಲೆ: ಬಳ್ಳಾರಿ.

ಹಟ್ಟಿಚಿನ್ನದ ಗಣಿ: ಕಾರ್ಮಿಕರ ಕೆಳಸ್ತರದ ಅಧ್ಯಯನ

(ಸಾಮಾಜಿಕ, ಆರ್ಥಿಕ ಹಾಗೂ ಪ್ರಚಲಿತ ನೆಲೆಯಲ್ಲಿ)

ಎಂ.ಫಿಲ್. ಅಧ್ಯಯನಕ್ಕಾಗಿ ಮಾಡಿಕೊಳ್ಳಲಾದ ಪ್ರಶ್ನಾವಳಿಗಳು.

ದಿನಾಂಕ:............

೧. ಹೆಸರು : ಬಿ.ಮಾನಪ್ಪ

೨. ವಯಸ್ಸು : ೪೬

೩. ಕೆಲಸ : ಗುಮಾಸ್ತ ದರ್ಜೆ

೪. ವೇತನ : ೮೫೦೦

೫. ಜಾತಿ : ಹಿಂದೂ ಉಪ್ಪಾರ

೬. ವೈವಾಹಿಕ ಸಂಬಂಧ : ಸುಖಕರ

೭. ಮಕ್ಕಳ ಸಂಖ್ಯೆ : ಮೂರು ಜನ

೮. ಕುಟುಂಬ ಯೋಜನೆ : ಗಿಆಗಿದೆ.

೯. ಮಕ್ಕಳ ಶಿಕ್ಷಣ : ದ್ವಿತೀಯ ಪಿ.ಯು.ಸಿ. ವಿಜ್ಞಾನ

೧೦. ಮಾಲಿಕ ಮತ್ತು ಕಾರ್ಮಿಕ ಸಂಬಂಧ : ಉತ್ತಮ

೧೧. ಬೋನಸ್ ಸರಿಯಾದ ಸಮಯಕ್ಕೆ ತಲುಪತ್ತದೆಯೇ : ಸರಿಯಾದ ಸಮಯಕ್ಕೆ ತಲುಪಿದೆ.

೧೨. ಸಂಘುಸಂಸ್ಥೆಗಳ ಪಾತ್ರ : ಉತ್ತಮವಾಗಿದೆ.

೧೩. ಮುಷ್ಕರದಲ್ಲಿ ಪಾಲ್ಗೊಂಡ ಬಗ್ಗೆ : ಮುಷ್ಕರ ಆಗಿರುವುದಿಲ್ಲ.

೧೪. ಆರೋಗ್ಯದ ಬಗ್ಗೆ : ಆರೋಗ್ಯವಾಗಿದ್ದೇನೆ.

೧೫. ಏಡ್ಸ್ ಜಾಗೃತಿ ಶಿಬಿರದಲ್ಲಿ ಪಾಲ್ಗೊಂಡು ಪ್ರಯೋಜನೆ :
ಹಳ್ಳಿಗಳಲ್ಲಿ ಪ್ರಚಾರ ಮಾಡಲಾಯಿತು. ಏಡ್ಸ್ ತಿಳುವಳಿಕೆ ಇದೆ.

೧೬. ಕೆಲಸಕ್ಕೆ ಸರಿಯಾದ ತರಬೇತಿ ನೀಡಲಾಗಿದೆಯೇ : ನೀಡಲಾಗಿದೆ.

೧೭. ನೀವು ಖಾಯಂ ನೌಕರರೇ, ಕ್ರೋಢೀಕೃತ ನೌಕರರೇ ಅಥವಾ : ಖಾಯಂ ನೌಕರರು
ದಿನಗೂಲಿ ನೌಕರರೇ

೧೮. ಕಂಪನಿಯಿಂದಾಗಿ ನಿಮ್ಮ ಜೀವನ ಕ್ರಮವು ಸುಧಾರಿಸಿದೆಯೇ : ಸುಧಾರಿಸಿದೆ.
ಶೈಕ್ಷಣಿಕ ಸಾಮಾಜಿಕ ಆರ್ಥಿಕ ದೃಷ್ಟಿಯಿಂದ

೧೯. ಕಾರ್ಮಿಕ ಸಂಘುದೊಡನೆ ನಿಮ್ಮ ಸಂಬಂಧ ಉತ್ತಮವಾಗಿದೆಯೇ : ಉತ್ತಮವಾಗಿದೆ.

೨೦. ಕಾರ್ಮಿಕ ಸಂಘುದಿಂದ ಸಾಮಾಜಿಕ ಪ್ರಜ್ಞೆಯನ್ನು ಮೂಡಿಸುವ

ಕೆಲಸ ಮಾಡಲಾಗಿದೆಯೇ ಕ್ರೀಡೆ, ಸಾಂಸ್ಕೃತಿಕ ಇತರ ದೃಷ್ಟಿಯಿಂದ :

೨೧. ಕಾರ್ಮಿಕ ಸಂಘದ ಕೆಲಸ ಕಾರ್ಯಗಳಲ್ಲಿ ಮಹಿಳೆಯರು ಸಂಪೂರ್ಣವಾಗಿ ತೊಡಗಿರುತ್ತಾರೆಯೇ : ಹೌದು

*ಹೌದಾಗಿದ್ದರೆ - ಹೇಗೆ? ಭಯದಿಂದ ನಾಚಿಕೆಯಿಂದ, ಸಂಘಗಳಲ್ಲಿ ಹೆಚ್ಚಾಗಿ ಭಾಗವಹಿಸುವುದಿಲ್ಲ.

*ಇಲ್ಲವಾದರೆ - ಏಕೆ?

೨೨. ಕಂಪನಿಯ ಜೊತೆ ಹೆಚ್ಚಾಗಿ ಯಾವ ಯಾವ ಬೇಡಿಕೆಗಾಗಿ : ವೇತನಕ್ಕಾಗಿ

ನಿಮ್ಮ ಚಳುವಳಿ ನಡೆಯುತ್ತದೆ.

೨೩. ಕಾರ್ಮಿಕರ ಇಂದಿನ ಸ್ಥಿತಿ ಉತ್ತಮವಾಗಿದೆಯೇ? : ಪರವಾಗಿಲ್ಲ

*ಉತ್ತಮವಾಗಿದ್ದರೆ - ಹೇಗೆ? ಉತ್ತಮವಾಗಿದೆ

*ಇಲ್ಲವಾದರೆ - ಏಕೆ?

೨೪. ಅಪಘಾತ ಹಾಗೂ ಕೆಲಸದ ವೇಳೆ ಮರಣ ಹೊಂದಿದರೆ ಅಂತಹ ಕಾರ್ಮಿಕರಿಗೆ ಉತ್ತಮ ಸೌಲಭ್ಯವಿದೆಯೇ

*ಇದ್ದರೆ - ಹೇಗೆ? ಒಂದು ಲಕ್ಷಕ್ಕೂ ಪರಿಹಾರ, ಮಕ್ಕಳಿಗೆ ನೌಕರಿ, ಪತ್ನಿಗೆ ಪೆನ್ಶನ್ ಇತ್ಯಾದಿ ಸೌಲಭ್ಯಗಳು ದೊರೆಯುತ್ತವೆ.

*ಇಲ್ಲ - ಏಕೆ? ಇದೆ. ಮೃತನ ಅವಲಂಬಿತರಿಗೆ ಕಂಪನಿಯಲ್ಲಿ ಕೆಲಸ ಕೊಡಲಾಗುವುದು

೨೫. ರಾಜಕೀಯದೊಂದಿಗೆ ನಿಮ್ಮ ಕಾರ್ಮಿಕ ಸಂಘ ಗುರುತಿಸಿಕೊಂಡಿದೆಯೇ ಇಲ್ಲ.

*ಏಕೆ? ಸಂಸ್ಥೆ ಸರ್ಕಾರದ ಅಧೀನದಲ್ಲಿರುವುದರಿಂದ ರಾಜಕೀಯ ಅನಿವಾರ್ಯ

*ಹೇಗೆ?

೨೬. ಸ್ಥಳೀಯವಾಗಿ ಮತ ಚಲಾಯಿಸುವ ಹಕ್ಕು ಇದೆಯೇ? : ಇದೆ.

೨೭. ವಾಚನಾಲಯ ಮತ್ತು ಗ್ರಂಥಾಲಯದ ಸೌಲಭ್ಯ ಇದೆಯೇ? : ಇದೆ.

೨೮. ಮನೋರಂಜನೆಗಾಗಿ ಯಾವ ಕ್ಷೇತ್ರ ಆಯ್ಕೆ ಮಾಡಿಕೊಂಡಿದ್ದೀರಿ. : ಕ್ರೀಡೆ

೨೯. ಸ್ತ್ರೀ ಕಾರ್ಮಿಕರಿಗೆ ವಿಶ್ರಾಂತಿ ಕೊಠಡಿ ಶೌಚಾಲಯ ವ್ಯವಸ್ಥೆ : ಇಲ್ಲ

ಮಾಡಿಕೊಡಲಾಗಿದೆಯೇ?

೩೦. ರಾಷ್ಟ್ರೀಯ ಹಬ್ಬಗಳ ಆಚರಣೆ : ಮಾಡಲಾಗುತ್ತದೆ.

೩೧. ಇಂಡೋಫಿಲ್ ಸಮಸ್ಯೆ : ತಿಳಿದಿಲ್ಲ

೩೨. ವ್ಯಕ್ತಿಯ ವ್ಯಕ್ತಿತ್ವ ನಿರ್ಮಾಣಕ್ಕೆ ಕಂಪನಿಯು ಸಂಪೂರ್ಣ ಹೊಣೆ ಹೊತ್ತಿದೆಯೇ : ಹೊಣೆ ಹೊತ್ತಿದೆ.

೩೩. ರಜೆಯನ್ನು ನೀಡುವಾಗ ಮಾಲಿಕರ ಪ್ರತಿಕ್ರಿಯೆ ಯಾವ ರೀತಿಯಾಗಿರುತ್ತದೆ : ನಮ್ಮ ಕರ್ತವ್ಯ, ಸಂಸ್ಥೆ, ಉಳಿದರೆ ನಾನು ಉಳಿಯುತ್ತೇನೆ. ಅಂತಹ ಸಂದರ್ಭದಲ್ಲಿ ಅಧಿಕಾರಿಗಳ ಮಾತಿನಂತೆ ನಡೆಯಬೇಕಾಗುತ್ತದೆ. ಅದಕ್ಕೆ ಹೊಂದಿಕೊಂಡಂತೆ ನಮ್ಮ ವರ್ತನೆ ಇರಲೇಬೇಕು.

ಸಂಶೋಧಕರು

ಸಂದರ್ಶನಕಾರರು

ವಿಜಯಲಕ್ಷ್ಮೀ

ಕನ್ನಡ ವಿಶ್ವವಿದ್ಯಾಲಯ, ಹಂಪಿ

ವಿದ್ಯಾರಣ್ಯ- ೫೮೩೨೭೬, ತಾಲೂಕು: ಹೊಸಪೇಟೆ, ಜಿಲ್ಲೆ: ಬಳ್ಳಾರಿ.

ಹಟ್ಟಿಚಿನ್ನದ ಗಣಿ: ಕಾರ್ಮಿಕರ ಕೆಳಸ್ತರದ ಅಧ್ಯಯನ

(ಸಾಮಾಜಿಕ, ಆರ್ಥಿಕ ಹಾಗೂ ಪ್ರಚಲಿತ ನೆಲೆಯಲ್ಲಿ)

ಎಂ.ಫಿಲ್. ಅಧ್ಯಯನಕ್ಕಾಗಿ ಮಾಡಿಕೊಳ್ಳಲಾದ ಪ್ರಶ್ನಾವಳಿಗಳು.

ದಿನಾಂಕ:------------

೧. ಹೆಸರು : ಹುಸೇನ್ ಸಾಬ್

೨. ವಯಸ್ಸು : ೪೫

೩. ಕೆಲಸ : ಬಂಕಮಣ್ಣು ಎತ್ತುವುದು

೪. ವೇತನ : ೪೦೦೦

೫. ಜಾತಿ : ಮುಸ್ಲಿಂ

೬. ವೈವಾಹಿಕ ಸಂಬಂಧ :

೭. ಮಕ್ಕಳ ಸಂಖ್ಯೆ : ೧೬ ಜನ

೮. ಕುಟುಂಬ ಯೋಜನೆ :

೯. ಮಕ್ಕಳ ಶಿಕ್ಷಣ :

೧೦. ಮಾಲಿಕ ಮತ್ತು ಕಾರ್ಮಿಕ ಸಂಬಂಧ :

೧೧. ಬೋನಸ್ ಸರಿಯಾದ ಸಮಯಕ್ಕೆ ತಲುಪತ್ತದೆಯೇ : ಇಲ್ಲ

೧೨. ಸಂಘಸಂಸ್ಥೆಗಳ ಪಾತ್ರ :

೧೩. ಮುಷ್ಕರದಲ್ಲಿ ಪಾಲ್ಗೊಂಡ ಬಗ್ಗೆ : ಇಲ್ಲ

೧೪. ಆರೋಗ್ಯದ ಬಗ್ಗೆ :

೧೫. ಏಡ್ಸ್ ಜಾಗೃತಿ ಶಿಬಿರದಲ್ಲಿ ಪಾಲ್ಗೊಂಡು ಪ್ರಯೋಜನೆ : ಇಲ್ಲ

೧೬. ಕೆಲಸಕ್ಕೆ ಸರಿಯಾದ ತರಬೇತಿ ನೀಡಲಾಗಿದೆಯೇ : ಹೌದು

೧೭. ನೀವು ಖಾಯಂ ನೌಕರರೇ, ಕ್ರೋಢೀಕೃತ ನೌಕರರೇ ಅಥವಾ : ಖಾಯಂ ನೌಕರರು
ದಿನಗೂಲಿ ನೌಕರರೇ

೧೮. ಕಂಪನಿಯಿಂದಾಗಿ ನಿಮ್ಮ ಜೀವನ ಕ್ರಮವು ಸುಧಾರಿಸಿದೆಯೇ : ಇಲ್ಲ
ಶೈಕ್ಷಣಿಕ ಸಾಮಾಜಿಕ ಆರ್ಥಿಕ ದೃಷ್ಟಿಯಿಂದ

೧೯. ಕಾರ್ಮಿಕ ಸಂಘದೊಡನೆ ನಿಮ್ಮ ಸಂಬಂಧ ಉತ್ತಮವಾಗಿದೆಯೇ : ಉತ್ತಮ

೨೦. ಕಾರ್ಮಿಕ ಸಂಘದಿಂದ ಸಾಮಾಜಿಕ ಪ್ರಜ್ಞೆಯನ್ನು ಮೂಡಿಸುವ
ಕೆಲಸ ಮಾಡಲಾಗಿದೆಯೇ ಕ್ರೀಡೆ, ಸಾಂಸ್ಕೃತಿಕ ಇತರ ದೃಷ್ಟಿಯಿಂದ : ಗೊತ್ತಿಲ್ಲ

೨೧. ಕಾರ್ಮಿಕ ಸಂಘದ ಕೆಲಸ ಕಾರ್ಯಗಳಲ್ಲಿ ಮಹಿಳೆಯರು ಸಂಪೂರ್ಣವಾಗಿ ತೊಡಗಿರುತ್ತಾರೆಯೇ : ಇಲ್ಲ

*ಹೌದಾಗಿದ್ದರೆ - ಹೇಗೆ? ಭಯದಿಂದ ನಾಚಿಕೆಯಿಂದ, ಸಂಘಗಳಲ್ಲಿ ಹೆಚ್ಚಾಗಿ ಭಾಗವಹಿಸುವುದಿಲ್ಲ.

*ಇಲ್ಲವಾದರೆ - ಏಕೆ?

೨೨. ಕಂಪನಿಯ ಜೊತೆ ಹೆಚ್ಚಾಗಿ ಯಾವ ಯಾವ ಬೇಡಿಕೆಗಾಗಿ : ಗೊತ್ತಿಲ್ಲ

ನಿಮ್ಮ ಚಳುವಳಿ ನಡೆಯುತ್ತದೆ.

೨೩. ಕಾರ್ಮಿಕರ ಇಂದಿನ ಸ್ಥಿತಿ ಉತ್ತಮವಾಗಿದೆಯೇ? :

*ಉತ್ತಮವಾಗಿದ್ದರೆ - ಹೇಗೆ? ಉತ್ತಮವಾಗಿದೆ

*ಇಲ್ಲವಾದರೆ - ಏಕೆ? ಸ್ವಲ್ಪ ಉತ್ತಮ

೨೪. ಅಪಘಾತ ಹಾಗೂ ಕೆಲಸದ ವೇಳೆ ಮರಣ ಹೊಂದಿದರೆ ಅಂತಹ ಕಾರ್ಮಿಕರಿಗೆ ಉತ್ತಮ ಸೌಲಭ್ಯವಿದೆಯೇ

*ಇದ್ದರೆ - ಹೇಗೆ? ಹೌದು

*ಇಲ್ಲ - ಏಕೆ?

೨೫. ರಾಜಕೀಯದೊಂದಿಗೆ ನಿಮ್ಮ ಕಾರ್ಮಿಕ ಸಂಘ ಗುರುತಿಸಿಕೊಂಡಿದೆಯೇ

*ಏಕೆ?

*ಹೇಗೆ?

೨೬. ಸ್ಥಳೀಯವಾಗಿ ಮತ ಚಲಾಯಿಸುವ ಹಕ್ಕು ಇದೆಯೇ? : ಇದೆ.

೨೭. ವಾಚನಾಲಯ ಮತ್ತು ಗ್ರಂಥಾಲಯದ ಸೌಲಭ್ಯ ಇದೆಯೇ? : ಇದೆ.

೨೮. ಮನೋರಂಜನೆಗಾಗಿ ಯಾವ ಕ್ಷೇತ್ರ ಆಯ್ಕೆ ಮಾಡಿಕೊಂಡಿದ್ದೀರಿ. :

೨೯. ಸ್ತ್ರೀ ಕಾರ್ಮಿಕರಿಗೆ ವಿಶ್ರಾಂತಿ ಕೊಠಡಿ ಶೌಚಾಲಯ ವ್ಯವಸ್ಥೆ : ಇದೆ.

ಮಾಡಿಕೊಡಲಾಗಿದೆಯೇ?

೩೦. ರಾಷ್ಟ್ರೀಯ ಹಬ್ಬಗಳ ಆಚರಣೆ : ಮಾಡಲಾಗುತ್ತದೆ.

೩೧. ಇಂಡೋಫಿಲ್ ಸಮಸ್ಯೆ :

೩೨. ವ್ಯಕ್ತಿಯ ವ್ಯಕ್ತಿತ್ವ ನಿರ್ಮಾಣಕ್ಕೆ ಕಂಪನಿಯು ಸಂಪೂರ್ಣ ಹೊಣೆ ಹೊತ್ತಿದೆಯೇ :

೩೩. ರಜೆಯನ್ನು ನೀಡುವಾಗ ಮಾಲಿಕರ ಪ್ರತಿಕ್ರಿಯೆ ಯಾವ ರೀತಿಯಾಗಿರುತ್ತದೆ : ನೀಡುತ್ತಾರೆ.

ಸಂಶೋಧಕರು

ಸಂದರ್ಶನಕಾರರು

ವಿಜಯಲಕ್ಷ್ಮೀ

ಕನ್ನಡ ವಿಶ್ವವಿದ್ಯಾಲಯ, ಹಂಪಿ

ವಿದ್ಯಾರಣ್ಯ- ೫೮೩೨೭೬, ತಾಲೂಕು: ಹೊಸಪೇಟೆ, ಜಿಲ್ಲೆ: ಬಳ್ಳಾರಿ.

ಹಟ್ಟಿಚಿನ್ನದ ಗಣಿ: ಕಾರ್ಮಿಕರ ಕೆಳಸ್ತರದ ಅಧ್ಯಯನ

(ಸಾಮಾಜಿಕ, ಆರ್ಥಿಕ ಹಾಗೂ ಪ್ರಚಲಿತ ನೆಲೆಯಲ್ಲಿ)

ಎಂ.ಫಿಲ್. ಅಧ್ಯಯನಕ್ಕಾಗಿ ಮಾಡಿಕೊಳ್ಳಲಾದ ಪ್ರಶ್ನಾವಳಿಗಳು.

ದಿನಾಂಕ:____________

೧. ಹೆಸರು : ಬಸಪ್ಪ

೨. ವಯಸ್ಸು : ೩೫

೩. ಕೆಲಸ : ರಂಧ್ರ ಕೊರೆಯುವ ಕೆಲಸ

೪. ವೇತನ : ೫೯೦೦

೫. ಜಾತಿ : ಮಾದಿಗ ಜನಾಂಗ ಎಸ್.ಸಿ.

೬. ವೈವಾಹಿಕ ಸಂಬಂಧ : ಸುಖವಾಗಿದೆ.

೭. ಮಕ್ಕಳ ಸಂಖ್ಯೆ : ನಾಲ್ಕು ಜನ

೮. ಕುಟುಂಬ ಯೋಜನೆ : ಮಾಡಿಸಿದೆ

೯. ಮಕ್ಕಳ ಶಿಕ್ಷಣ : ೩ ಮತ್ತು ೪ ನೇ ತರಗತಿ

೧೦. ಮಾಲಿಕ ಮತ್ತು ಕಾರ್ಮಿಕ ಸಂಬಂಧ :

೧೧. ಬೋನಸ್ ಸರಿಯಾದ ಸಮಯಕ್ಕೆ ತಲುಪತ್ತದೆಯೇ : ತಲುಪುತ್ತದೆ.

೧೨. ಸಂಘುಸಂಸ್ಥೆಗಳ ಪಾತ್ರ : ಸಿ.ಐ.ಟಿ.ಯು.ಕಾರ್ಮಿಕ ಸಂಘುದ ಕಾರ್ಯಕಾರಿಸಮಿತಿಯಸದಸ್ಯ

೧೩. ಮುಷ್ಕರದಲ್ಲಿ ಪಾಲ್ಗೊಂಡ ಬಗ್ಗೆ : ಇಲ್ಲ

೧೪. ಆರೋಗ್ಯದ ಬಗ್ಗೆ : ಆರೋಗ್ಯವಾಗಿದ್ದೇವೆ.

೧೫. ಏಡ್ಸ್ ಜಾಗೃತಿ ಶಿಬಿರದಲ್ಲಿ ಪಾಲ್ಗೊಂಡು ಪ್ರಯೋಜನೆ : ಹಳ್ಳಿಗಳಲ್ಲಿ ಪ್ರಚಾರ ಮಾಡಲಾಯಿತು. ಇಲ್ಲ

೧೬. ಕೆಲಸಕ್ಕೆ ಸರಿಯಾದ ತರಬೇತಿ ನೀಡಲಾಗಿದೆಯೇ : ನೀಡಲಾಗಿದೆ.

೧೭. ನೀವು ಖಾಯಂ ನೌಕರರೇ, ಕ್ರೋಢೀಕೃತ ನೌಕರರೇ ಅಥವಾ ದಿನಗೂಲಿ ನೌಕರರೇ : ನಾವು ಖಾಯಂ ನೌಕರರು

೧೮. ಕಂಪನಿಯಿಂದಾಗಿ ನಿಮ್ಮ ಜೀವನ ಕ್ರಮವು ಸುಧಾರಿಸಿದೆಯೇ : ಶೈಕ್ಷಣಿಕ ಸಾಮಾಜಿಕ ಆರ್ಥಿಕ ದೃಷ್ಟಿಯಿಂದ — ಕಂಪನಿಯು ನಮ್ಮ ಜೀವನದ ಶೈಕ್ಷಣಿಕ ಹಾಗೂ ಸಾಮಾಜಿಕ ಸುಧಾರಿಸಿದೆ ಆದರೆ ಆರ್ಥಿಕದಲ್ಲಿ ಇಲ್ಲ

೧೯. ಕಾರ್ಮಿಕ ಸಂಘುದೊಡನೆ ನಿಮ್ಮ ಸಂಬಂಧ ಉತ್ತಮವಾಗಿದೆಯೇ : ಉತ್ತಮವಾಗಿದೆ.

೨೦. ಕಾರ್ಮಿಕ ಸಂಘದಿಂದ ಸಾಮಾಜಿಕ ಪ್ರಜ್ಞೆಯನ್ನು ಮೂಡಿಸುವ

ಕೆಲಸ ಮಾಡಲಾಗಿದೆಯೇ ಕ್ರೀಡೆ, ಸಾಂಸ್ಕೃತಿಕ ಇತರ ದೃಷ್ಟಿಯಿಂದ : ಕೈಗೊಳ್ಳಲಾಗಿದೆ ಕ್ರೀಡೆಯಲ್ಲಿ ಸಂಸ್ಕೃತಿಯಲ್ಲಿ

೨೧. ಕಾರ್ಮಿಕ ಸಂಘದ ಕೆಲಸ ಕಾರ್ಯಗಳಲ್ಲಿ ಮಹಿಳೆಯರು ಸಂಪೂರ್ಣವಾಗಿ ತೊಡಗಿರುತ್ತಾರೆಯೇ : ಇಲ್ಲ

*ಹೌದಾಗಿದ್ದರೆ - ಹೇಗೆ? ಅವರಿಗೆ ಕೆಲಸದಲ್ಲಿ ವೇಳೆಗೆ ಸರಿಯಾಗಿ ಹಾಜರಾಗಬೇಕಾಗುತ್ತದೆ. ಮತ್ತು ಮನೆ ಕೆಲಸವು ಸಹ ಅವರಾದಾಗಿರುತ್ತದೆ. ಆದುದರಿಂದ ಅವರಿಗೆ ಕಾರ್ಮಿಕ ಸಂಘದಲ್ಲಿ ತೊಡಗಲು ಆಗುವುದಿಲ್ಲ.

*ಇಲ್ಲವಾದರೆ - ಏಕೆ?

೨೨. ಕಂಪನಿಯ ಜೊತೆ ಹೆಚ್ಚಾಗಿ ಯಾವ ಯಾವ ಬೇಡಿಕೆಗಾಗಿ : ಕಂಪನಿ ಅಂದರೆ ೪೦೦೦ ಸಾವಿರ ಕಾರ್ಮಿಕರು ಕೆಲಸ ನಿಮ್ಮ ಚಳುವಳಿ ನಡೆಯುತ್ತದೆ. ಮಾಡುತ್ತಿರುತ್ತಾರೆ ಅವರ ಒಂದಲ್ಲ ಒಂದು ಸಮಸ್ಯೆ ಇದ್ದೇ ಇರುತ್ತದೆ. ಆದುದರಿಂದ ನಾವು ಚಳುವಳಿ ಮಾಡುತ್ತೇವೆ.

೨೩. ಕಾರ್ಮಿಕರ ಇಂದಿನ ಸ್ಥಿತಿ ಉತ್ತಮವಾಗಿದೆಯೇ? :

*ಉತ್ತಮವಾಗಿದ್ದರೆ - ಹೇಗೆ?

*ಇಲ್ಲವಾದರೆ - ಏಕೆ? ಉತ್ತಮವಾಗಿದೆ. ಏಕೆಂದರೆ ಕಂಪನಿಯು ಉತ್ತಮವಾದ ಉತ್ಪಾಧನೆ ಮಾಡಿ ಕಂಪನಿಯ ಕಾರ್ಮಿಕರು ಹಾಗೂ ಕಂಪನಿಯನ್ನು ಉಳಿಸುವ ನಿಟ್ಟಿನಲ್ಲಿ ಕಾರ್ಮಿಕರು ಶ್ರಮಪಡುತ್ತಾರೆಆದುದರಿಂದ ಉತ್ತಮವಾಗಿದೆ.

೨೪. ಅಪಘಾತ ಹಾಗೂ ಕೆಲಸದ ವೇಳೆ ಮರಣ ಹೊಂದಿದರೆ ಅಂತಹ ಕಾರ್ಮಿಕರಿಗೆ ಉತ್ತಮ ಸೌಲಭ್ಯವಿದೆಯೇ

*ಇದ್ದರೆ - ಹೇಗೆ? ಒಂದು ಲಕ್ಷಕ್ಕೂ ಪರಿಹಾರ, ಮಕ್ಕಳಿಗೆ ನೌಕರಿ, ಪತ್ನಿಗೆ ಪೆನ್ಶನ್ ಇತ್ಯಾದಿ ಸೌಲಭ್ಯಗಳು ದೊರೆಯುತ್ತವೆ.

*ಇಲ್ಲ - ಏಕೆ? ಇದೆ. ಕಂಪನಿಯಲ್ಲಿ ಕಾರ್ಮಿಕನು ಮರಣ ಹೊಂದಿದರೇ ಅವರಿಗೆ ಸರಿಯಾದ ಸೌಲಭ್ಯಸಿಗಲು ಕಾರ್ಮಿಕನ ಸಂಬಂಧಿಕರು ಆಡಳಿತ ವರ್ಗಕ್ಕೆ ಹೋಗಿ ಅವರ ಜೊತೆ ಚರ್ಚೆ ಮಾಡಿ ಕಾರ್ಮಿಕ ನಾಯಕರು ಅವರಿಗೆ ಸೌಲಭ್ಯ ಸಿಗಲು ಪ್ರಯತ್ನ ಮಾಡಿಕೊಡಿಸುತ್ತಾರೆ.

೨೫. ರಾಜಕೀಯದೊಂದಿಗೆ ನಿಮ್ಮ ಕಾರ್ಮಿಕ ಸಂಘ ಗುರುತಿಸಿಕೊಂಡಿದೆಯೇ

*ಏಕೆ?

